ಕನ್ನಡ ವಿಶ್ವವಿದ್ಯಾನಿಲಯ

ಕನ್ನಡ ಎಂ.ಫಿಲ್ ಪದವಿಯ ಭಾಗವಾಗಿ ಸಾದರಪಡಿಸಿದ ನಿಬಂಧ

'ಊರುಕೇರಿ' ಮತ್ತು 'ಮಣಿಗಾರ' ತೌಲನಿಕ ಅಧ್ಯಯನ

ಮಾರ್ಗದರ್ಶಕರು
ಡಾ.ಕೆ.ಟಿ. ಕಂಠೇಗೌಡ
ಕನ್ನಡ ಅಧ್ಯಾಪಕರು ಮತ್ತು ಮುಖ್ಯಸ್ಥರು
ವಿ.ವಿ. ಲಲಿತ ಕಲೆಗಳ ಕಾಲೇಜು
ಮಾನಸಗಂಗೋತ್ರಿ
ಮೈಸೂರು.

ನಿಬಂಧಕರು
ಪೂರ್ಣಿಮ .ಎಸ್.
ಎಂ.ಫಿಲ್. ವಿದ್ಯಾರ್ಥಿನಿ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ
ಮೈಸೂರು

ಕನ್ನಡ ವಿಶ್ವವಿದ್ಯಾನಿಲಯ

ಕನ್ನಡ ಎಂ.ಫಿಲ್ ಪದವಿಯ ಭಾಗವಾಗಿ ಸಾದರಪಡಿಸಿದ ನಿಬಂಧ

'ಊರುಕೇರಿ' ಮತ್ತು 'ಮಣಿಗಾರ' ತೌಲನಿಕ ಅಧ್ಯಯನ

ಮಾರ್ಗದರ್ಶಕರು

ಡಾ.ಕೆ.ಟಿ. ಕೆಂಪೇಗೌಡ

ಕನ್ನಡ ಅಧ್ಯಾಪಕರು ಮತ್ತು ಮುಖ್ಯಸ್ಥರು

ವಿ.ವಿ. ಲಲಿತ ಕಲೆಗಳ ಕಾಲೇಜು

ಮಾನಸಗಂಗೋತ್ರಿ

ಮೈಸೂರು.

ನಿಬಂಧಕರು

ಪೂರ್ಣಿಮ .ಎಸ್.

ಎಂ.ಫಿಲ್. ವಿದ್ಯಾರ್ಥಿನಿ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ

ಮೈಸೂರು

ದೃಢೀಕರಣ ಪತ್ರ

೨೦೦೭-೦೮ನೇ ಸಾಲಿನ ಕ್ರ.ಸಂ. KVTM/00153ರ **ಪೂರ್ಣಿಮ.ಎಸ್.** ಎಂ.ಫಿಲ್., ವಿದ್ಯಾರ್ಥಿನಿಯು ಈ ಪರೀಕ್ಷೆಯ ಅಂಗವಾಗಿ **'ಊರುಕೇರಿ' ಮತ್ತು 'ಮಣೆಗಾರ' ತೌಲನಿಕ ಅಧ್ಯಯನ** ಎಂಬ ವಿಷಯವನ್ನು ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿದ್ದಾರೆ. ಇದನ್ನು ಇವರು ಈ ಮೊದಲು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ.ಟಿ.ಕೆ. ಕೆಂಪೇಗೌಡ

ಕನ್ನಡ ಅಧ್ಯಾಪಕರು ಮತ್ತು ಮುಖ್ಯಸ್ಥರು

ವಿ.ವಿ.ಲಲಿತ ಕಲೆಗಳ ಕಾಲೇಜು

ಮಾನಸಗಂಗೋತ್ರಿ ಮೈಸೂರು

ಮೈಸೂರು.

ಸ್ಥಳ: ಮೈಸೂರು

ದಿನಾಂಕ: ೨೨-೦೮-೨೦೦೮

ಪ್ರಮಾಣ ಪತ್ರ

'ಊರುಕೇರಿ' ಮತ್ತು 'ಮಣೆಗಾರ' ತೌಲನಿಕ ಅಧ್ಯಯನ ಎಂಬ ವಿಷಯದ ಸಂಶೋಧನ ನಿಬಂಧವನ್ನು ಕನ್ನಡ ಎಂ.ಫಿಲ್, ಪದವಿಯ **ಪೂರ್ಣಿಮ ಎಸ್**. ಕ್ರ.ಸಂ. KVTM/00153ರ ವಿದ್ಯಾರ್ಥಿನಿಯಾದ ನಾನು ೨೦೦೭-೦೮ನೇ ಸಾಲಿನ ಪರೀಕ್ಷೆಗಾಗಿ ಮಾರ್ಗದರ್ಶಕರಾದ **ಡಾ.ಟಿ.ಕೆ.ಕೆಂಪೇಗೌಡ,** ಕನ್ನಡ ಅಧ್ಯಾಪಕರು ಮತ್ತು ಮುಖ್ಯಸ್ಥರು, ವಿ.ವಿ. ಲಲಿತ ಕಲೆಗಳ ಕಾಲೇಜು, ಮಾನಸಗಂಗೋತ್ರಿ, ಮೈಸೂರು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಈ ನಿಬಂಧವನ್ನು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಪ್ರಶಸ್ತಿಗಾಗಿ ಯಾವ ವಿಶ್ವವಿದ್ಯಾನಿಲಯಕ್ಕೂ ಸಲ್ಲಿಸಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಪೂರ್ಣಿಮ. S

ನಿಬಂಧಕಾರರು

ಪೂರ್ಣಿಮ .ಎಸ್.

ಎಂ.ಫಿಲ್., ವಿದ್ಯಾರ್ಥಿನಿ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮಿಪುರಂ

ಮೈಸೂರು.

ಸ್ಥಳ: ಮೈಸೂರು

ದಿನಾಂಕ: ೨೨/೦೭/೨೦೦೮

"ಊರುಕೇರಿ ಮತ್ತು ಮಣೆಗಾರ" ತೌಲನಿಕ ಅಧ್ಯಯನ

ಪರಿವಿಡಿ

೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸಮೃದ್ಧವೂ ವೈವಿಧ್ಯಮಯವೂ ಆಗಿರುವ ಕನ್ನಡ ಸಾಹಿತ್ಯವು ಕಾಲದಿಂದ ಕಾಲಕ್ಕೆ ತನ್ನ ಚಲನಶೀಲತೆಯನ್ನು ತೋರಗೊಡುತ್ತಾ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ತನ್ನ ತನವನ್ನು ಸ್ಥಾಪಿಸಿಕೊಂಡಿದೆ.

ಹೊಸಗನ್ನಡ ಸಾಹಿತ್ಯ ಈಗಾಗಲೇ ಕೆಲವು ಮುಖ್ಯ ಮಜಲುಗಳನ್ನು ದಾಟಿ ಬಂದಿದೆ. ಮುಖ್ಯ ಪ್ರವೃತ್ತಿ ಮತ್ತು ತಾತ್ವಿಕ ಗ್ರಹಿಕೆಗಳಿಗನುಸಾರವಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಇವು ಪರಿಪೂರ್ಣತೆಯತ್ತ ಕೊಂಡೊಯ್ಯುವ ಮಾರ್ಗಸೂಚಿಗಳೂ ಆಗಿವೆ.

ವಾಸ್ತವ ಜಗತ್ತನ್ನು ಯಾವ ಪೂರ್ವಾಗ್ರಹವಿಲ್ಲದೇ ಮುಕ್ತವಾದ ಮನಸ್ಸಿನ ಮೂಲಕ ನೋಡುವ, ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಪ್ರತಿಪಾದಿಸುವ, ಎಲ್ಲ ಬಗೆಯ ಶೋಷಣೆಯ ವಿರುದ್ಧ ಪ್ರತಿಭಟಿಸುವ ಮನೋಭಾವದ ಜನಕ್ಕೆ ಸ್ಫೂರ್ತಿ ನೀಡುವಂಥ ಮಾನವೀಯತೆಯನ್ನು ಮುಖ್ಯ ಕಾಳಜಿ ಹಾಗೂ ಆಶಯವಾಗಿರುವ ಜನೋಪಯೋಗಿ ಸಾಹಿತ್ಯವನ್ನು ರಚಿಸಬೇಕೆಂಬುದು ದಲಿತ ಲೇಖಕರ ಆಶಯ.

ಸಾಹಿತ್ಯದ ಉದ್ದೇಶ ಮತ್ತು ಸ್ವರೂಪಗಳ ಬಗ್ಗೆ ಹಿಂದಿನ ಸಾಹಿತ್ಯ ಪಂಥಗಳಿಗಿಂತ ಇಲ್ಲಿ ಭಿನ್ನವಾಗಿರುವುದು ಕಂಡುಬರುತ್ತದೆ.

೧೯೭೦ರ ದಶಕದಲ್ಲಿ ರೂಪ ಪಡೆದ ದಲಿತ-ಬಂಡಾಯ ಸಾಹಿತ್ಯ ಚಳುವಳಿಯ ಹಿಂದಿನ ನವ್ಯಸಾಹಿತ್ಯದ ಧ್ಯೇಯ ನಿಷ್ಠೆಗಳನ್ನು ಮತ್ತು ರಚನೆಯ ರೀತಿ ನೀತಿಗಳನ್ನು ಪ್ರಶ್ನಿಸಿಕೊಂಡು ಹೊಸದೊಂದು ಆಲೋಚನೆಯ ಗಂಭೀರ ಪ್ರತಿಕ್ರಿಯೆಗಳು ದಲಿತ ಸಾಹಿತ್ಯ ಸಂದರ್ಭದಲ್ಲಿ ರೂಪುಗೊಂಡಿದ್ದು, ಗಮನಾರ್ಹ ವಿಷಯವಾಗಿದೆ.

ದಲಿತ ಸಾಹಿತ್ಯ ಸಮುದಾಯ ಚಳುವಳಿಯ ರೂಪ ಪಡೆದು ತನ್ನ ನೆಲದಲ್ಲಿ ಗಟ್ಟಿಯಾಗಿ ನಿಲ್ಲಲು ಯತ್ನಿಸಿದ್ದು ಸಹ ನೂತನ ಆಗು ಹೋಗುಗಳಿಗೆ ಕಾರಣವಾಯಿತು.

ಭಾರತೀಯ ಸಮಾಜದ ಜಾತಿ ವರ್ಗಗಳ ತಾರತಮ್ಯ, ದಲಿತರ ಶೋಷಣೆ, ಲಿಂಗಾಧಾರಿತ ಅಸಮಾನತೆ, ದಲಿತ ಸಾಹಿತ್ಯ ಸಂದರ್ಭದಲ್ಲಿನ ಸಾಮಾಜಿಕ ರಾಜಕೀಯ ಸ್ಫೂರ್ತಿಗಳು ಇವೇ ಮುಂತಾದ ವಿಷಯಗಳು ಚಳುವಳಿಯ ಮುಖ್ಯ ಧೋರಣೆಯ ಹಿಂದೆ ಪ್ರಭಾವ ಬೀರಿದ ವಿಚಾರಗಳಾಗಿವೆ.

ಅ ಹೊತ್ತಿನ ನಂತರ ೮೦ರ ದಶಕದಲ್ಲಿ ಮರಾಠಿ ಸಾಹಿತ್ಯದ ಆತ್ಮಕತೆಗಳ ಪ್ರೇರಣೆ ಮತ್ತು ಪ್ರಭಾವದಿಂದ ದಲಿತ ಆತ್ಮಕತೆಗಳು ಕನ್ನಡದಲ್ಲಿ ರಚನೆಯಾದವು. ಕನ್ನಡದಲ್ಲಿ

ಆತ್ಮಕತೆಗಳ ಸಾಲಿನಲ್ಲಿ ದಲಿತ ಆತ್ಮಕತೆಗಳು ಅಗತ್ಯವಾದ ರೀತಿಯಲ್ಲಿ ವಿಕಾಸಗೊಂಡು ಬಂದಿವೆ. ಜೀವನದ ಹಲವಾರು ಮುಖಗಳನ್ನು ತನ್ನ ಅನುಭವದ ನೆಲೆಯ ನಿದರ್ಶನಗಳನ್ನಾಗಿ ಕಂಡಿರಿಸಿವೆ.

ತಮ್ಮ ಬದುಕಿನಲ್ಲಿ ಕಂಡು ಅನುಭವಿಸಿದ ಅನುಭವಗಳನ್ನು ಆತ್ಮಕತೆಗಳಲ್ಲಿ ಹೇಳಿಕೊಂಡಿದ್ದಾರೆ. ಆತ್ಮಕತೆಯು ವ್ಯಕ್ತಿಯ ಅನುಭವದ ಜೊತೆಗೆ ಸಮಾಜದ ಸಂಕೀರ್ಣ ಅಂಶಗಳನ್ನು ತಿಳಿಸುತ್ತದೆ. ಭಾರತದ ಸ್ಥಿತಿಗತಿಗಳನ್ನು ವ್ಯಕ್ತಪಡಿಸುತ್ತದೆ.

ಈ ಇಬ್ಬರು ಲೇಖಕರ ಆತ್ಮಕತೆಗಳ ಅಧ್ಯಯನದ ಹಿಂದೆ ಕೆಲವೊಂದು ನಿರ್ಧಿಷ್ಟವಾದ ಆಲೋಚನೆಗಳಿವೆ. ಬಹಳ ಪ್ರಮುಖವಾಗಿ ಜಾತೀಯತೆ, ವರ್ಗವ್ಯವಸ್ಥೆ, ಅಸಮಾನತೆಗಳು, ಬಡತನ ಹಸಿವು ಮುಂತಾದ ವಿಷಯಗಳ ಹಿನ್ನೆಲೆಯಲ್ಲಿ ಈ ಆತ್ಮಕಥನಾಕರರ ಪ್ರತಿಕ್ರಿಯೆಯನ್ನು ವಿಶ್ಲೇಷಿಸುವುದು. ಇವರು ಒಂದೇ ಸಾಹಿತ್ಯ ಚಳುವಳಿಯ ಕಾಲಘಟ್ಟದವರು. ಭಿನ್ನ ಭಿನ್ನ ಪ್ರಾದೇಶಿಕ ಹಿನ್ನೆಲೆಗಳಿಂದ ಬಂದವರು. ಸಾಹಿತ್ಯ ಮತ್ತು ಸಮಾಜವನ್ನು ಕುರಿತಂತೆ ಕೆಲವು ಸಮಾನಾಶಕ್ತಿಗಳು ಕಂಡರೂ ತಂತಮ್ಮ ಅನುಭವ, ಅಭಿವ್ಯಕ್ತಿ, ಜೀವನ ತಾತ್ವಿಕತೆ, ವಸ್ತುವಿನ ಆಯ್ಕೆ, ನಿರ್ವಹಣೆ, ತಂತ್ರ ಭಾಷೆಯ ಬಳಕೆ ಮುಂತಾದ ವಿಷಯಗಳಲ್ಲಿ ಪರಸ್ಪರ ಭಿನ್ನವಾಗಿ ತೊಡಗಿಸಿಕೊಂಡಿದ್ದಾರೆ. ಈ ಅಂಶಗಳು ಹೇಗೆ ಪ್ರಕಟಗೊಂಡಿವೆ. ಅವರ ನಡುವಣ ಸಾಮ್ಯ ವಿಷಯಗಳೇನು? ಅವರ ಜೀವನ ದೃಷ್ಟಿ ಮುಂತಾದ ವಿಷಯಗಳನ್ನು ಚರ್ಚಿಸುವುದರ ಕಡೆಗೆ ಹೆಚ್ಚು ಗಮನ ಕೊಡಲಾಗಿದೆ.

ದಲಿತ ಸಾಹಿತ್ಯ ಸಂದರ್ಭದಲ್ಲಿ ದಲಿತ ಆತ್ಮಕತೆಗಳನ್ನು ಬರೆದ ಇತರರಿಗಿಂತ ಈ ಇಬ್ಬರು ಲೇಖಕರು ಭಿನ್ನಭಿನ್ನವಾದ ನೆಲೆಯಲ್ಲಿ ತಮ್ಮ ಅನುಭವ ಸಾಮಗ್ರಿಯನ್ನು ದಾಖಲಿಸಿದ್ದಾರೆ.

ಇವರ ಆತ್ಮಕತೆಗಳ ವಿಶ್ಲೇಷಣೆಯು ಕುತೂಹಲಕಾರಿಯಾದುದು. ಕಾಲಮಾನದ ದೃಷ್ಟಿಯಿಂದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಸಂಕ್ರಮಣದ ಹಂತದಲ್ಲಿದ್ದು, ಇವರ ಕಥಾರಚನೆಯ ಮೇಲೆ ಪರಿಣಾಮವನ್ನು ಬೀರಿವೆ. ವಸ್ತು ಒಂದೇ ಆದರೂ ನಿರೂಪಣಾ ವಿಧಾನ ಬೇರೆಯಾಗಿದೆ.

ಇತ್ತೀಚಿನ ದಿನಗಳಲ್ಲಿ ಆತ್ಮಕಥೆ ಸಾಹಿತ್ಯ ಕೃತಿಗಳಲ್ಲ ಎಂಬ ಮಾತು ಕೇಳಿ ಬರುತ್ತಿದೆ. ಮೊದಲನೇಯದಾಗಿ ಆತ್ಮಕಥೆ ಸಾಹಿತ್ಯ ಕೃತಿಯೂ ಹೌದು ಅಥವಾ ಅಲ್ಲ ಎನ್ನುವುದಕ್ಕಿಂತ ಈ ಪ್ರಶ್ನೆ ಏಕೆ ಬಂದಿದೆ ಎಂಬುದು ಮುಖ್ಯ. ಆರಂಭದಲ್ಲಿ ದಲಿತ ಕಾವ್ಯವನ್ನು ಇದು ಕಾವ್ಯವೇ ಅಲ್ಲ ಎಂಬಂತೆ ದಲಿತ ಆತ್ಮ ಕಥೆಗಳನ್ನು ಇದು ಸಾಹಿತ್ಯದ ರೂಪ ಅಲ್ಲ ಎಂಬ ವಾದವಿದ್ದರೂ ದಲಿತ ಆತ್ಮಕಥೆ ಇಲ್ಲಿ ಕೇವಲ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಮಾತ್ರ ಚಿತ್ರಿಸದೇ ಅವನು

ಬೆಳೆದು ಬಂದ ಪರಿಸರ, ರೀತಿ-ರಿವಾಜುಗಳು ಚಿಕ್ಕ ವಯಸ್ಸಿನ ಅವನ ಅನುಭವ ಅಪಮಾನ, ಸಮಾಜದ ವರ್ಗ ತಾರತಮ್ಯ ಇವೇ ಮೊದಲಾದ ಸಮಾಜದ ವಿಮರ್ಶೆಯ ಕೆಲಸವನ್ನು ಒಂದು ಆತ್ಮಕಥೆ ಸಾಹಿತ್ಯದ ರೂಪದಲ್ಲಿ ಸೃಜನಾತ್ಮಕವಾಗಿ ಸೃಷ್ಟಿಸಿದರೆ 'ಸಾಹಿತ್ಯ ಕೃತಿಯೇ' ಆಗಿರುತ್ತದೆ. ಸಾಹಿತ್ಯ ಎಂದರೆ ಯಾವುದು ಎನ್ನುವುದನ್ನು ವ್ಯಕ್ತಿಗತ ಆಲೋಚನ ಕ್ರಮ ವ್ಯಾಖ್ಯಾನ ಮಾಡಿ ನಂತರ ಸಾಹಿತ್ಯವೆನ್ನುವುದು ಏನು ಎಂಬ ಪ್ರಶ್ನೆಗೆ ಸಾಮಾಜಿಕ ಸ್ಥಿತ್ಯಂತರಗಳ ಅಧ್ಯಯನ ಮಾಡಿ ಅದನ್ನು ಶಬ್ದಾರ್ಥಗಳಲ್ಲಿ ಪ್ರತಿಬಿಂಬಿಸುವುದೇ ಸಾಹಿತ್ಯ. ಈ ಹಿನ್ನಲೆಯಲ್ಲಿ ದಲಿತ ಆತ್ಮಕಥೆಗಳೂ ಕೂಡ ಸಾಹಿತ್ಯ ಕೃತಿಗಳೆಂದು ನಾವು ಒಪ್ಪಿಕೊಳ್ಳಲೇಬೇಕು.

ದಲಿತ ಸಾಹಿತ್ಯದ ಅಧ್ಯಯನ ಎಂದರೆ ಒಬ್ಬ ಸಾಮಾನ್ಯ ಮನುಷ್ಯನ ಅನುಭವಗಳ ಕಥೆ ಎಂದು ಹೇಳಲಾಗದೆ, ಅದು ಒಂದು ಕಾಲಘಟ್ಟದ ನಮ್ಮ ಸಮಾಜದ ಇತಿಹಾಸವನ್ನು ಓದುಗರ ಮುಂದೆ ತಂದು ನಿಲ್ಲುಸುವಂತಹುದಾಗಿದೆ. ಹಾಗಾಗಿ ಸಾಹಿತ್ಯ ರೂಪಗಳಾದ ಕಥೆ, ಸಣ್ಣಕಥೆ, ನಾಟಕ, ಕಾದಂಬರಿ, ಕಾವ್ಯ, ವಿಮರ್ಶೆ-ಸಂಶೋಧನೆ ಇವೇ ಮೊದಲಾದ ಎಲ್ಲಾ ಪ್ರಕಾರಗಳಿಗಿಂತಲೂ ಆತ್ಮಕಥೆಯ ರೂಪ ಬಹು ವಿಶಾಲವಾದುದು ಹಾಗೂ ವಿಶಿಷ್ಟವಾದುದು.

ದಲಿತರ ಬದುಕು-ಸಂಸ್ಕೃತಿಯನ್ನು ಕುರಿತು ದಲಿತ ಲೇಖಕರೇ ಬರೆದಾಗಿನ ಅನುಭವ, ನೋವು-ನಲಿವು, ಆಂತರ್ಯದ ತುಡಿತ-ಮಿಡಿತ ಹಾಗೂ ಪ್ರಾಮಾಣಿಕತೆಯ ಅಭಿವ್ಯಕ್ತಿಗಳಿಗೂ ಹಾಗೂ ದಲಿತೇತರರು ಹೊರಗಿನಿಂದ ನ್ನೋಡಿ ಬರೆದ ಬರವಣಿಗೆಗೂ ಬಹಳ ಅಂತರವಿದ್ದೇ ಇರುತ್ತದೆ. ಇದನ್ನು ನಾವು ದಲಿತ ಆತ್ಮಕಥೆಗಳಲ್ಲಿ ಬಹಳ ಹತ್ತಿರದಿಂದ ಗಮನಿಸಬಹುದಾಗಿದೆ. 'ನೊಂದವರ ನೋವ ನೋಯದವರೆತ್ತ ಬಲ್ಲರು? ಎಂಬಂತೆ ದಲಿತನೊಬ್ಬನಿಗಿರುವ ಭೌತಿಕ ಇಲ್ಲವೆ ಮಾನಸಿಕ ಅಸ್ಪೃಶ್ಯತೆಯ ಅವಮಾನದ ಅನುಭವ ದಲಿತೇತರಿಗೆ ಇರಲು ಸಾಧ್ಯವಿಲ್ಲ. ಆತ್ಮಕಥೆ ಎಂಬುದೆ ಒಬ್ಬ ವ್ಯಕ್ತಿಯ ಜೀವನಾನುಭವ. ಈ ಅನುಭವವೇ ಭಿನ್ನವಾದಾಗ ಸಹಜವಾಗಿ ಇತರ ಆತ್ಮಕಥೆಗಳಿಗಿಂತ ದಲಿತ ಆತ್ಮಕಥೆಯು ಭಿನ್ನವಾಗಿರುತ್ತವೆ. ಈ ಮಾತನ್ನು ನಾವು ಅವರ ಶೈಲಿ, ಭಾಷೆ ಹಾಗೂ ಪ್ರತಿಯೊಂದನ್ನು ಬಿಚ್ಚು ಮನಸ್ಸಿನಿಂದಲೇ ಹೇಳುವ ರೀತಿ ಎಲ್ಲವೂ ವಿಭಿನ್ನವಾಗಿಯೇ ಇರುತ್ತದೆ.

ದಲಿತ ಸಾಹಿತ್ಯ ಕನ್ನಡದಲ್ಲಿ ಹೆಚ್ಚು ಗಟ್ಟಿಯಾಗಿ ಹೊರಹೊಮ್ಮಿ ಭದ್ರವಾದ ಸ್ಥಾನ ಪಡೆಯುವ ಸಂದರ್ಭದಲ್ಲಿ ದಲಿತರ ಬಗೆಗೆ ಯಾರು ಬರೆದರೂ ಅದು ದಲಿತ ಸಾಹಿತ್ಯವೇ ಎಂಬ ಅಂಶ ಗಮನಾರ್ಹವಾದರೂ ಅವರಿಗಿಂತಲೂ ವಿಶಿಷ್ಟವಾದ ಬರವಣಿಗೆಯು ದಲಿತ ಲೇಖಕರದೆ ಆಗಿದೆ. ದಲಿತೇತರರು ಬರೆದ ಸಾಹಿತ್ಯ ಪ್ರಗತಿಪರ ಸಾಹಿತ್ಯ ಎಂದು, ಬಡತನ, ದೌರ್ಜನ್ಯ, ಯಾತನೆ, ಆಕ್ರೋಶದ ಖಾಸಾ ಅನುಭವದ ಪ್ರಾಮಾಣಿಕ ಅಭಿವ್ಯಕ್ತಿ ಅದು ದಲಿತ ಸಾಹಿತ್ಯವಾಗುತ್ತದೆ.

ಕನ್ನಡ ಸಾಹಿತ್ಯ ಚರಿತ್ರೆಯಿಂದ ದಲಿತ ಸಾಹಿತ್ಯ ಪ್ರತ್ಯೇಕವಾದುದಲ್ಲ. ಅನುಭವ, ಅಭಿವ್ಯಕ್ತಿ, ವಸ್ತು, ಭಾಷೆ ಇವುಗಳ ಹಿನ್ನಲೆಯಿಂದ ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ ಸಾಹಿತ್ಯ ಎಂದು ಪರಿಗಣಿಸಿ ಒಪ್ಪಿಕೊಳ್ಳುವಾಗ, ದಲಿತ ಸಂವೇದನೆಯ ನೆಲೆಯಿಂದ ಪ್ರಕಟಗೊಂಡಿರುವ ಸಾಹಿತ್ಯವನ್ನು ದಲಿತ ಸಾಹಿತ್ಯವೆಂದು ಒಪ್ಪಿಕೊಳ್ಳಲೇಬೇಕು. ದಲಿತ ಸಾಹಿತ್ಯ ಕುರಿತ ವಿಚಾರ-ವಿಮರ್ಶೆಗಳು ಇದುವರೆಗೂ ಸಮಗ್ರವಾಗಿ ನಡೆಯದೇ ಇರುವುದು ವಿಷಾದನೀಯ. ಆದರೆ ಆರಂಭದಿಂದ ಅಂದರೆ ೧೨ನೇ ಶತಮಾನದ ವಚನ ಚಳುವಳಿ, ಅದೊಂದು ಚಾರಿತ್ರಿಕ ದಾಖಲಾತಿಯಾಗಿದೆ. ದಲಿತ ಸಾಹಿತ್ಯ ರಚನೆಗೆ ಚಳುವಳಿಗಳು ಜೀವ ನಾಡಿ. ಹಾಗೆಯೇ ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ದಲಿತ ಚಳುವಳಿ ಕಾವ್ಯದ ಮೂಲತಃ ಕಾವ್ಯ ಚಳುವಳಿಯ ಮೂಲಕವೇ ನಾಂದಿ ಹಾಡಿದ್ದು, ಅನಂತರ ಕತೆ, ನಾಟಕ, ಕಾದಂಬರಿ, ಸಂಶೋಧನೆ, ಆತ್ಮಕಥೆ ರಚನೆಗೆ ಸ್ಫೂರ್ತಿ ಚಾಲನೆ ದೊರೆತದ್ದು ಮಹತ್ವದ ಘಟ್ಟ.

ದಲಿತ ಸಾಹಿತ್ಯ ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ನವ್ಯ ಪ್ರಗತಿಶೀಲ ಪಂಥಗಳನ್ನು ಮೀರಿ ಬೆಳೆದು, ಆ ಮೂಲಕ ಕನ್ನಡದ ಓದುಗರಲ್ಲಿ ಒಂದು ಬಗೆಯ ರೋಮಾಂಚನವನ್ನು ಉತ್ಸಾಹವನ್ನು ಮೂಡಿಸಿತು. ಈ ಚಳುವಳಿಯು ತನ್ನ ಒಳನೋಟಗಳಿಂದ, ನವೀನ ಅಭಿವ್ಯಕ್ತಿ ಮಾರ್ಗದಿಂದ ಸಾಕಷ್ಟು ಜನಪ್ರಿಯಗಳಿಸಿತು. ಇಂತಹ ಜನಪ್ರಿಯತೆಯು ಹಳೆಯದರ ದೌರ್ಬಲ್ಯವನ್ನು ಎತ್ತಿ ತೋರಿಸಿತು. ಇಂತಹ ಸಾಹಿತ್ಯ ಚಳುವಳಿಯು ಹಳೆಯ ಪರಂಪರೆಯನ್ನು, ಚರಿತ್ರೆಯ ವಿಮರ್ಶೆಯನ್ನು ಮಾಡತೊಡಗಿತು. ಈ ಕಾಲಘಟ್ಟದಲ್ಲಿ ಸುಶಿಕ್ಷಿತ ದಲಿತವರ್ಗ ಸಮಾಜವನ್ನು ವಿಮರ್ಶೆ ಮಾಡುವ, ತಮಗಾದ ಅವಮಾನಗಳನ್ನು ಭಾಷೆಯಲ್ಲಿ, ಭಾವನೆಗಳಲ್ಲಿ ಅಭಿವ್ಯಕ್ತಿಸುವ ಸಾಹಸಕ್ಕೆ ಹಾಕಿದುದರ ಪರಿಣಾಮವೇ ಈ ದಲಿತ ಸಾಹಿತ್ಯಕ್ಕೆ ನಾಂದಿಯಾಯಿತು.

ಈ ಪ್ರಬಂಧದಲ್ಲಿ ಒಟ್ಟು ೮ ಅಧ್ಯಾಯಗಳಿವೆ

ನಿಬಂಧದ ವಿಷಯಕ್ಕೆ ಪೂರ್ವಭಾವಿಯಾಗಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ವಿವರಿಸಿದ ನಂತರ ಒಂದು ಸಾಹಿತ್ಯದ ಹುಟ್ಟಿಗೆ ಕಾರಣವಾಗುವ ಇತರ ಅಂಶಗಳೂ ಕೂಡ ಮುಖ್ಯ. ಯಾವುದೇ ಒಂದು ಬದಲಾವಣೆಯಾಗಲೀ, ಸಮಾಜದ ಪರಿವರ್ತನೆಯಾಗಲೀ ಅದು ಏಕಕಾಲದಲ್ಲಿ ಆಗುವುದಿಲ್ಲ. ಅಂತಹ ಬದಲಾವಣೆ, ಪರಿವರ್ತನೆ ಒಂದು ಪರಿಪಕ್ವವಾದ ಚಳವಳಿ, ಸಿದ್ಧಾಂತ, ಕಾಲ ಎಲ್ಲವೂ ಒಳಗೊಳಗೆ ಸಾಕಾರಗೊಂಡು ಅನಂತರ ಅದೊಂದು ಆಕಾರವನ್ನು ಹೊತ್ತುಬರುವಂತೆ ಕನ್ನಡದಲ್ಲಿ ದಲಿತ ಆತ್ಮಕಥೆಗಳ ಸಂಖ್ಯೆಯೇ ಬೆರಳೆಣಿಕೆಯಷ್ಟು ಇರುವ ಸಂದರ್ಭದಲ್ಲಿ ಇದಕ್ಕೆ ಪ್ರೇರಣೆ ನೀಡಿದ ಇತರೆ ಅಂಶಗಳೇನು? ಎಂಬುದು ಓದುಗನಿಗೆ ಬಹು ಮುಖ್ಯವಾಗುತ್ತದೆ.

ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ದಲಿತ ಆತ್ಮಕಥೆಗಳು ಹುಟ್ಟುವ ಮೊದಲು ಈ ದಲಿತ ಸಾಹಿತ್ಯ ಚಳುವಳಿಯ ಸ್ವರೂಪ-ಲಕ್ಷಣಗಳು ಮುಖ್ಯವಾಗುತ್ತದೆ. ಆದ್ದರಿಂದ ಇಂತಹ ನೊಂದವರ ಸಾಹಿತ್ಯದ ಸೃಜನ-ಸೃಷ್ಟಿಗೆ ಕಾರಣವಾಗುವ ದಲಿತ ಸಾಹಿತ್ಯದ ಪ್ರೇರಣೆ-ಪ್ರಭಾವಗಳನ್ನು ಅವುಗಳ ವಿವರಣೆಯನ್ನು ನೀಡಲಾಗಿದೆ. ನಂತರದ ಅಧ್ಯಯನದಲ್ಲಿ ದಲಿತ ಆತ್ಮಕಥೆಗಳ ಸ್ವರೂಪ, ದಲಿತ ಆತ್ಮಕಥೆಗಳಿಗೆ ಪ್ರೇರಣೆ-ಪ್ರಭಾವ ಬೀರುವ ಅಂಶಗಳನ್ನು ಹೇಳಲಾಗಿದೆ. ಅನಂತರ ಕನ್ನಡ ಆತ್ಮಕಥೆಗಳಲ್ಲಿ ದಲಿತ ಆತ್ಮಕಥೆಗಳ ಸ್ಥಾನವನ್ನು ಹಾಗೂ ಪ್ರಸ್ತುತ ಈ ನಿಬಂಧಕ್ಕೆ ಆಯ್ದುಕೊಂಡಿರುವ ಸಿದ್ಧಲಿಂಗಯ್ಯನವರ ‘‘ಊರುಕೇರಿ’’ ಮತ್ತು ತುಂಬಾಡಿ ರಾಮಯ್ಯನವರ ‘‘ಮಣೆಗಾರ’’ ಈ ಎರಡೂ ಆತ್ಮಕಥೆಗಳ ತೌಲನಿಕ ಅಧ್ಯಯನವನ್ನು ಮಾಡಲಾಗಿದೆ. ನಿಬಂಧದ ಅಂತ್ಯದಲ್ಲಿ ಒಟ್ಟಾರೆಯಾಗಿ ಈ ಎರಡೂ ಆತ್ಮಕಥೆಗಳ ವಿಶ್ಲೇಷಣೆ-ಸಾಮ್ಯ ವೈಷಮ್ಯವನ್ನು ಹೇಳಿ, ದಲಿತ ಆತ್ಮಕಥೆಗಳ (ಸಾಹಿತ್ಯ) ಇಂದಿನ ತಾತ್ವಿಕ ನಿಲುವುಗಳೇನು ಎಂಬುದನ್ನು ಬಿತ್ತರಿಸಲಾಗಿದೆ.

ಕೊನೆಯ ಅಧ್ಯಯನದಲ್ಲಿ ಒಟ್ಟು ಫಲಿತಗಳನ್ನು ಹೇಳಲಾಗಿದೆ.

೨. ದಲಿತ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣಗಳು

ದಲಿತ ಎಂಬ ಪದವನ್ನು ಅರ್ಥೈಸುವ ಮತ್ತು 'ದಲಿತ' ಎಂದರೆ ಯಾರು? ಎಂದು ವ್ಯಾಖ್ಯಾನಿಸಲು ಪ್ರಯತ್ನಿಸಿದವರು ಹಲವಾರು ಜನ. ದಲಿತ ಬಂಡಾಯ ಚಳುವಳಿಯ ಅಧೀನತೆಯಿಂದ ಹೊರಗಿರುವ ಬರಹಗಾರರು ಅಷ್ಟೇ ಆಸಕ್ತಿವಹಿಸಿ ಅದನ್ನು ಚರ್ಚಿಸಿರುವುದು ವಿಶೇಷ.

ದಲಿತ ಎಂಬ ಪದ 'ಪ್ರಗತಿ ಪಂಥ'ದ ಬರಹಗಾರರ ಸಂದರ್ಭದಲ್ಲಿ ಬಳಕೆಗೆ ಬಂದರೂ ಅದನ್ನು ವ್ಯಾಖ್ಯಾನದ ಚೌಕಟ್ಟಿನಲ್ಲಿ ಬಂಧಿಸಿಡುವ ಪ್ರಯತ್ನ ಆರಂಭವಾದುದು. ಕರ್ನಾಟಕದ ಬರಹಗಾರರ ಮತ್ತು ಕಲಾವಿದರ ಒಕ್ಕೂಟದ ಸಂದರ್ಭದಿಂದ ದಲಿತ ಬಂಡಾಯ ಎಂಬ ಪದಕ್ಕೆ ಕಾಲ ಉರುಳುತ್ತಾ ಹೋದಂತೆ ವ್ಯಕ್ತಿಗತವಾದ ವ್ಯಾಖ್ಯಾನಗಳೇ ಬಳಕೆಯಾಗಿವೆ.

ಶೋಷಣೆ ಎಂಬ ಪದಕ್ಕೆ ಜಾತಿ-ಭೇದವಿಲ್ಲ. ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲೆಲ್ಲ ಶೋಷಣೆಗೆ ಒಳಗಾದ ಎಲ್ಲ ಜನರೂ ದಲಿತರು.

ಪಂಚಮರು, ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರೂ ದಲಿತರು. ಆರ್ಥಿಕ, ಸಾಮಾಜಿಕ ತುಳಿತಕ್ಕೆ ಒಳಗಾದವರೆಲ್ಲರೂ ದಲಿತರೇ ಎಂದು ಹಲವಾರು ವ್ಯಾಖ್ಯಾನಗಳು ಮೂಡಿಬಂದವು. ಒಟ್ಟಾರೆಯಾಗಿ ದಲಿತರು ಎಂದರೆ-

"ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು. ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ ಊರ ಹೊರಗೆ ವಾಸಿಸಿ ಕೀಳು ವೃತ್ತಿಗೆ ಅವಲಂಬಿತರಾಗಿ ಹೆಸರು ಹೇಳಿಕೊಳ್ಳಲು ನಾಚಿಕೆಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರು ದಲಿತರೆನಿಸಿಕೊಳ್ಳುತ್ತಾರೆ.

ದಲಿತ ಪ್ರಜ್ಞೆ

"ಪ್ರಜ್ಞೆ" ಎಂಬ ಪದ ಭೂತ, ವರ್ತಮಾನ, ಭವಿಷ್ಯತ್ಕಾಲಗಳನ್ನು ಒಳಗೊಂಡು ಅವುಗಳನ್ನು ಒಂದು ಸರಣಿಯಲ್ಲಿರಿಸಿ ಪರಿಸರದ ಸ್ಥಿತಿಯನ್ನು ಗ್ರಹಿಸಿ, ಆ ಸ್ಥಿತಿಗೆ ಚಾಲನೆ ನೀಡುವ ಒಂದು ಶಕ್ತಿ ಎಂದು ತೆಗೆದುಕೊಂಡರೆ, ದಲಿತ ಪ್ರಜ್ಞೆ ಎನ್ನುವುದನ್ನು ಇದೇ ವ್ಯಾಪ್ತಿಯಲ್ಲಿ ಗ್ರಹಿಸಬೇಕು.

ದಲಿತ ವಿರೋದಿ ಅಸ್ತಿತ್ವದ ವಿಚಾರಗಳನ್ನು ಭೂತ ವರ್ತಮಾನ ಭವಿಷ್ಯತ್ಕಾಲಗಳನ್ನೊಳಗೊಂಡಂತೆ, ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಆಧ್ಯಾತ್ಮಿಕ, ಭೌದ್ಧಿಕ ಹಾಗೂ ಸಾಂಸ್ಕೃತಿಕ ಹೀಗೆ ಎಲ್ಲ ರಂಗದಲ್ಲಿ ದಲಿತರ ಮೇಲೆ ಹೇರಿರುವ ಮತ್ತು

ಶೋಷಿಸುವ ವಿಚಾರದ ನೆಲೆಯ ಬಗೆಗೆ ಮೂಡುವ ಅರಿವು ಮತ್ತು ಶೋಷಣೆಯ ಮೂಲ ಸ್ಥಿತಿಯಿಂದ, ವಿಮೋಚನೆ ಹೊಂದಲು ಮಾಡುತ್ತಿರುವ ಪ್ರಯತ್ನ ಹಾಗೂ ಕ್ರಿಯಾತ್ಮಕವಾಗಿ ಹೊಂದುವ ಬೆಳವಣಿಗೆಯಲ್ಲಿ ನಂಬಿಕೆ ಇದ್ದು, ಹೊಸ ಚರ್ಚೆಗೆ, ಹೊಸ ದಿಕ್ಕಿನೆಡೆಗೆ ಸಾಗುತ್ತೇವೆಂಬ ಆಶಯ ಹೊಂದಿರುವಂತಹದ್ದೇ ದಲಿತ ಪ್ರಜ್ಞೆ.

ದಲಿತೇಯ ಜ್ಞಾನದೀವಿಗೆಯನ್ನು ದೀಪದಿಂದ ದೀಪಕ್ಕೆ ಬೆಳಗುತ್ತಾ ಹೋಗುವುದೇ ದಲಿತ ಪ್ರಜ್ಞೆ. ಇದೇ ಮಾನವ ಪ್ರಜ್ಞೆ. ಕಲ್ಲು ಹೃದಯವನ್ನು ಕರಗಿಸುವ ಮಾನವೀಯತೆಯನ್ನು ಮೊಳಕೆಯೊಡಿಸುವ ಕ್ರಿಯಾ ವಿಧಾನವೆಂದು ಹೇಳಬಹುದು.

ಒಟ್ಟಾರೆ ದಲಿತರಾದವರೆಲ್ಲ ದಲಿತ ಪ್ರಜ್ಞೆಯುಳ್ಳವರಾಗಿರುತ್ತಾರೆಂದಲ್ಲ. ದಲಿತ ಪ್ರಜ್ಞೆ ಇಲ್ಲದವರು ದಲಿತರಲ್ಲವೆಂದಲ್ಲ. ಅವರನ್ನು ಪ್ರಜ್ಞಾವಂತ ದಲಿತರನ್ನಾಗಿಸುವುದರ ಜೊತೆಗೆ, ಸಾಂಪ್ರದಾಯಿಕ ಜನತೆಯನ್ನು ಪ್ರಜ್ಞಾವಂತ ಜನತೆಯನ್ನಾಗಿಸಲು ಹಂಬಲಿಸುವುದೇ ಇಲ್ಲಿನ ಮುಖ್ಯವಾದ ಅಂಶ.

ದಲಿತ ಎಂದರೆ ಯಾರು? ಎನ್ನುವ ಪ್ರಶ್ನೆಗಳಿಗೆ ಸಾಮಾನ್ಯ ವ್ಯಾಖ್ಯಾನ ನೀಡಿರುವಂತೆ ದಲಿತ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣಗಳನ್ನು ಸಂಕ್ಷಿಪ್ತವಾಗಿ ತಿಳಿಯೋಣ.

ಅ. ದಲಿತರ ಕುರಿತು ಯಾರು ಬರೆದರೂ ದಲಿತ ಸಾಹಿತ್ಯವಾಗುತ್ತದೆ.

ಆ. ದಲಿತರೇ ಬರೆದದ್ದು ದಲಿತ ಸಾಹಿತ್ಯವಾಗುತ್ತದೆ.

ಇ. ಪ್ರಗತಿಪರರು ಮತ್ತು ದಲಿತರು ದಲಿತರ ಕುರಿತು ಬರೆದದ್ದು ದಲಿತ ಸಾಹಿತ್ಯವಾಗುತ್ತದೆ.

ಹೀಗೆ ಹಲವಾರು ವ್ಯಾಖ್ಯಾನಗಳನ್ನು ನೋಡಿದರು. ದಲಿತರಿಗಿಂತ ಇತರರು ದಲಿತ ಸಾಹಿತ್ಯದ ಬಗ್ಗೆ ಬರೆದರೆ ಅದು ಪ್ರಗತಿಪರ ಚಿಂತನೆಯಾಗಿರುತ್ತದೆ. ಆದರೆ ಒಬ್ಬ ದಲಿತ ತನ್ನ ಜೀವನದುದ್ದಕ್ಕೂ ಕಂಡು, ಉಂಡಂತಹ ನೋವನ್ನು ರಕ್ತ ಮಾಂಸದಿಂದ, ಕೂಡಿ, ಹೆಚ್ಚು ಆಥ್ಲೆಂಟಿಕ್ ಆಗಿ ಬರೆಯುತ್ತಾರೆ. ಹಾಗಾಗಿ ದಲಿತ ಸಾಹಿತ್ಯ ಬರಿ ಅನುಕಂಪದಿಂದ ಹುಟ್ಟುತ್ತದೆ. ಆದರೆ ದಲಿತನಲ್ಲಿರುವ ಆ ಪ್ರಜ್ಞೆ ಜಾಗೃತಿಗೊಂಡು ಅದು ಜ್ವಾಲಾಮುಖಿಯ ರೂಪದಲ್ಲಿ ಸ್ಫೋಟಗೊಳ್ಳುತ್ತದೆ.

ದಲಿತ ಸಾಹಿತ್ಯ: ದಲಿತರು–ದಲಿತೇರರು ದಲಿತ ಪ್ರಜ್ಞೆಯಿಂದ ದಲಿತರ ಕುರಿತು ಸೃಷ್ಟಿಸಿದ ಸಾಹಿತ್ಯವೇ ದಲಿತ ಸಾಹಿತ್ಯ. ಇದರಲ್ಲಿ ದಲಿತೇಯ, ದಲಿತೇಯ ಮತ್ತು ಎಲ್ಲ ಸಾಹಿತ್ಯವೂ ಒಳಗೊಂಡಿರುತ್ತದೆ.

ದಲಿತೀಯ ಸಾಹಿತ್ಯ: ದಲಿತರು ದಲಿತ ಪ್ರಜ್ಞೆಯಿಂದ ದಲಿತತ್ವದ ಕುರಿತು ಬರೆದ ಸಾಹಿತ್ಯ ದಲಿತೀಯ ಸಾಹಿತ್ಯವಾಗುತ್ತದೆ.

ದಲಿತೇಯ ಸಾಹಿತ್ಯ: ಪ್ರಗತಿಪರ ದಲಿತೇರರು ದಲಿತ ಪ್ರಜ್ಞೆಯಿಂದ ದಲಿತರನ್ನು ಕುರಿತು ಬರೆದ ಸಾಹಿತ್ಯವೇ ದಲಿತೇಯ ಸಾಹಿತ್ಯವಾಗುತ್ತದೆ.

ಈ ವರ್ಗೀಕರಣ ಅಧ್ಯಯನದ ಅನುಕೂಲಕ್ಕಾಗಿ ಎನ್ನುವುದನ್ನು ಗಮನಿಸಬೇಕು. ಸಾಹಿತ್ಯದಲ್ಲಿ ದಲಿತ ಸಾಹಿತ್ಯವೆಂದು ವರ್ಗೀಕರಿಸುವುದೇ ತಪ್ಪು ಎನ್ನುವ ವಾದವಿದೆ. ಸಾಹಿತ್ಯ ಶಾರದೆಯ ಮಡಿಲಿಗೆ ಯಾವುದೂ ಬಹಿಷ್ಕೃತವಲ್ಲ. ಆಕೆಗೆ ಎಲ್ಲವೂ ಒಂದೇ ಎನ್ನುವುದು ನಿಜ. ಅಸ್ಪೃಶ್ಯತೆಯ ಪರಿಕಲ್ಪನೆ ಏನಿದ್ದರೂ ಮನುಷ್ಯನಲ್ಲಿಯೇ ವಿನಃ ಸಾಹಿತ್ಯ ಭೂಮಿಕೆಗಲ್ಲ

ದಲಿತ ಸಾಹಿತ್ಯ ಜಾತಿವಾದಿ ಸಾಹಿತ್ಯವಲ್ಲ. ಇತರ ಸಾಹಿತ್ಯಿಕ ಪಂಥಗಳಂತೆ ಇದೂ ಕೂಡ ಒಂದು. ಇತರ ಪಂಥಗಳಿಗಿಂತ ಇದು ಹೇಗೆ ಭಿನ್ನ. ದಲಿತ ದಲಿತೇತರ ಸಾಹಿತ್ಯದಲ್ಲಿರುವ ಅಂತರ ಹಾಗೂ ಅಂತರ್ ಸಂಬಂಧ, ತೌಲನಿಕ ಅಧ್ಯಯನ, ತಾತ್ವಿಕ ನಿಲುವುಗಳು, ಧೋರಣೆ, ಪ್ರೇರಣೆಗಳು ಮುಂತಾದವನ್ನು ಕಂಡುಕೊಳ್ಳಲು ಈ ರೀತಿಯ ವರ್ಗೀಕರಣ ಸಹಕರಿಸುತ್ತದೆ. ಸಾಹಿತ್ಯಕ್ಕೆ ತಕ್ಕಂತೆ ವಿಮರ್ಶೆಗೆ ಹೊಸ ಮಾನದಂಡಗಳು ಬೇಕು. ಬದಲಾಗಬೇಕಾದ ಮಾನದಂಡಗಳು ಯಾವುವು? ಹೊಸ ಸೈದ್ಧಾಂತಿಕ ನೆಲೆ ಯಾವುದು? ಇಂಥ ಹಲವಾರು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಈ ಲೇಖನವಾಗಿದೆ.

ದಲಿತರೇ ಬರೆದದ್ದು ದಲಿತ ಸಾಹಿತ್ಯವಾಗುತ್ತದೆಂದು ನಂಬಿ ಕೊರಟದ್ದೇ ಆದರೆ, ಸಾಹಿತ್ಯದಲ್ಲಿ ಮತ್ತೊಂದು ಅಸ್ಪೃಶ್ಯರ ಕೇರಿಯನ್ನು ನಿರ್ಮಾಣ ಮಾಡಿದಂತಾಗುತ್ತದೆ. ಆಗ ದಲಿತ ಸಾಹಿತ್ಯ ಒಂದೇ ವಾರ್ಡಿನ ರೋಗಿಗಳು ನರಳಿದ ದನಿಯಾಗುತ್ತದೆ. ದಲಿತರು ಊರ ಹೊರಗಿದ್ದು ಬದುಕಿದ್ದಾರೆ ಆದರೆ ಊರಿನವರ ಸಂಬಂಧಗಳನ್ನು ಚಪ್ಪಾಳೆ, ಧ್ವನಿ. ಆದ್ದರಿಂದ ದಲಿತರು ದಲಿತೇತರರು ದಲಿತ ಪ್ರಜ್ಞೆಯಿಂದ ದಲಿತರ ಕುರಿತು ಬರೆದದ್ದು ದಲಿತ ಸಾಹಿತ್ಯವಾಗುತ್ತದೆಂದು ಒಪ್ಪಿಕೊಳ್ಳಬೇಕಾಗಿದೆ. ಈವರೆಗೆ ದಲಿತ ಸಾಹಿತ್ಯದ ಕುರಿತು ವ್ಯಾಖ್ಯಾನ ಮಾಡಿದವರಲ್ಲಿನ ದಲಿತೇತರರೇ ಎನ್ನುವುದನ್ನು ಲಕ್ಷಿಸಬೇಕು.

ದಲಿತೇತರರು ಬರೆಯುವಾಗ ಈ ಸಾಹಿತ್ಯದಲ್ಲಿ ದಲಿತರೇ ಕೇಂದ್ರ ಬಿಂದುವಾಗಿರಬೇಕೆಂಬ ನಿಯಮವೇನಿಲ್ಲ. ದಲಿತರೊಂದಿಗಿನ ಸಂಬಂಧಗಳನ್ನು ಹಂಚಿಕೊಳ್ಳುವಾಗ ಆತನ ದಲಿತರೊಂದಿಗಿನ ಒಳಗೊಳ್ಳುವಿಕೆಯ ಪ್ರಮಾಣ, ಆತನ ಬರವಣಿಗೆಯ ಸಾಮರ್ಥ್ಯ ಪಕ್ವತೆ ಇವೆಲ್ಲವೂ ಮುಖ್ಯವಾಗಿರುತ್ತವೆ. ಒಬ್ಬ ಸಮರ್ಥ ಲೇಖಕ ದಲಿತನ ಸತ್ವಯುತ ಕೃತಿಗಳನ್ನು ಕೊಡಬಲ್ಲವನಾಗಿರುತ್ತಾನೆ.

ದಲಿತ ಸಾಹಿತ್ಯದ ಲಕ್ಷಣಗಳನ್ನು ಕುರಿತು ಬರೆಯುವುದೆಂದರೆ ಕಡಲನ್ನು ಕನ್ನಡಿಯಲ್ಲಿ ಹಿಡಿದಿಡುವ ಸಾಹಸವನ್ನು ಮಾಡಿದಂತೆ. ಏಕೆಂದರೆ ಕತ್ತಲ ನಾಡಿನ ಜನತೆ ಈಗ ಮಾಡಿಸಿರುವ ಲೇಖನಿ ಅಲ್ಪವಾದರೂ ಕಾಯಕಲ್ಪವಾಗಿದೆ. ಸಾಹಿತ್ಯದ ಮಜಲುಗಳು ಬೆರಗಾಗಿ ನೋಡುತ್ತಿವೆ. ಬೆರಳೆಣಿಕೆಯ ಲೇಖಕರ ಬರಹಗಳೇ ಬಿರುಗಾಳಿಯನ್ನೆಬ್ಬಿಸಿವೆ. ಸಾಹಿತ್ಯದಲ್ಲಿ ಇನ್ನು ಅಲ್ಪ ವಿರಾಮವೇ ಬಿದ್ದಿಲ್ಲ. ಆಗಲೇ ಪ್ರತಿಧ್ವನಿಗಳ ಅಲೆ ಮೊಳಗುತ್ತಿವೆ.

ದಲಿತ ಸಾಹಿತ್ಯದ ಮೊದಲ ತಲೆಮಾರಿನ ಬರಹಗಾರರ ಬರವಣಿಗೆಯಲ್ಲಿ ವೈವಿಧ್ಯತೆ ಇದೆ. ಒಬ್ಬರು ಬರೆದಂತೆ ಮತ್ತೊಬ್ಬರು ಬರೆದಿಲ್ಲ. ಪ್ರತಿಯೊಬ್ಬರೂ ತಮ್ಮದೇ ಆದ ತಾತ್ವಿಕ, ಸಾಹಿತ್ಯಿಕ ನಡಿಗೆಯಲ್ಲಿ ಗುರುತಿಸಿಕೊಂಡಿದ್ದಾರೆ. ಹೀಗಾಗಿ ಹಿಡಿಯಷ್ಟು ಸಾಹಿತ್ಯವಿದ್ದರೂ ತೋಳು ತೆಕ್ಕೆಯಲ್ಲಿ ಹಿಡಿಯಲಾಗದಷ್ಟು ಚರ್ಚೆ ನಡೆದಿವೆ. ಇದು ಅವರ ಕಿರಿಯ ಬರಹದ ಹಿರಿತನಕ್ಕೆ ಸಾಕ್ಷಿಯಾಗಿವೆ. ದಲಿತ ಸಾಹಿತ್ಯದಲ್ಲಿ ಕಥೆ, ಕಾದಂಬರಿ, ಕಾವ್ಯ, ಆತ್ಮಕಥೆ ಇವೇ ಮೊದಲಾದ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ಸ್ವರೂಪ ಹಾಗೂ ಲಕ್ಷಣಗಳಲ್ಲಿ ವ್ಯತ್ಯಾಸವಿದೆ. ಆದ್ದರಿಂದ ಈವರೆಗೆ ಬಂದಂತಹ ಈ ಎಲ್ಲಾ ಪ್ರಕಾರಗಳಲ್ಲಿ ವ್ಯಕ್ತವಾದ ದಲಿತ ಸಾಹಿತ್ಯದ ಸಾಮಾನ್ಯ ಲಕ್ಷಣಗಳನ್ನು ಒಟ್ಟಾರೆಯಾಗಿ ಇಲ್ಲಿ ನೋಡಬಹುದಾಗಿದೆ.

ಸಿಟ್ಟು, ಅಬ್ಬರ, ರೊಚ್ಚು, ಆವೇಶ ಇವೇ ಆರಂಭದ ನಾಡಿಗಳಾಗಿದ್ದವು. ತಾತ್ವಿಕವಾಗಿ ಪರಿಶೀಲಿಸಿದರೆ ಸಾಹಿತ್ಯಕ್ಕೆ ಇವು ಆಭರಣಗಳಲ್ಲ. ಆದರೆ ೧೯೭೦ರ ಸಾಂಸ್ಕೃತಿಕ ಸಂಘರ್ಷ ಸಂದರ್ಭದಲ್ಲಿ ಈ ರೀತಿಯ ಬರವಣಿಗೆ ಅವಶ್ಯವೂ, ಅನಿವಾರ್ಯವೂ ಆಗಿತ್ತು. ಇಲ್ಲಿಯ ಸಿಟ್ಟು, ಆವೇಶಕ್ಕೆ ಅರ್ಥವಿದೆ . ಅದು ಶತಮಾನಗಳ ನೋವಿನಾಳದಿಂದ ಹೊರಬಿದ್ದು, ಅದಕ್ಕೆ ಚಾರಿತ್ರಿಕವಾದ ಮಹತ್ವವಿದೆ. ಹೀಗಾಗಿ ಆರಂಭದಲ್ಲಿ ಇದನ್ನು ಒಂದು ಲಕ್ಷಣವೆಂದೇ ಪರಿಗಣಿಸಲಾಯಿತು. ಆದರೆ ಇಂದು ದಲಿತ ಕಾವ್ಯದ ನಡಿಗೆ ಬೇರೆಯಾಗಿದೆ. ನಖದ ಪರಿಭಾಷೆಯನ್ನು ಮೀರಿ ಹಸ್ತಸ್ಪರ್ಷದ ಪರಿಭಾಷೆಯಲ್ಲಿ ಸಾಹಿತ್ಯಿಕವಾಗಿ ಹೊರಳಿ ನಿಂತಿದೆ. ಆವೇಶ ಅಬ್ಬರದ ಬರವಣಿಗೆ ಇದ್ದಾಗ, ವಾಚಾಳಿತನ ಅನಿವಾರ್ಯವಾದರೂ ಅನುಭವ ಅದರೊಂದಿಗೆ ಮಡುಗಟ್ಟಿ ನಿಂತಿದ್ದರಿಂದ ವಾಕ್ಯವು ಕೂಡ ಗೌಣವಾಗಿದ್ದನ್ನು ಕಾಣಬಹುದು.

ಗಾಯತೆಯನ್ನು ಕಳೆದುಕೊಂಡಿದ್ದ ಕನ್ನಡ ಕಾವ್ಯಕ್ಕೆ ಗಾಯತೆಯ ಮೂಲಕ ಹೊಸ ಚೈತನ್ಯವನ್ನು ದಲಿತ ಸಾಹಿತ್ಯ ತಂದುಕೊಟ್ಟಿತು. ಈ ಗಾಯತೆಯ ಧ್ವನಿ ಆಲಾಪಗಳು ನವೋದಯ ಭಾವಕ್ಕಿಂತ ಭಿನ್ನವಾದವು. ಅಲ್ಲಿಯ ಲಯದ ನಾಜೂಕಿನ ನಡಿಗೆ ಇಲ್ಲಿ ಇಲ್ಲದೆ ಹೋದರೂ ಕೇಳುಗರ ರೋಮಗಳನ್ನು ಕ್ರಿಯಾಶೀಲತೆಯನ್ನಾಗಿ ಮಾಡುವ ಸತ್ವವುಳ್ಳದ್ದಾಗಿದೆ. ಇಂಥ ಗಾಯತೆ ಪ್ರಗತಿಶೀಲರಿಗೆ ದಕ್ಕದಿರುವುದರಿಂದಲೇ ಅಲ್ಲಿಯ ಕಾವ್ಯ ಸತ್ವಪೂರ್ಣವಾಗಿ ಹೊರಹೊಮ್ಮಲಿಲ್ಲ. ಜಾನಪದ ವಸ್ತು, ಲಯಗಾರಿಕೆಯನ್ನು ಬಳಸಿಕೊಂಡದ್ದೇ ಈ ಯಶಸ್ಸಿಗೆ ಕಾರಣವಾಗಿದೆ.

ಸಾಂಸ್ಕೃತಿಕ ಬದುಕಿನ ಸ್ಥಿತ್ಯಂತರಗಳನ್ನು ದಲಿತ ಕಾವ್ಯ ತುಂಬಾ ಸಮರ್ಥವಾಗಿ ಹಿಡಿದೇಳಿದೆ. ಇದರ ಜೊತೆಗೆ ಸಾಂಸ್ಕೃತಿಕ ವಸ್ತುಗಳನ್ನು ಗೌರವಿಸುವುದು ಮಾನವ ಬದುಕಿನ ವಿಕಾರ ಭಾವನೆಗಳನ್ನು ವಿರೋಧಿಸುವುದು, ಹಾಸ್ಯದ ಭಾವದಿಂದ ಹೊರತರುವುದು ಇಂಥ ಗುಣಗಳೆಲ್ಲ ಪದೇ ಪದೆಯಾಗಿ ಗೋಚರವಾಗುತ್ತದೆ. ಇಲ್ಲಿ ಶಿಕ್ಷಣಕ್ಕೆ ಎಲ್ಲಿಲ್ಲದ ಮಹತ್ವ ಸ್ಥಾನ ದೊರೆತಿದೆ.

ಪೌರಾಣಿಕ ಪ್ರತಿಮೆಗಳ ಮೂರ್ತಿ ಭಂಜನೆಯ ಕೆಲಸ ಒಂದೆಡೆ ನಡೆದರೆ ಮತ್ತೊಂದೆಡೆ, ಪೌರಾಣಿಕ ತತ್ವಗಳ ಪುನರ್ ಸೃಷ್ಟಿಯೂ ನಡೆದಿದೆ. ರಾಮನಂತಿಹ ಪಾತ್ರಗಳು ಮೂರ್ತಿ ಭಂಜನೆಗೆ ಸಿಲುಕಿದರೆ, ಏಕಲವ್ಯ, ಕರ್ಣ, ತ್ರಿಶಂಕು ಇಂತಹ ಪಾತ್ರಗಳು ಪುನರ್ ಸೃಷ್ಟಿಗೆ ಒಳಗಾಗಿವೆ. ವಚನ ಸಾಹಿತ್ಯದ ಜಾಡನ್ನು ಕೆಲವರು ಅನುಕರಿಸಿದರೆ ಇನ್ನು ಕೆಲವರು ನವ್ಯದ ಶೈಲಿಯನ್ನೇ ಅನುಕರಿಸಿದ್ದಾರೆ. ಧರ್ಮ, ಶಾಸ್ತ್ರ, ಪುರಾಣಗಳ ಪುನರ್ ವಿಮರ್ಶೆಯೋ ಕಾವ್ಯದಲ್ಲಿ ನಡೆದಿದೆ! ದಲಿತರ ಜೀವನದ ಮಟ್ಟ ಪಶುಪಕ್ಷಿಗಳಿಗಿಂತ ನಾಯಿ, ಹಂದಿಗಳಿಗಿಂತ ಕೀಳಾಗಿದೆ ಎನ್ನುತ್ತ ಸಮಸ್ಯೆಯ ಮೂಲ ಬೇರುಗಳನ್ನು ಕೆದಕಿದ್ದಾರೆ.

ಬುದ್ಧ, ಅಂಬೇಡ್ಕರ್, ಮಾರ್ಕ್ಸ್ ಇಂಥವರ ಚಿಂತನೆಗಳು ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದ್ದು, ವ್ಯಕ್ತಿ ನಿಷ್ಟವಾದ ಕವನಗಳು ನೀರಾಗಿ ಹರಿದಿವೆ. ದೇಶದ ನೆಲ, ನಾಣ್ಯ, ಭಾವುಟ ಇಂತಹ ಎಲ್ಲ ಅಂಶಗಳು ಟೀಕೆಗೆ ಒಳಗಾಗಿವೆ. ಅನ್ನ, ಬಡತನ ಬೆಲೆ ಇಲ್ಲದ ದುಡಿತ, ಇವೆಲ್ಲ ಕಾವ್ಯದಲ್ಲಿ ಕಂಡು ಬಂದರೂ, ಆರಂಭದ ಬಿರುಸು, ಆಕ್ರೋಶಗಳೆಲ್ಲ ಕಡಿಮೆಯಾಗಿ ಈಗ ದಲಿತ ಕಾವ್ಯದ ನಡಿಗೆ ಋಷಿ ಕಾವ್ಯದ ದಿಕ್ಕಿನೆಡೆಗೆ ಹೆಜ್ಜೆ ಹಾಕುವ ಲಕ್ಷಣಗಳು ಗೋಚರವಾಗುತ್ತಿದೆ.

ಅದರಲ್ಲೂ ದಲಿತ ಆತ್ಮಕಥೆಗಳು ಕೇವಲ ಇತರ ಸಾಹಿತಿಗಳ ಆತ್ಮಕತೆಗಳಂತಲ್ಲ. ಅವು ಎಲ್ಲ ವಿಧದಲ್ಲೂ ವ್ಯಕ್ತಿನಿಷ್ಟವಾಗಿ ಹೊರಹೊಮ್ಮುವುದರ ಜೊತೆಗೆ ಜನಾಂಗ ನಿಷ್ಟವಾಗಿ ಮಾಡಿ ಬಂದಿರುವುದು ಅದರ ವಿಶಿಷ್ಟತೆ. ಈ ದಿಕ್ಕಿನೆಡೆಗೆ ಸಾಗಲು, ಅವರ ಆರಂಭದ ವಸ್ತುನಿಷ್ಟ ಶೈಲಿ, ಸಮಷ್ಟಿಯ ಪ್ರಜ್ಞೆ, ಎಂದು ಬತ್ತಿ ಹೋಗದ ಅನುಭವವೇ ಕಾರಣವಾಗಿದೆ.

ದಲಿತ ಸಾಹಿತ್ಯದ ಕೇಂದ್ರ ಭಾವ, ವರ್ಣ ಮತ್ತು ಜಾತಿ ವ್ಯವಸ್ಥೆಯಿಂದ ಕೂಡಿದ, ಒಬ್ಬರನ್ನೊಬ್ಬರ ಮೇಲೆ ನಿಂತ ಗೋಪುರಾಕಾರದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುವುದಾಗಿದೆ. ಹೀಗೆ ಪ್ರಶ್ನಿಸುವುದರಲ್ಲಿ ಭಿನ್ನ ರೀತಿಯ ಅಭಿವ್ಯಕ್ತಿಗಳಿವೆ. ಆದರೆ ಈ ಎಲ್ಲ ಅಭಿವ್ಯಕ್ತಿಗಳಲ್ಲಿ ಮಾನವೀಯತೆಯೇ ಮನೆ ಮಾಡಿಕೊಂಡು ನಿಂತಿದೆ. ಆವೇಶ, ಆರ್ದ್ರತೆ, ವಿಡಂಬನ ಸ್ವರೂಪದ ಅಭಿವ್ಯಕ್ತಿಯೇ ಕೇಂದ್ರವಾಗಿದ್ದು, ಪರಂಪರಾಗತ ಮೌಢ್ಯದ ಮೌಲ್ಯಗಳನ್ನು ಅನಾದರಣೆಯಿಂದ ಕಾಣುವುದು ಗಮನ ಸೆಳೆಯುತ್ತದೆ.

ಅಸ್ಪೃಶ್ಯತೆಯ ನೋವಿನ ವಿವಿಧ ಮಜಲುಗಳನ್ನು ಬಿಚ್ಚಿ ತೋರಿಸುತ್ತ, ಎದುರಾಳಿಯ ಮನಸ್ಸನ್ನು ಕಲಕುವ, ಆತ್ಮವಿಮರ್ಶೆಗೆ ಹಚ್ಚುವ ವಸ್ತುವಿನ ಆಯ್ಕೆ ಮತ್ತು ಬರವಣಿಗೆಯ ಶೈಲಿ ಇಲ್ಲಿ ಪ್ರಧಾನವಾಗಿದೆ. ನೇರ ಪ್ರತಿಭಟನೆ ಎನ್ನುವುದು ಕಾವ್ಯದಲ್ಲಿ ವ್ಯಕ್ತವಾಗಿದೆ. ಆದರೆ ಈ ರೀತಿಯ ಪ್ರತಿಭಟನೆ ಗದ್ಯದ ಬರವಣಿಗೆಗಿಂತ ಶಕ್ತಿಶಾಲಿಯಾದುದು.

ದಲಿತ ಸಾಹಿತ್ಯದ ಮತ್ತೊಂದು ವಿಶಿಷ್ಟ ಗುಣವೆಂದರೆ ವರ್ಗ ಸಮಸ್ಯೆ ಮೇಲು ನೋಟಕ್ಕೆ ಗೋಚರವಾದರೂ ಮುಂದುವರೆದು ದೇಶ ಸಮಸ್ಯೆಗಳಿಗೆ ಸ್ಪಂದಿಸುವ ಗುಣವನ್ನು ಕಾಣುತ್ತೇವೆ. ಜಮೀನ್ದಾರಿ ವರ್ಗ, ಪುರೋಹಿತಶಾಹಿ ವರ್ಗಕ್ಕಿಂತ ಮಿಗಿಲಾಗಿ ವರ್ಣ ಮತ್ತು ಜಾತಿ ಸಂಘರ್ಷವೇ ಬರವಣಿಗೆಯಲ್ಲಿ ಗೋಚರವಾಗಿ, ಬದುಕಿನ ಮಜಲುಗಳು ವಿವಿಧ ರೀತಿಯಲ್ಲಿ ಅನಾವರಣಗೊಳ್ಳುತ್ತದೆ. ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ಇದ್ದಾಗಲೂ ಹೆಣ್ಣೇ ಪ್ರಧಾನ ಪಾತ್ರ ವಹಿಸುವುದು, ಮೊದಲ ತಲೆಮಾರಿನ ಅಕ್ಷರಸ್ಥರು ಬಯಕೆ ಬೇಡಿಕೆಗಳನ್ನು ಅರೆಸುವುದು, ಪ್ರತಿಭಟನೆಗಿಂತ ಸಾಂಸ್ಕೃತಿಕ ಬದುಕೇ ಕೇಂದ್ರವಾಗಿದ್ದು ಕಂಡುಬರುತ್ತದೆ.

ನಗರದ ಬದುಕಿಗಿಂತ ಗ್ರಾಮೀಣ ಬದುಕೇ ಗದ್ಯದ ಬರವಣಿಗೆಯಲ್ಲಿ ತುಂಬಿಕೊಂಡಿದೆ. ವರ್ಣ ಸಂಕರಕ್ಕಾಗಿ ಇಲ್ಲಿಯ ಬರವಣಿಗೆ ಹಾತೊರೆಯುತ್ತದೆ. ಸಾಂಸ್ಕೃತಿಕ ಸಂಘರ್ಷ ಮತ್ತು ಬದಲಾವಣೆಗಳನ್ನು ನಿರೀಕ್ಷಿಸುತ್ತಿದ್ದು, ನಾವು ಶೋಷಣೆಗೆ ಒಳಗಾದವರು ಎಂಬ ಭಾವವನ್ನು ಹೆಜ್ಜೆ ಹೆಜ್ಜೆಗೂ ಮೂಡಿಸುತ್ತದೆ. ಹಸಿವು, ಕಳ್ಳತನ, ಬಡತನ, ಆಂತರಿಕ ಕಲಹ, ಇಂಥವೆಲ್ಲ ಎದ್ದು ಕಂಡರೂ, ಬಡತನದ ದಾರಿದ್ರ್ಯ ಬೆನ್ನು ಹತ್ತಿದಾಗ, ಸಮಾಜದಲ್ಲಿ ಅಸಮಾನತೆ ನೆಲೆಯೂರಿದಾಗ, ಕಳ್ಳತನ ಸಹಜವೆಂಬ ಧ್ವನಿಯನ್ನು ಮುಂದಿಡುತ್ತವೆ. ಇದು ದಲಿತರಲ್ಲಿಯೇ ಇರುವ ನೈತಿಕ ಪರಿಕಲ್ಪನೆಯನ್ನು ಎತ್ತಿ ಹಿಡಿಯಲಾಗಿದೆ.

ನಗರದ ಬದುಕಿನ ಕುರಿತು ಬಂದ ಕೃತಿಗಳು ಕಡಿಮೆ. ಕೆಲ ಕೃತಿಗಳು 'ಜಾತಿ' ಬೆಂಬಿಡದ ಭೂತವಾಗಿ ಕಾಡಿರುವ ಬಗೆಯನ್ನು ದಾಖಲಿಸಿದೆ. ಬ್ರಾಹ್ಮಣನನ್ನು ಪ್ರೀತಿಸುವ ದಲಿತತ್ವವನ್ನು ದೂರಿಡುವ, ಕೊನೆಗೆ ಯಾವುದಕ್ಕೂ ಒಗ್ಗದ, ದ್ವಂದ್ವದ ಬದುಕನ್ನು ನಿಭಾಯಿಸಲಾಗದೆ ಬಳಲುವ ರೀತಿಯನ್ನು ಅನಾವರಣ ಮಾಡುತ್ತದೆ.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ದಲಿತರು ಭಾಷೆಯನ್ನು ತೀರ ಭಿನ್ನ ಸ್ವರೂಪದಲ್ಲಿ ಬಳಸಿದ್ದಾರೆ. ಆರಂಭದಲ್ಲಿ ಆಡು ಭಾಷೆ ಒಂದು ಅಸ್ತ್ರದಂತೆ ಬಳಕೆಯಾಗಿದ್ದು, ಅನಂತರ ಭಾಷೆ ಕಾವ್ಯಾತ್ಮಕ ಮಾರ್ಗಕ್ಕೆ ತಿರುಗಿತು. ಭಾಷೆಯನ್ನು ದಲಿತರು ಸಂಸ್ಕೃತಿಯ ಪ್ರತೀಕವಾಗಿ ಬಳಕೆಗೆ ತಂದರು. ಕನ್ನಡದ ಪ್ರಾದೇಶಿಕ ಭಾಷೆಗಳು ತಮ್ಮದೇ ಆದ ಅಸ್ತಿತ್ವದೊಂದಿಗೆ ಸಾಹಿತ್ಯದಲ್ಲಿ ನೆಲೆ ನಿಂತವು. ಯಾವುದು ಗಮಾರ್ ಭಾಷೆಯೆಂದು ಕರೆಯಲಾಗುತ್ತಿತ್ತೋ ಅದೇ ಗರಮಾ ಗರಮ್ ಭಾಷೆಯಾಗಿ ನಿಂತಿದ್ದಲ್ಲದೆ ದಲಿತ ಚಳುವಳಿಯಿಂದ ಹೊರಗಿರುವ ಇತರ ಲೇಖಕರೂ ಈ ಭಾಷಾ ಶೈಲಿಗೆ ಮನಸೋತಿದ್ದಾರೆ

ಕನ್ನಡ ದಲಿತ ಸಾಹಿತ್ಯ ಅನೇಕ ರೂಪಗಳಲ್ಲಿ ವ್ಯಕ್ತವಾಗಿದೆ. ಮುಖ್ಯವಾಗಿ ಕಾವ್ಯ, ಕತೆ, ಕಾದಂಬರಿ, ನಾಟಕ, ಆತ್ಮಕಥೆ, ಶೋಧನೆ, ವಿಚಾರ, ವಿಮರ್ಶೆ ಮತ್ತು ಪ್ರವಾಸ ಕಥನಗಳು ಉಲ್ಲೇಖಾರ್ಹ. ದಲಿತ ಸಾಹಿತ್ಯದ ಪ್ರತಿಯೊಂದು ಪ್ರಕಾರವು ಪ್ರತ್ಯೇಕ ಗುಣ-ಲಕ್ಷಣಗಳನ್ನು ಹೊಂದಿದೆ. ಜೊತೆಗೆ ಇವುಗಳಲ್ಲಿ ಬಳಕೆಯಾದ ಭಾಷೆ, ಬಂಧ, ಶಿಲ್ಪ, ಸಂಭಾಷಣೆ, ಶೈಲಿ, ತಂತ್ರಗಳು ''ಕನ್ನಡ ದಲಿತ ಸಾಹಿತ್ಯ''ಕ್ಕೆ ಒಂದು ವಿಶಿಷ್ಟ ಪ್ರೇರಣೆಯನ್ನು ಒದಗಿಸಿದವು.

ಇದು ದುಡಿವ ಸಮುದಾಯದ ಸಾಹಿತ್ಯ ಇಲ್ಲಿ ಒಂದು ಪ್ರದೇಶದಲ್ಲಿ ಬದುಕುತ್ತಿರುವ ಶ್ರಮಿಕರ ಬೆವರಿನ ರೂಪಕಗಳಿವೆ. ಇಂತಹ ರೂಪಕಗಳು ಅವರ ನೆಲದ ಪರವಾಗಿದೆ. ಇಲ್ಲಿರುವ ಭಾವ, ತಂತ್ರ, ಮಾತು, ಮೌನಗಳ ಒಡಲಲ್ಲಿ ಹುಟ್ಟು ಆ ನಂತರ ಅಕ್ಷರದ ಬೆಳಕಿನಲ್ಲಿ ಮೊಳೆತವು. ಇಂತಹ ರೂಪಕಗಳು ಪ್ರಾಚೀನ ಹಾಗೂ ಮಧ್ಯಕಾಲೀನ ಸಾಹಿತ್ಯದ ಒಡಲಲ್ಲಿ ಅನೇಕ ಬಂಡಾಯದ ನೆಲೆಗಳಿದ್ದವು. ಇವುಗಳನ್ನು ವಚನ ಸಾಹಿತ್ಯ, ಸೂಫಿ ಸಾಹಿತ್ಯ, ಅನುಭಾವ ಸಾಹಿತ್ಯದ ಒಡಲಲ್ಲಿ ಶೋಧಿಸಬಹುದಾಗಿದೆ. ಎಲ್ಲ ಸಾಹಿತ್ಯಕ್ಕೆ ಮೂಲವಾದ ಜನಪದ ಸಾಹಿತ್ಯದ ಕಥೆ, ಕವ್ಯ, ಮಹಾಕಾವ್ಯ, ಕಥನಗಳಲ್ಲಿ ಶೋಷಿತ ಬದುಕಿನ ಚಿತ್ರಣವಿದೆ, ತ್ಯಾಗವಿದೆ. ಇದರ ಮುಂದುವರಿದ ಹಂತವೇ ಈ ಹೊಸಗನ್ನಡ ದಲಿತ ಸಾಹಿತ್ಯದ ಆಯಾಮ ಎಂದರೆ ತಪ್ಪಾಗಲಾರದು.

ಅಕ್ಷರಗಳ ಬೆಳಕಿನಿಂದ ಮೂಡಿ ಬಂದ ಈ ಎಪ್ಪತ್ತು ಎಂಭತ್ತರ ಸಾಹಿತ್ಯದ ಪ್ರಭಾವ, ಪ್ರೇರಣೆ ಮತ್ತು ಅಭಿವ್ಯಕ್ತಿಯ ಶೈಲಿ ವ್ಯಾಪಕವಾದುದು. ನಂತರ ಇದು ಬಂಡಾಯದೊಂದಿಗೆ ಲೀನವಾಯಿತು ಎಂದು ಹೇಳಿದರೂ, ದಲಿತ ಶೋಷಿತರ ಸಾಹಿತ್ಯ ಎಲ್ಲಾ ಕಾಲದಲ್ಲೂ ಒಂದೇ ಬಗೆಯ ರೂಪದಲ್ಲಿ ಹೊರಹೊಮ್ಮಿಲ್ಲ. ಅದು ತನ್ನ ಏಕತಾನತೆಯನ್ನು ಮೀರಿ ಸಮಾಜವನ್ನು ಚಿಂತನೆಯ ಹಾದಿಯನ್ನು ಹಿಡಿಯುವಂತೆ ಮಾಡಿದೆ. ದಲಿತ ಸಾಹಿತ್ಯದ ಸ್ವರೂಪವನ್ನು ಕಾವ್ಯ, ಕತೆ, ಕಾದಂಬರಿ, ನಾಟಕ, ಆತ್ಮಕತೆಗಳ ವಿವಿಧ ರೂಪವನ್ನು ಸಂಕ್ಷಿಪ್ತವಾಗಿ ನೋಡಬಹುದು.

ಸಿದ್ಧಲಿಂಗಯ್ಯನವರು ತಮ್ಮ ''ಕಪ್ಪುಕಾಡಿನ ಹಾಡು (೧೯೮೩) ಸಂಕಲನದಲ್ಲಿ ''ಗುಡಿಸಲಲ್ಲಿ ಅರಳುವ ಗುಲಾಬಿ ನಕ್ಷತ್ರ ನನ್ನ ಕವನ, ಕತ್ತಲೆ ಕಾಣುವ ಬೆಳಕು ಬಂಡಾಯದ ಈ ಕವನ'' ಎಂದಿದ್ದಾರೆ. ಗುಡಿಸಲಲ್ಲಿ ಗುಲಾಬಿಯನ್ನು ಕತ್ತಲಲ್ಲಿ ಬೆಳಕನ್ನು ಹುಡುಕುವ ಆಶಯ ಈ ಕವನದ್ದು 'ಮೆರವಣಿಗೆ' ಕವಿತೆಯನ್ನು ಅವರ ಕವನ ಕನವರಿಸುತ್ತದೆ. ಹಂಬಲಿಸುವಿಕೆ, ಹಾರೈಕೆ, ಮರುಗುವಿಕೆ, ಇವೇ ಮೊದಲಾದ ಪದಗಳು ದಲಿತ ಬದುಕಿನ ನೋವಿನ ನಿವೇದನೆಗಳಾಗಿವೆ. ''ನನ್ನ ಜನ ನಿನ್ನ ದಿನ ಬೆಟ್ಟದಂತೆ ಬಂದರು'' ಎನ್ನುವಲ್ಲಿ ತನ್ನವರ ಬಗ್ಗೆ ಹಂಬಲವಿದೆ. ''ಇಕ್ರಲಾ ವದಿರ್ಲಾ ಈ ನನ್ನ ಮಕ್ಳ ಚರ್ಮ ಎಬ್ರಲಾ'' ಎನ್ನುವಲ್ಲಿ ಆಕ್ರೋಶವಿದೆ. ಜಾತಿ ಕೀಳು ಎಂಬ ಕಾರಣದಿಂದಾಗಿ ನಿರಂತರವಾಗಿ ಇಕ್ಕಿಸಿಕೊಂಡವರು, ಒದಿಸಿಕೊಂಡವರು ತಮಗೆ ಬಾಯಿ ಬಂದಾಗ ತಮ್ಮ ನೋವು ಅಸಹಾಯಕತೆಗಳನ್ನು ಕಾವ್ಯದಲ್ಲಿ

ಇಂಥ ಪದಪ್ರಯೋಗಗಳ ಮೂಲಕ ಪ್ರಕಟಪಡಿಸಿದ್ದಾರೆ. ಅಂದರೆ ದಲಿತ ಕಾವ್ಯ ಏಕಕಾಲಕ್ಕೆ ತನ್ನನ್ನು, ತನ್ನವರನ್ನು ಹುರಿದುಂಬಿಸಿಕೊಳ್ಳುತ್ತಾರೆ ಇತರರ ಬಗ್ಗೆ ಎಚ್ಚರಿಕೆ ಹೊಂದಿದೆ.

ಕನ್ನಡದ ಸಂದರ್ಭದಲ್ಲಿ ದಲಿತ ಕಾವ್ಯ ತನ್ನನ್ನು ಸಮರ್ಥವಾಗಿ ಗುರುತಿಸಿಕೊಂಡಿದೆ. ಅಂಥ ಕ್ಷೇತ್ರಗಳಲ್ಲಿ ಪುರಾಣ, ಚರಿತ್ರೆ ಮತ್ತು ವಾಸ್ತವ ಎಂಬ ಮೂರು ನೆಲೆಗಳು ತುಂಬಾ ಮುಖ್ಯವಾಗಿವೆ. ಪುರಾಣ ಸೃಷ್ಟಿಯ ಹಿಂದೆ ಬಹುದೊಡ್ಡ ಆಶಯವಿದೆ. ಅಲ್ಲಿ ದೇವರು ದೆವ್ವ, ವ್ಯಕ್ತಿ, ಶಕ್ತಿ, ಬೆಳಕು-ಬೆಂಕಿ, ಎಲ್ಲವೂ ಇದೆ. ಆದ್ದರಿಂದ ಇಲ್ಲಿ ಅರ್ಜುನ ದ್ರೋಣರ ಜೊತೆಗೆ ಏಕಲವ್ಯ-ಕರ್ಣರೂ ವಿಭಿನ್ನ ನೆಲೆಯಲ್ಲಿ ಚಿತ್ರಣಗೊಳ್ಳುತ್ತಾರೆ. ಇಲ್ಲಿ ಬರುವ ಕರ್ಣ, ಏಕಲವ್ಯ, ಶಾಂಬೂಕ, ಅಹಲ್ಯೆ, ರೇಣುಕೆಯರ ಆಕೃತಿಗಳನ್ನು ತನಗೆ ಮೊಲ ನೆಲೆಯಾಗಿ, ಚೈತನ್ಯದ ಸೆಲೆಯಾಗಿ ತೆಗೆದುಕೊಂಡಿದ್ದಾರೆ. ಅದೇ ಸಂದರ್ಭದಲ್ಲಿ ದ್ರೋಣ, ಅರ್ಜುನ, ಜಮದಗ್ನಿ, ಗೌತಮರ ಆಕೃತಿಗಳನ್ನು ಛಿದ್ರಿಸಿದೆ. ಈ ರೀತಿಯ ಪುರಾಣ ಭಂಜನದ ಪ್ರಕ್ರಿಯೆಗೆ ಅರವಿಂದ ಮಾಲಗತ್ತಿಯವರ 'ಮೂಕನಿಗೆ ಬಾಯಿ ಬಂದಾಗ' ಕವಿತೆ ಉತ್ತಮ ಉದಾಹರಣೆಯಾಗಿದೆ.

ಓರ್ವ ಮೂಕನಿಗೆ ಬಾಯಿ ಬಂದಾಗ ಆತ ಮೊದಲು ತನ್ನ ಮೂಕತನಕ್ಕೆ ಕಾರಣರಾದವರ ವಿರುದ್ಧ ಮಾತನಾಡುತ್ತಾನೆ.

> "ನರ್ತಿಸು ನರ್ತಿಸೆಲೆ ಶ್ಯಾರದೆ ನರ್ತಿಸು
> ನೀನೆನ್ನ ನಾಲಗೆಯ ಮೇಲೆ ನರ್ತಿಸು
> . . . .
> ದೀನ ದಲಿತರ ಕೂಗಿಗೆ ಶಬ್ಧವಿಲ್ಲದ ಹಾಡಿಗೆ॥

ಎಂದು ಶಾರದೆಯ ವಿರುದ್ಧವೇ ಕವಿ ಸವಾಲು ಹಾಕುತ್ತಾನೆ. ಕಾರಣ, ಶತಮಾನಗಳುದ್ದಕ್ಕೂ ತನ್ನ ನಾಲಗೆಯಲ್ಲಿ 'ಅಕ್ಷರ'ವಾಗದ ಶಾರದೆಯ ಬಗ್ಗೆ ಕವಿಯಲ್ಲಿ ಆಕ್ರೋಶವಿದೆ. ಇಂಥ ಸ್ವರೂಪವನ್ನು ಬೆಂಬಲಿಸುವ ಮನಜ ಅವರ 'ಅಪ್ಪ ಹೇಳಿದ ಉಪ್ಪ ನೀರಕತೆ', ಮುಳ್ಳೂರು ನಾಗರಾಜ ಅವರ ನೆಲದ ಜೋಗುಳ, ಗಂಗಾರಾಂ ಚಂಡಾಳ ಅವರ 'ದಸ್‌ರಾತ್ರಿ' ಮುಂತಾದ ಕವಿತೆಗಳು ಉಲ್ಲೇಖಾರ್ಹ.

ಇದುವರೆಗಿನ ಚರಿತ್ರೆಯ ಬಗ್ಗೆ ದಲಿತ ಕಾವ್ಯಕ್ಕೆ ತುಂಬಾ ಸಿಟ್ಟಿದೆ. ಏಕೆಂದರೆ, ಯಾರಿಂದಲೋ ಬರೆಯಲ್ಪಟ್ಟ ಆ ಚರಿತ್ರೆಯಲ್ಲಿ ತನ್ನ ಸಮುದಾಯದ ಯಾವ ಸಂವೇದನೆಯೂ ದಾಖಲಾಗದಿರುವುದು ಈ ಸಿಟ್ಟಿಗೆ ಕಾರಣ. ಆದರೂ ಆ ಚರಿತ್ರೆಯಲ್ಲಿ ಸೇರದೆ ತನ್ನದೇ ಆದ ಕೆಲ ಸ್ಫೂರ್ತಿಗಳಿವೆ. ಅಂಬೇಡ್ಕರ್ ಅಂತಹ ಸ್ಫೂರ್ತಿಯ ಸೆಲೆ. ಆದ್ದರಿಂದ ಕನ್ನಡದ ಬಹುತೇಕ ದಲಿತ ಕಾವ್ಯದ ಕೇಂದ್ರ ಪ್ರಜ್ಞೆ ಡಾ. ಅಂಬೇಡ್ಕರ್ ಆಗಿರುವುದು ಗಮನಾರ್ಹ.

"ನಾಡ ಒಡಲಲಿನಿಂದ ಸಿಡಿದ ನೋವಿನ ಕೂಗೆ ಆಕಾಶದ ಅಗಲಕ್ಕೂ ನಿಂತ ಆಲವೆ"[೨]. ಸತ್ಯಾನಂದ ಪಾತ್ರೋಟರಂತಹ ಚಿಂತಕರು ಬದುಕಿನ ವಾಸ್ತವ ಆಶಯಗಳಿಗೆ ಬೆಲೆಕೊಟ್ಟು ೧೨ನೇ ಶತಮಾನದ ಅಕ್ಕನಿಗೂ, ೨೧ನೇ ಶತಮಾನದ ಅಕ್ಕನಿಗೂ ಅಂತರವನ್ನು ಕಾಣುತ್ತಾರೆ. ಮನಜ ಅವರ 'ಹೊಲೆ ಮಾದಿಗರ ಮನೆಯ ಮಗ', 'ಶಿವೈಕ್ಯ ಹೊಲೇರ ಶಿವನಂಜು' ಕವಿತೆಗಳೂ ಸೇರುತ್ತವೆ. ಇಲ್ಲಿ ಗ್ರಹಿಸುವ ಬಸವಣ್ಣನ ವ್ಯಕ್ತಿತ್ವದ ಮಾದರಿಗಳು ದಲಿತ ಕಾವ್ಯದ ಸ್ವರೂಪವನ್ನು ಎತ್ತಿ ಹೇಳುತ್ತದೆ.

ದಲಿತ ಕಾವ್ಯಕ್ಕೆ ವಾಸ್ತವ ಯಾವಾಗಲೂ ಕಠಿಣವಾಗಿ ಕಾಡಿದೆ. ವಾಸ್ತವದಲ್ಲಿ ನಿಂತು ಗತವನ್ನು ನೆನಪಿಸಿಕೊಳ್ಳುವ ದಲಿತ ಸಾಹಿತಿಗಳು ಭೂಮಿಯನ್ನು ತಾಯಿಯಂತೆ ಕಾಣುತ್ತಾರೆ. ಇದು ಅಲ್ಲಿನ ವಿಶಿಷ್ಟತೆಯಾಗಿದೆ. ಇದಕ್ಕೆ ಸಮೀಪದಲ್ಲೇ ಸ್ತ್ರೀಪರ ಕಾಳಜಿಯನ್ನು ದಲಿತ ಕಾವ್ಯಕ್ಕೆ ತುಂಬಿದ ಬಿ.ಟಿ.ಲಲಿತನಾಯಕ್, ಸರಸ್ವತಿ ಚಿಮ್ಮಲಗಿ, ಸುಕನ್ಯಾ ಮಾರುತಿ, ಗೀತಾ ನಾಗಭೂಷಣ, ಮಲ್ಲಿಕಾ ಘಂಟಿ, ಅನಸೂಯ ಕಂಬಳಿ, ಮೊದಲಾದವರು ಗಮನಾರ್ಹರಾಗಿದ್ದಾರೆ. ಇಲ್ಲಿ ಸ್ತ್ರೀಯರ ಸ್ತ್ರೀಪರ ಧೋರಣೆಗಳು ಪುರುಷರ ಸ್ತ್ರೀಪರ ಕಾಳಜಿಯಿಂದ ಭಿನ್ನವಾಗಿದೆ. ಸ್ತ್ರೀಯರದು ಸ್ವ ಅನುಭೂತಿಯಾದರೆ ಪುರುಷರದು ಸಹಾನುಭೂತಿಯಾಗಿದೆ.

ದಲಿತ ಕಥಾ ಸಾಹಿತ್ಯಕ್ಕೆ ಕೆಲ ವಿಶೇಷ ಲಕ್ಷಣಗಳಿವೆ. ದೇವನೂರು ಮಹಾದೇವ, ಮೊಗಳ್ಳಿ ಗಣೇಶ, ಚಿನ್ನಣ್ಣ ವಾಲೀಕಾರ ಮುಂತಾದವರ ಕೃತಿಗಳು, ದಲಿತ ಜಗತ್ತಿನ ಸಾಚಾ ಅನುಭವಗಳನ್ನು ಹೊಂದಿದೆ. ಈ ಮಾತಿಗೆ 'ದ್ಯಾವನೂರು', 'ಒಡಲಾಳ', 'ಭೂಮಿ', 'ಬುಗುರಿ' ಇವುಗಳ ಕಥನ ಮಾದರಿಯೇ ಸಾಕ್ಷಿ. ಇಲ್ಲಿಯ ಲೇಖಕರು ಮೊದಲ ತಲೆಮಾರಿನ ಅಕ್ಷರಸ್ಥರು ತಮ್ಮ ಮೂಲ ಸಂವೇದನೆಯ ಜೊತೆಗೆ ಪ್ರಗತಿಪರವಾದ ಸೈದ್ಧಾಂತಿಕ ನಿಲುವುಗಳನ್ನು ಹೊಂದಿದವರು. ಹಾಗಾಗಿ ದಲಿತರ ಭೂತ-ವರ್ತಮಾನ ಮತ್ತು ಭವಿಷತ್ ಚಿತ್ರಣಗೊಂಡಿದೆ. ಇದೇ ನೆಲೆಯಲ್ಲಿ ಮೂಡಿ ಬಂದ ದಲಿತ ಕಾದಂಬರಿ ಸಾಹಿತ್ಯವು ಸಹ ದಲಿತರ ಜಾತಿ, ಮತ, ಹನಿವು ನೋವನ್ನು ಅಭಿವ್ಯಕ್ತಿಸಿದೆ. ಉನ್ನತ-ಅವನತ ಜಾತಿಗಳ ನಡುವೆ ನಡೆಯುವ ಲೈಂಗಿಕ ಸಂಬಂಧಗಳು ಗೀತಾ ನಾಗಭೂಷಣ, ಬರಗೂರು, ದೇವನೂರು, ಮನಜ, ಲಲಿತಾ ನಾಯಕ, ಮಾಲಗತ್ತಿ ಮುಂತಾದವರ ಕೃತಿಗಳಲ್ಲಿ ದಟ್ಟವಾಗಿದೆ. ಇವು ಈ ಕೃತಿಗಳಿಗೆ ದಲಿತತ್ವದ ಸ್ವರೂಪ ತಂದುಕೊಟ್ಟಿದೆ. ಉದಾಹರಣೆ: ಕುಸುಮಬಾಲೆ, ಕಾರ್ಯ, ಮಾಗಿ, ಸೂರ್ಯ, ಬೆಂಕಿ ಮತ್ತು ಇತರ ಕಾದಂಬರಿಗಳು ಕಾಮ-ಪ್ರೇಮ, ಹಸಿವು-ನೋವಿನ ಆಚೆಗೂ ಮಾತಾಡುತ್ತವೆ.

ಸಂಖ್ಯೆಯಲ್ಲಿ ದಲಿತ ನಾಟಕಗಳ ಸಂಖ್ಯೆ ತುಂಬಾ ಕಡಿಮೆ. ಆದರೆ, ಹೊಂದಿರುವ ಲಕ್ಷಣ, ಕೊಟ್ಟಿರುವ ಆಶಯಗಳನ್ನು ನೋಡಿದರೆ ಈ ನಾಟಕಗಳು ಅದ್ಭುತ ಪರಿಣಾಮವನ್ನು ಉಂಟು ಮಾಡಿವೆ. ವಿಶೇಷವಾಗಿ ಪೌರಾಣಿಕ, ಚಾರಿತ್ರಿಕ ಮತ್ತು ವಾಸ್ತವಿಕ ನೆಲೆಯ ವಸ್ತುವನ್ನು

ದುಡಿಸಿಕೊಳ್ಳುವಲ್ಲಿ ಇಲ್ಲಿಯ ಕೆಲ ನಾಟಕಗಳು ಯಶಸ್ವಿಯಾಗಿವೆ. ಪ್ರಯೋಗವನ್ನು ಕಂಡಿವೆ. ಸಿದ್ಧಲಿಂಗಯ್ಯನವರ 'ಏಕಲವ್ಯ' ಪಾತ್ರೋಟ್ಸ‌ರ ಮತ್ತೊಬ್ಬ ಏಕಲವ್ಯ', ಮನಜ ಅವರ 'ಬುದ್ಧ', ಹನುಮಂತಯ್ಯನವರ 'ಅಂಬೇಡ್ಕರ್', 'ಪಂಚಮ' ಮಲ್ಲಿಕಾ ಘಂಟಿಯವರ 'ಜಾಜ' ರಂಗರಾಜ ವನದುರ್ಗ ಅವರ 'ಬಂಡೆದ್ದವರು', ಬಿ.ಚೆನ್ನಸ್ವಾಮಿಯವರ 'ಕೆಂಡಮಂಡಲ', 'ಅಂಗಭಂಗ' 'ಅಪಘಾತ' 'ಡಿ.ಆರ್.ತುಕಾರಾಮರ', ಬೋಧಿಸತ್ವ, ಎಸ್.ಮಾಲತಿಯವರ 'ದಲಿತ ಲೋಕ', ಡಾ.ಅರವಿಂದ ಮಾಲಗತ್ತಿಯವರ 'ಸಮುದ್ರದೊಳಗಣ ಉಪ್ಪು' ಮುಂತಾದ ನಾಟಕಗಳು ತುಂಬಾ ಮುಖ್ಯವಾದವು. ಇವುಗಳೊಂದಿಗೆ 'ಬೆಲ್ಚಿ' 'ಭಾರತೀಪುರ'ದಂತಹ ಬೀದಿ ನಾಟಕಗಳು ಪ್ರದರ್ಶನ ಕಂಡಿವೆ. ಆ ಮೂಲಕ ದಲಿತ ಕೇರಿಗಳಲ್ಲಿ ಸ್ವಾಭಿಮಾನದ ಅರಿವು ಮೂಡಿಸಿದೆ. ನಾಟಕಗಳಲ್ಲಿನ ಸಂಭಾಷಣೆಗಳಲ್ಲಿ ವರ್ಗ ತಾರತಮ್ಯವನ್ನು ಎತ್ತಿ ತೋರುವಂತಹುದು. ಆಗ ಸಹಜವಾಗಿಯೇ ಪ್ರೇಕ್ಷಕ ತನ್ನನ್ನು ತುಳಿದ, ತುಳಿಯುತ್ತಿರುವವರ ವಿರುದ್ಧ ಸ್ಫೋಟಗೊಳ್ಳುತ್ತಾನೆ. ಇಂಥ ಸಾಮಾಜಿಕ ಪರಿವರ್ತನೆಯ ಉದ್ದೇಶ ಎಲ್ಲಾ ನಾಟಕಗಳಿಗೂ ಇದೆ.

ಕನ್ನಡ ದಲಿತ ಆತ್ಮಕತೆಗೆ ಸಂಬಂಧಿಸಿದಂತೆ ಮರಾಠಿಯ ದಲಿತ ಪ್ಲಾಂಥರ್ಸ್‌ನ ಪ್ರಭಾವದಿಂದ ಕನ್ನಡದಲ್ಲಿ ಕಾಣಿಸಿಕೊಂಡಂತಹ ಆತ್ಮಕಥೆಗಳು ಗೌರ್ನಮೆಂಟ್ ಬ್ರಾಹ್ಮಣ, ಮಣಿಗಾರ, ಊರುಕೇರಿ, ಮನವಿಲ್ಲದವರ ಮಧ್ಯೆ, ಕತ್ತಾಲೆ ಬೆಳದಿಂಗಳು ಮುಂತಾದ ಕೃತಿಗಳು ಅಂತರಂಗದ ಹಸಿವನ್ನು ಅಕ್ಷರವಾಗಿ ದಾಖಲಿಸಿವೆ. ಅವಮಾನದಿಂದ ಸ್ವಾಭಿಮಾನದ ಕಡೆ ನಡೆಸಿದ ದಲಿತರ ಪ್ರಯಾಣಕ್ಕೆ ಇಲ್ಲಿ ಶಿಕ್ಷಣ, ಸಂಘಟನೆ, ಹೋರಾಟಗಳು ಊರುಗೋಲಾಗಿವೆ. ಮಹಾರಾಷ್ಟ್ರದ ಸಾಮಾಜಿಕ ಸ್ಥಿತಿ-ಗತಿಗಳನ್ನು ತೆರೆದು ತೋರುತ್ತವೆ. ಹಾಗೆಯೇ ಕರ್ನಾಟಕದ ವ್ಯವಸ್ಥೆ ಕೂಡ 'ಮಣೇಗಾರ'ದಲ್ಲಿ ಮೂಡಿಬಂದಿವೆ. ಒಟ್ಟಾರೆ ವ್ಯಕ್ತಿಯ ವೈಯಕ್ತಿಕ ಅನಿಸಿಕೆಗಳು ಇಲ್ಲಿ ಆತ್ಮಕತೆಯ ಮೂಲಕ ಅಕ್ಷರವಾಗುವಲ್ಲಿ ಸಾಮೂಹಿಕ ನಿಲುವುಗಳಾಗಿ ನಿಲ್ಲುತ್ತವೆ.'

ಇತ್ತೀಚಿನ ದಿನಗಳಲ್ಲಿ ವಿಚಾರ ಮತ್ತು ವಿಮರ್ಶಾ ಸಾಹಿತ್ಯದಲ್ಲಿ ಭಾರಿ ಬದಲಾವಣೆಗಳು ಉಂಟಾಗಿವೆ. ಸ್ತ್ರೀವಾದ ಮುಖ್ಯವಾದ ಮತ್ತು ಇನ್ನಿತರ ವಿಮರ್ಶೆಯ ಶಿಸ್ತುಗಳ ಜೊತೆಗೆ ಈಗ ಅಂಬೇಡ್ಕರ್‌ವಾದದ ಮಾನದಂಡಗಳು ಬಿರುಸಾಗಿ ಮಾತಾಡುತ್ತಿದೆ. ಒಂದು ಕಾಲಕ್ಕೆ ತನ್ನದೇ ಒಂದು ವಿಮರ್ಶೆ ವಲಯವನ್ನು ದಲಿತ ಬಂಡಾಯ ಸಾಹಿತ್ಯ ಬಯಸುತ್ತಿತ್ತು. ಇದರಲ್ಲಿ ರಾಜಪ್ಪ ದಳವಾಯಿ, ಮಾಲಗತ್ತಿ, ಮನಜ, ಬರಗೂರು ರಾಮಚಂದ್ರಪ್ಪ ಮೊದಲಾದವರ ಬರಹಗಳಲ್ಲಿ ವಿಮರ್ಶೆಯನ್ನು ನೋಡಬಹುದಾಗಿದೆ. ದಲಿತ ಸಾಹಿತ್ಯ ತನ್ನದೇ ಆದ ಗುಣ-ಲಕ್ಷಣಗಳನ್ನು ರೀತಿ-ರಿವಾಜುಗಳನ್ನು ಒಳಗೊಂಡಿದೆ. ಇದರೊಂದಿಗೆ ಪತ್ರಿಕೆ, ಸಿನಿಮಾ, ಸಾಹಿತ್ಯಗಳು ದಲಿತ ಬದುಕಿನ ಹಲವು ಆಯಾಮಗಳನ್ನು ಬಿತ್ತಿರುಸುತ್ತದೆ.

ಒಟ್ಟಾರೆಯಾಗಿ ಇತ್ತೀಚಿನ ದಿನಗಳಲ್ಲಿ ಸಮಾಜ ಅನೇಕ ಸ್ಥಿತ್ಯಂತರಗಳನ್ನು ಹೊಂದುತ್ತಿರುತ್ತದೆ. ಅಭದ್ರತೆಯ ಕರಿ ಛಾಯೆಯೊಂದಿಗೆ ಭಯ ತುಂಬಿದ ಬದುಕನ್ನು ಮನುಷ್ಯ

ನಡೆಸುತ್ತಿದ್ದಾನೆ. ಇಡೀ ಜಗತ್ತನ್ನು ಒಂದು ಗ್ರಾಮದಂತೆ ನೋಡುವ ಜಾಗತೀಕರಣದ ಸವಾಲುಗಳನ್ನು ಇತರ ಸಾಹಿತ್ಯದಂತೆ ದಲಿತ ಸಾಹಿತ್ಯವು ಎದುರಿಸಬೇಕಾಗಿದೆ. ಹೇಗೆಂದರೆ ಕಾಲದಿಂದಲೂ ಜೀತ ವ್ಯವಸ್ಥೆಯಲ್ಲಿ ತನ್ನ ನಲಿವನ್ನು ಕಂಡ ದಲಿತ ಇಂದು ಎಚ್ಚರಿಕೆಯಿಂದ ಚೇತರಿಸಿಕೊಳ್ಳುತ್ತಿದ್ದಾನೆ ಎನ್ನುವುದರಲ್ಲೇ ಪರರಾಷ್ಟ್ರವೊಂದು ಪರೋಕ್ಷವಾಗಿ ನಮ್ಮ ದೇಶದ ಚುಕ್ಕಾಣಿಯನ್ನು ಹಿಡಿದರೆ ನಮ್ಮ ದಲಿತರು ಅತಂತ್ರ ಸ್ಥಿತಿಗೆ ಸಿಲುಕಿ ಮತ್ತೊಂದು ಬಗೆಯ ಸಮಸ್ಯೆಯನ್ನು ಎದುರಿಸಬೇಕಾಗಿ ಬಂದಿದೆ.

ಅಡಿಟಿಪ್ಪಣಿ

೧. ಕನ್ನಡ ದಲಿತ ಸಾಹಿತ್ಯ – ಸ್ವರೂಪ ಮತ್ತು ಸಾಧ್ಯತೆ, ರಂಗರಾಜ ವನದುರ್ಗ.

೩. ದಲಿತ ಸಾಹಿತ್ಯ : ಪ್ರಭಾವ – ಪ್ರೇರಣೆ ಮತ್ತು ಹಿನ್ನೆಲೆ

ಒಂದು ನಿರ್ಧಿಷ್ಟ ಸಾಹಿತ್ಯ ಪರಂಪರೆಯು ತನ್ನ ಸಾಧ್ಯತೆಗಳನ್ನು ತೀರಿಸಿಕೊಂಡು ಜಡವಾಗಿ ಹೋಗುವ ಹೊತ್ತಿಗೆ ಇನ್ನೊಂದು ಸಾಹಿತ್ಯ ಪರಂಪರೆಯ ಉಗಮಕ್ಕೆ ಕಾರಣವಾದ ಅಂಶಗಳನ್ನು ತನ್ನ ಒಡಲಲ್ಲಿ ಧರಿಸಿಕೊಂಡಿರುತ್ತದೆ. ಪ್ರಮುಖವಾದ ಇದರ ಜೊತೆಗೆ ಅನ್ಯ ದೇಶದ ಅನ್ಯ ಕಾಲದ ಅನ್ಯ ಶಿಸ್ತಿನ ಹತ್ತು ಹಲವು ಸಂಗತಿಗಳು ಹೊಸ ಸಾಹಿತ್ಯದ ಉಗಮಕ್ಕೆ ಕಾರಣವಾಗುತ್ತದೆ. ಇಂತಹ ಸಂಗತಿಗಳು ಸಾಹಿತ್ಯದ ಅನನ್ಯತೆಗೆ ಕಾರಣವಾದ ಸೃಜನಶೀಲತೆಯ ನೆಲೆಗಳನ್ನು ಅರ್ಥೈಸುವುದಕ್ಕೆ ಸುಭದ್ರವಾದ ಒಂದು ನೆಲೆಗಟ್ಟನ್ನು ಒದಗಿಸಿಕೊಡುತ್ತದೆ.

ಒಂದು ನಿರ್ಧಿಷ್ಟ ಕಾಲಘಟ್ಟದಲ್ಲಿ ಜರುಗಿದ ಎಲ್ಲ ನೈಜ ಘಟನೆಗಳ ಪ್ರಭಾವ ಆ ಕಾಲಘಟ್ಟದ ಸಾಹಿತ್ಯ ಕೃತಿಯಲ್ಲಿ ಪ್ರತಿಬಿಂಬಿತವಾಗಬೇಕು. ಇದರಿಂದ ಸಾಹಿತ್ಯದ ಆಂತರಿಕ ಅರ್ಥ ವಲಯಕ್ಕೂ ಸಾಮಾಜಿಕ ಬಹಿರ್ ಪ್ರಪಂಚಕ್ಕೂ ಒಂದು ವಿಧದ ಸಂಬಂಧ ಏರ್ಪಡುತ್ತದೆ. ಶೋಷಣೆ ಪ್ರಸ್ತುತ ಸಮಾಜದಲ್ಲಿ ಕಾಲದಿಂದಲೂ ನಿರಂತರವಾಗಿ ನಡೆಯುತ್ತ ಬಂದಿದ್ದರೂ ಅದು ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವುದಕ್ಕೆ ಆರಂಭವಾದದ್ದು ೨೦ನೇ ಶತಮಾನದಿಂದೀಚೆಗೆ. ವಚನಗಳು, ದಾಸ ಸಾಹಿತ್ಯ ಇವೇ ಮೊದಲಾದ ಚಳುವಳಿಗಳ ರೂಪದಲ್ಲಿ ಕಾಣಿಸಿಕೊಂಡರೂ ನಂತರ ಅದು ಒಂದು ಸಾಂಸ್ಥಿಕ ಧರ್ಮವಾಯಿತು.

ದಲಿತ ಸಾಹಿತ್ಯ ಚಳುವಳಿಯು ಪ್ರಬಲವಾಗಿ ಕಾಣಿಸಿಕೊಂಡಿದ್ದು, ೧೯೭೦ರ ದಶಕದ ಉತ್ತರಾರ್ಧದಲ್ಲಿ. ಅದೇ ದಶಕದಲ್ಲಿ ನಡೆದ ಅನೇಕ ಘಟನೆಗಳು ಆ ಚಳುವಳಿಗೆ ಪ್ರೇರಣೆ ನೀಡಿದೆ ಮತ್ತು ಆ ಪ್ರೇರಣೆಗಳೇ ಚಳುವಳಿಯ ಮುಖ್ಯ ಪ್ರವೃತ್ತಿಗಳ ಸ್ವರೂಪವನ್ನು ನಿರ್ಧರಿಸಿದೆ. ಅಧ್ಯಯನದ ಸೌಕರ್ಯದಿಂದಾಗಿ ಈ ಪ್ರೇರಣೆಗಳನ್ನು 'ಸಾಹಿತ್ಯೇತರ ಮತ್ತು ಸಾಹಿತ್ಯಕ' ಎಂದು ೨ ರೀತಿಯಿಂದ ವಿಭಜಿಸಿಕೊಳ್ಳಬಹುದು. ಸಾಹಿತ್ಯೇತರ ಪ್ರೇರಣೆಗಳಲ್ಲಿ ಸಿದ್ಧಾಂತ ಹಾಗೂ ಚಳುವಳಿಗಳು ಪತ್ರಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ.

ಸಾಹಿತ್ಯೇತರ ಪ್ರೇರಣೆಗಳು

೧. **ಮಾರ್ಕ್ಸ್‌ವಾದ:** ಕನ್ನಡದಲ್ಲಿ ಪ್ರಗತಿಶೀಲ ಚಳುವಳಿಗೆ ಪ್ರೇರಣೆ ನೀಡಿದ ಮಾರ್ಕ್ಸ್‌ವಾದವು ಬಂಡಾಯ ದಲಿತಕ್ಕೂ ಪ್ರಮುಖ ಪ್ರೇರಣೆ ನೀಡಿತು. ಈ ವಾದದ ಪ್ರಭಾವದಿಂದ ಬರಹಗಾರರು ಎಲ್ಲ ಜಾತಿಯ ಬಡವರನ್ನೂ ಸಮಾನರೆಂದು ಗುರುತಿಸಿ ವರ್ಗಸಂಘರ್ಷಕ್ಕೆ ಪ್ರಚೋದನೆ ನೀಡಿದರು. ಜಾತಿಯೊಂದಿಗೆ ಆರ್ಥಿಕತೆಗೆ ಮಹತ್ವ ನೀಡಿ ಅದನ್ನು ಸಾಹಿತ್ಯದೊಂದಿಗೆ ಚರ್ಚಿಸತೊಡಗಿದರು. ಸಾಹಿತ್ಯ ಕೃತಿ ತಿಳಿದೋ ತಿಳಿಯದೆಯೋ ಬರಹಗಾರನ ವರ್ಗದ ಮಾನಸಿಕ ಧೋರಣೆಗಳನ್ನು ಪ್ರತಿಬಿಂಬಿಸುತ್ತದೆ.

ಆಗ ಬರಹಗಾರರು ಕೃತಿಯ ವಸ್ತುವಿನ ಬಗ್ಗೆ ಅದರಲ್ಲಿರುವ ಸಮಾಜ ರೂಪದ ಬಗ್ಗೆ ಹೆಚ್ಚಿನ ಗಮನ ಹರಿಸುತ್ತಾರೆ. ಇಂತಹ ಸಾಹಿತ್ಯದಲ್ಲಿ ವಸ್ತುವೇ ಮುಖ್ಯ.

೨. **ಲೋಹಿಯಾವಾದ:** ಆಧುನಿಕ ಭಾರತದಲ್ಲಿ ಒಂದು ಸೈದ್ಧಾಂತಿಕ ಶಕ್ತಿಯಾಗಿ ಮತ್ತು ರಾಜಕೀಯ ಚಳುವಳಿಯಾಗಿ ಸಮಕಾಲೀನ ಬದುಕನ್ನು ಸಾಕಷ್ಟು ಪ್ರಭಾವಿಸಿದ ಶಕ್ತಿಯೆಂದರೆ ಲೋಹಿಯಾವಾದ. ಈ ಸಿದ್ಧಾಂತವು ಬ್ರಾಹ್ಮಣೇತರ ಬರಹಗಾರರಿಗೆ ಪ್ರಮುಖ ಪ್ರೇರಣೆಯಾದವು. ಅಧಿಕಾರ ವಿಕೇಂದ್ರೀಕರಣ ಮತ್ತು ಅಧಿಕಾರ ನಾಶಕ್ಕೂ ಇವು ಬೆನ್ನೆಲುಬಾದವು. ಜಾತಿ ಪದ್ಧತಿಯ ಬಗ್ಗೆ ಅಂತರ್‌ರಾಷ್ಟ್ರೀಯ ಕಪ್ಪು ಬಿಳುಪಿನ ಬಗ್ಗೆ ಭಾರತೀಯ ದೇಶಭಾಷೆಗಳ ಬಗ್ಗೆ ಪ್ರಕಟಪಡಿಸಿದ ವಿಚಾರ ಧಾರೆಗಳಿಂದ ಕನ್ನಡದ ಬರಹಗಾರರು ಪ್ರಭಾವಿತರಾದರು.

೩. **ಅಂಬೇಡ್ಕರ್‌ವಾದ:** ಕನ್ನಡದ ದಲಿತ ಬರಹಗಾರರೆಲ್ಲರೂ ಒಂದಲ್ಲ ಒಂದು ಬಗೆಯಲ್ಲಿ ಅಂಬೇಡ್ಕರ್ ವಾದದಿಂದ ಪ್ರೇರಣೆ ಪಡೆದವರೇ. ಅಂಬೇಡ್ಕರರು ದಲಿತರ ಸ್ವಾಭಿಮಾನದ ಸಂಕೇತ. ಅವರು ಭಾರತೀಯ ಸಮಾಜದ ಮತ್ತು ರಾಷ್ಟ್ರ ಸತ್ವದ ಹೀನತೆಯನ್ನು ನೇರವಾಗಿ ಗುರುತಿಸಿ, ಆಳವಾಗಿ ಹಾಗೂ ವಿಸ್ತಾರವಾಗಿ ಅಭ್ಯಸಿಸಿ ಅದನ್ನು ವೈಯಕ್ತಿಕ ದುಃಖದಿಂದ ಅನುಭವಿಸಿ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹೋರಾಟವನ್ನು ಹುಟ್ಟುಹಾಕಿದರು. ಹಿಂದೂ ಧರ್ಮದ ಸಾಮಾಜಿಕ ವಿಷಮತೆಗೆ ಬ್ರಾಹ್ಮಣೀಕರಣ ಕಾರಣವೆಂದು ವಿಶ್ಲೇಷಿಸಿದರು.

ಸಾಹಿತ್ಯಕ ಪ್ರೇರಣೆಗಳು

ಹೊಸಗನ್ನಡದ ಆರಂಭದ ಕಾಲಘಟ್ಟದಲ್ಲಿ ಕಂಡುಬಂದಂತಹ ನವೋದಯ ಸಾಹಿತ್ಯವು ಬೋರ್ಗರೆಯು ನದಿಯಂತೆ ಹರಿದು ಶಾಂತವಾದ ನಂತರ ನವ್ಯ ಸಾಹಿತ್ಯದ ಉಗಮವಾಯಿತು. ನವೋದಯದ ಮಿತಿಗಳನ್ನು ನವ್ಯ ಸಾಹಿತ್ಯ ತಿಳಿಸಿ ಬದುಕಿನ ವಾಸ್ತವ ಭೀಕರತೆಯನ್ನು ಸಾಹಿತ್ಯದಲ್ಲಿ ಹಿಡಿದಿಡುವ ಪ್ರಯತ್ನವನ್ನು ನವ್ಯ ಸಾಹಿತಿಗಳು ಮಾಡಿದರು. ಆದರೆ ಅದು ಬಹಳಷ್ಟು ದಿನಗಳವರೆಗೆ ತನ್ನ ಛಾಪನ್ನು ಉಳಿಸಿಕೊಂಡು ಹೋಗಲು ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯಲ್ಲಿ ಒಂದು ಚಳುವಳಿಯ ಹಿಂದೆ ಮತ್ತೊಂದು ಹಳೆಯ, ಹಿಂದಿನ ವಿಚಾರಗಳ ಮಿತಿಗಳು ಗೋಚರಿಸುವಂತೆ ದಲಿತ ಸಾಹಿತ್ಯದ ಉಗಮಕ್ಕೂ ನವ್ಯ ಸಾಹಿತ್ಯದ ಮಿತಿಗಳು ಕಾರಣವಾಯಿತು. ಇದು ಸಾಹಿತ್ಯಕ ಪ್ರೇರಣೆಯಾಯಿತು.

ಇದರ ಜೊತೆಗೆ ತೆಲುಗಿನ ದಿಗಂಬರ ಕಾವ್ಯದ ಪ್ರೇರಣೆಯು ೧೯೬೫ರಿಂದೀಚೆಗೆ ಆಂಧ್ರ ಪ್ರದೇಶದಲ್ಲಿ ಬಹು ವ್ಯಾಪಕವಾಗಿ ಬೆಳೆಯತೊಡಗಿತು. ಇದು ದಲಿತ ಬಂಡಾಯ ಸಾಹಿತ್ಯಕ್ಕೆ ಬಹಳಷ್ಟು ಪ್ರೇರಣೆ ನೀಡಿದವು. ಅಂತೆಯೇ ಮರಾಠಿ ದಲಿತ ಸಾಹಿತ್ಯ ಚಳುವಳಿಯು

೧೯೬೭ರಿಂದೀಚೆಗೆ ಮಹಾರಾಷ್ಟ್ರದಲ್ಲಿ ಜನಪ್ರಿಯವಾದ ದಲಿತ ಸಾಹಿತ್ಯ ಚಳುವಳಿಯಾಗಿ ಬೆಳೆದು ಕನ್ನಡಿಗರ ಮೇಲೆ ಅದರಲ್ಲೂ ಮುಖ್ಯವಾಗಿ ದಲಿತರ ಮೇಲೆ ತನ್ನ ಗಾಢ ಪರಿಣಾಮವನ್ನು ಬೀರಿತು.

ಅರವತ್ತು ದಶಕದ ಅಂತ್ಯ ಮತ್ತು ಎಪ್ಪತ್ತರ ದಶಕದ ಆರಂಭದ ಕಾಲ ಸಾಂಸ್ಕೃತಿಕವಾಗಿ ತಲ್ಲಣಗೊಂಡ ಕಾಲ. ಯಾವುದೂ ನಿಶ್ಚಿತ ನೆಲೆಯಿಲ್ಲದೆ ಕ್ಷಣದಿಂದ ಕ್ಷಣಕ್ಕೆ ನೀರ ಮೇಲಿನ ಗುಳ್ಳೆಯಂತೆ ಮಾಡುವ ಮುಳುಗುವ ವೈಚಾರಿಕ ಸಂಘರ್ಷಕ್ಕೆ ನಾಂದಿ ಹಾಡಿದ ಕಾಲ. ದಲಿತ ಯುಗದ ದಲಿತೋದಯದ ಕಾಲ. ಹದವಿಲ್ಲದ ಹದಗೊಳ್ಳುವ ಕಾಲದಲ್ಲಿಯೇ ಕಾಣಿಸಿಕೊಂಡಿದ್ದು 'ದಲಿತ' ಎಂಬ ಪದ. ಈ ಪದ ಮಹಾರಾಷ್ಟ್ರದಿಂದ ವಲಸೆ ಬಂದಿದೆ. ಕನ್ನಡ ಸಾಹಿತ್ಯದಲ್ಲಿ ಈ ಪದವನ್ನು ಅಧಿಕೃತವಾಗಿ ೧೯೭೨ರಿಂದೀಚೆಗೆ ಬಳಸಲು ಆರಂಭವಾಯಿತು.

೧೯೬೯ರಲ್ಲಿ ಡಾ. ಅಂಬೇಡ್ಕರ್ ಜಯಂತಿಯಂದು ಹಾವನೂರ ಆಯೋಗದ ವರದಿಯನ್ನು ಜಾರಿಯಲ್ಲಿ ತರಬೇಕೆಂದು ದಲಿತ ರಾಜಕೀಯ ನಾಯಕರು ಹೋರಾಟ ಆರಂಭಿಸಿದರು. ಈ ಸಂದರ್ಭದಲ್ಲಿ ಬಿ.ಬಸವಲಿಂಗಪ್ಪನವರು ನೇತೃತ್ವವನ್ನು ವಹಿಸಿದ್ದರು. ೧೯೭೩ರಲ್ಲಿ 'ಮಲ ಹೊರುವ ಪದ್ಧತಿ'ಯ ಕುರಿತು ಚರ್ಚೆ ಆರಂಭವಾಯಿತು. ಇಂಥವೆಲ್ಲ ಪ್ರಸಂಗಗಳು ದಲಿತರಲ್ಲಿ ದಲಿತ ಪ್ರಜ್ಞೆ ಜಾಗೃತಿಯನ್ನು ಹೆಚ್ಚಿಸಿದವು. ತುರ್ತು ಪರಿಸ್ಥಿತಿಯ ಸಂದರ್ಭಗಳು ಪರೋಕ್ಷವಾಗಿ ಪ್ರೇರಣೆಯಾದವು.

ಸಾಮಾಜಿಕವಾಗಿ ದಲಿತರು ಒಗ್ಗೂಡಿ ಹೋರಾಡುವ ಮನೋಭಾವವನ್ನು ಹುಟ್ಟು ಹಾಕಿದ ಕೇಂದ್ರ ಘಟನೆಯೆಂದರೆ ೧೯೭೪ರಲ್ಲಿ ನಡೆದ 'ಬೂಸಾಪ್ರಕರಣ' ಬಿ.ಬಸಲಿಂಗಪ್ಪನವರು ಇಂಜಿನಿಯರಿಂಗ್ ಕಾಲೇಜಿನ ಸಮಾರಂಭವೊಂದರಲ್ಲಿ ದಲಿತರನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತ 'ಕನ್ನಡ ಸಾಹಿತ್ಯದಲ್ಲಿ ಬಹುಪಾಲು ಬೂಸಾ ಇದೆ' ಎಂದು ಹೇಳಿದ್ದರ ಪರಿಣಾಮವಾಗಿ ದೊಡ್ಡ ಕೋಲಾಹಲವೇ ಉಂಟಾಯಿತು. ಈ ಕೋಲಾಹಲ ದಲಿತ ಮತ್ತು ಮೇಲು ಜಾತಿಯವರ ನಡುವೆ ನಡೆದು ಕೊನೆಗೆ ಬಸಲಿಂಗಪ್ಪನವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ನೀಡಬೇಕಾಯಿತು. ಈ ಸಂದರ್ಭದಲ್ಲಿ ಬ್ರಾಹ್ಮಣ ಪ್ರಜ್ಞೆ, ಶೂದ್ರ ಪ್ರಜ್ಞೆ, ದಲಿತ ಪ್ರಜ್ಞೆ ಎಂಬ ಸಾಮಾಜಿಕ ಹೊಯ್ದಾಟ ಕಾಣಿಸಿಕೊಂಡಿತು. ಯಾರು ಯಾರನ್ನು ಶೋಷಿಸುತ್ತಿದ್ದಾರೆ ಎನ್ನುವುದರ ಕುರಿತು ದೊಡ್ಡದಾಗಿ ಚರ್ಚೆಗಳು ನಡೆದವು. ಇದರಿಂದ ೧೯೭೪ರಲ್ಲಿ ದಲಿತ ಸಂಘರ್ಷ ಸಮಿತಿ ತಲೆ ಎತ್ತಿ ಮುಂದೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯಾಗಿ ಬೆಳೆಯಿತು.

೧೯೭೫ರಲ್ಲಿ 'ದಲಿತ ಬರಹಗಾರರ ಯುವ ಸಂಘಟನೆ' ಕಾಣಿಸಿಕೊಂಡಿತು. ಈ ಸಂಘಟನೆ ೧೯೭೬ರಲ್ಲಿ ಭದ್ರಾವತಿಯಲ್ಲಿ ಸಮ್ಮೇಳನ ಒಂದನ್ನು ಮಾಡಿತು. ಪ್ರಜ್ಞಾವಂತ ದಲಿತ ಬರಹಗಾರರ ಸಂಖ್ಯೆ ಬೆರಳಿನ ಎಣಿಯಷ್ಟಿತ್ತು. ಹೀಗಾಗಿ ಇವರು 'ಪ್ರಗತಿ ಪಂಥ' ನಡೆಸುವ ಸಾಹಿತ್ಯದ ಸಮ್ಮೇಳನಗಳಲ್ಲಿ ಸಮುದಾಯ ಜಾಥಾಗಳಲ್ಲಿ ರೈತ ಬರಗಾಲ ಜಾಥಾದಲ್ಲಿ ತಮ್ಮನ್ನು

ಅಧಿಕೃತವಾಗಿ ತೊಡಗಿಸಿಕೊಂಡರು. ಈ ಸಂಘಟನೆಗಳಲ್ಲಿಯ ಪ್ರಗತಿಪರ ದಲಿತೇತರರು ದಲಿತರ ಸಮಸ್ಯೆಗಳನ್ನೇ ಕೇಂದ್ರವಾಗಿಟ್ಟುಕೊಂಡು ಜನಗಳೆಡೆಗೆ ಹೆಜ್ಜೆ ಹಾಕಿದರು.

೧೯೪೩-೧೯೫೧ರವರೆಗೆ ಪ್ರಗತಿಶೀಲ ಹೆಸರಿನೊಂದಿಗೆ ಕಾಣಿಸಿಕೊಂಡ ಲೇಖಕರು ೧೯೭೬ರಲ್ಲಿ ಅಧಿಕೃತವಾಗಿ ಪ್ರಗತಿ ಪಂಥ ಎಂಬ ಹೆಸರಿನೊಂದಿಗೆ ಮತ್ತೆ ಕಾಣಿಸಿಕೊಂಡವರು. ಸಾಹಿತ್ಯ ಸಮ್ಮೇಳನಗಳನ್ನು ನಡೆಸಿದರು. ಈ ಪಂಥದವರೊಂದಿಗೆ ಕೆಲವು ದಲಿತರು 'ದಲಿತ ಸಂಘ' ಎಂಬ ಹೆಸರಿನೊಂದಿಗೆ ಕಾಣಿಸಿಕೊಂಡರು. ಅವರು 'ಶೋಷಣೆಗೆ ಒಳಪಟ್ಟವರೆಲ್ಲರೂ ದಲಿತರು' ಎಂಬ ವಾದವನ್ನು ಒಪ್ಪಿಕೊಂಡಿದ್ದರು. ಇವರಲ್ಲಿ ಹೆಚ್ಚಿನವರು ಮಾರ್ಕ್ಸ್‌ವಾದಿಗಳೇ ಆಗಿದ್ದರು.

೧೯೭೫ರಲ್ಲಿ "ಲೋಹಿಯಾ ಮಂಚ" ವೇದಿಕೆ ವತಿಯಿಂದ ಜಾತಿವಿನಾಶ ಸಮ್ಮೇಳನ ನಡೆಯಿತು. ಈ ವೇದಿಕೆ ಮುಂದೆ ೧೯೭೪ರಲ್ಲಿ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ ಎಂಬ ಹೆಸರಿನೊಂದಿಗೆ ಬೆಳೆಯಿತು. ಈ ಸಂಘಟನೆ ಶೂದ್ರ ಲೇಖಕರಿಂದ ಕೂಡಿದ್ದು, ಇದು ೧೯೧೮ರಲ್ಲಿ ನಡೆದ ಮೊದಲ ಬ್ರಾಹ್ಮಣೇತರ ಚಳುವಳಿಯನ್ನು ನೆನಪಿಗೆ ತರುತ್ತದೆ. ನಮ್ಮ ಲೇಖಕರನ್ನು ಧಿಕ್ಕರಿಸಿ ಹೊರಬಂದ ತಂಡವೂ ಇದಾಗಿದೆ. ಈ ಸಂಘಟನೆಯಲ್ಲಿ ದಲಿತರು ಶೂದ್ರರೇ ಎಂದು ತಮ್ಮ ತೋಳ ತೆಕ್ಕೆಯಲ್ಲಿ ಹಿಡಿಯಲು ಪ್ರಯತ್ನಿಸಿದರು.

ದಲಿತ ಸಂಘಟನೆಯೊಂದಿಗೆ ಬೆರೆತ ರೈತ ಸಂಘಟನೆ, ಸಮುದಾಯದ ಸಂಘಟನೆಗಳು ಹೆಚ್ಚು ಕಾಲ ಒಂದಾಗಿ ನಡೆಯಲು ಸಾಧ್ಯವಾಗಲಿಲ್ಲ. ಆದರೆ ಸಮುದಾಯ ದಲಿತರದ್ದೇ. ಆದ್ದರಿಂದ ಸಮುದಾಯ ಜಾಥಾದೊಂದಿಗೆ ತಮ್ಮ ಹೆಜ್ಜೆಯನ್ನು ಸೇರಿಸುತ್ತಾ ಸಂಘಟಕರಾಗಿ ಹೊರಹೊಮ್ಮಿದರು.

೧೯೭೯ ಮಾರ್ಚ್ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ೫೧ನೇ ಸಮ್ಮೇಳನದ ಸಿದ್ಧತೆ ನಡೆಸಿದಾಗ, ದಲಿತ ಬರಹಗಾರರು ಸಮ್ಮೇಳನದಲ್ಲಿ ದಲಿತ ಗೋಷ್ಟಿಯನ್ನಿಡಲು ಕೋರಿದರು. ಅದರ ಅಧ್ಯಕ್ಷರು ಬೇಡಿಕೆಯನ್ನು ತಿರಸ್ಕರಿಸಿದಾಗ, ದಲಿತರು ದಲಿತೇತರು ಒಂದೆಡೆ ಸೇರಿ 'ಬಂಡಾಯ ವೇದಿಕೆ' ರೂಪಿಸಿಕೊಂಡರು. ಬಂಡಾಯ ಮೊದಲು ದಲಿತರದ್ದೇ ಮನೆಯಾಗಿತ್ತು. ಬರಬರುತ್ತ ದಲಿತೇತರ ಹಿಡಿತ ಹೆಚ್ಚಿದಾಗ ಭಿನ್ನಾಭಿಪ್ರಾಯಗಳು ಬಂದು ಮುಂದೆ ಅದು ದಲಿತ ಬಂಡಾಯ ವೇದಿಕೆಯಾಯಿತು.

ಸಾಹಿತ್ಯದಲ್ಲಿ ದಲಿತ ಬಂಡಾಯ ಅವಳಿ-ಜವಳಿ ಪದಗಳಾಗಿಯೇ ಬಳಕೆಗೆ ಬಂದವು. ಕಾಲಾಂತರದಲ್ಲಿ ಕೆಲ ದಲಿತರು ಈ ವೇದಿಕೆಯಿಂದ ಹೊರ ಹೋದರು. ಬಂಡಾಯ ದಲಿತೇತರ ವೇದಿಕೆ, ದಲಿತರು ಬಂಡಾಯದಲ್ಲಿ ಒಂದು ಅಂಗವೆಂದು, ಎಡ ಪಂಥೀಯ ಬರಹಗಾರರು ವಾದಿಸ ತೊಡಗಿದರು. ಇನ್ನು ಕೆಲವರು 'ದಲಿತ ಬಂಡಾಯ' ಎಂದು ಬರೆಯುವ

ಸಂಪ್ರದಾಯವನ್ನು ತಿರುಚಿ 'ಬಂಡಾಯ-ದಲಿತ'ವೆಂದು ಘೋಷಿಸಿದರು. ದಲಿತರಿಲ್ಲದ ಬಂಡಾಯ ಬಲವಾಯಿತು. ದಲಿತರು ಮತ್ತೆ ಪ್ರತ್ಯೇಕವಾಗಿ ದಲಿತ ಸಮಾವೇಶಗಳನ್ನು ವಿಚಾರ ಸಂಕಿರಣಗಳನ್ನು ಆರಂಭಿಸಿದರು. ೧೯೮೩ರಲ್ಲಿ ಈ ಪ್ರತ್ಯೇಕತೆಯನ್ನು ಗುರುತಿಸಿಕೊಳ್ಳಲು "ದಲಿತ ಲೇಖಕರ ಕಲಾವಿದರ ಬಳಗ"ವನ್ನು ಆರಂಭಿಸಿದರು. ಇದರ ಸಂಚಾಲಕರ ಸಮಿತಿಯಲ್ಲಿ ಸಿದ್ಧಲಿಂಗಯ್ಯ, ಇಂದುಧರ ಹೊನ್ನಾಪುರ, ವಿ. ಮುನಿವೆಂಕಟಪ್ಪ, ಬೋಳಬಂಡೆಪ್ಪ, ಡಾ.ಬಿ.ಕೃಷ್ಣಮೂರ್ತಿಯವರಿದ್ದರು.

ಈ ಸಂಘಟನೆ ಹಾಕಿಕೊಂಡಿದ್ದ ತನ್ನದೇ ಆದ ಕಾರ್ಯಕ್ರಮದ ರೂಪ ರೇಖೆಗಳು:

- ❖ ಭಾರತೀಯ ದಲಿತ ಸಾಹಿತ್ಯ ಕುರಿತಂತೆ ವಿಚಾರ ಸಂಕಿರಣ ಏರ್ಪಡಿಸುವುದು.
- ❖ ದಲಿತ ಕಲಾವಿದರ ರಾಜ್ಯಮಟ್ಟದ ಶಿಬಿರಗಳನ್ನು ನಡೆಸುವುದು.
- ❖ ಕವಿಸಮ್ಮೇಳನಗಳನ್ನು ಏರ್ಪಡಿಸುವುದು.
- ❖ ದಲಿತ ಲೇಖಕರ ಬರಹಗಳಿಗೆ ಪ್ರಕಟಿಸುವುದು.

ನವ್ಯ ಸಾಹಿತ್ಯ ಸ್ವ ಅನುಭವಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿತು. ಈ ಸ್ವ ಅನುಭವಗಳು ವ್ಯಕ್ತಿನಿಷ್ಟವಾಗಿದ್ದು, ವ್ಯಕ್ತಿಗತ ದ್ವಂದ್ವ, ತೊಳಲಾಟ ಇಂಥವೇ ಅದರಲ್ಲಿ ಮುಖ್ಯವಾಗಿದ್ದವು. ದಲಿತರು ಮೊದಲು ಇದೇ ರೀತಿ ಬರವಣಿಗೆ ಆರಂಭಿಸಿದರೂ ಅವರ ಬರವಣಿಗೆಯಲ್ಲಿ ವ್ಯವಸ್ಥೆಯ ಕ್ರೌರ್ಯ ಕಾಣತೊಡಗಿತು. ವ್ಯಕ್ತಿ ನಿಷ್ಟತೆಯಿಂದ ಸಮಷ್ಟತೆಯ ಕಡೆಗೆ ಬರವಣಿಗೆ ತಿರುಗಿತು. ಹೀಗೆ ತಿರುವು ಪಡೆಯಲು ಸಾಮಾಜಿಕ ಪ್ರಜ್ಞೆಯು ಕಾರಣವಾಗಿದೆ.

ಭಾರತೀಯ ಮತ್ತು 'ಅನ್ಯಭಾಷಾ ಸಾಹಿತ್ಯದ ಪ್ರಭಾವ' ದಲಿತ ಸಾಹಿತ್ಯಕ್ಕಿದೆ. ಉತ್ತರ ಕರ್ನಾಟಕದ ಲೇಖಕರ ಮೇಲೆ ಮಹಾರಾಷ್ಟ್ರದ ದಲಿತ ಪ್ಲಾಂಥರ್ಸ್ ಚಳುವಳಿಯ ಪ್ರಭಾವ ಅಧಿಕವಾಗಿರುವಂತೆ, ದಕ್ಷಿಣ ಕರ್ನಾಟಕದ ದಲಿತ ಬರಗಾರರ ಮೇಲೆ ತೆಲುಗಿನ ದಿಗಂಬರ ಹಾಗೂ ತಿರುಗು ಬಡಲು ಕಾವ್ಯದ ಪ್ರಭಾವ ಅಧಿಕವಾಗಿದೆ. ದಕ್ಷಿಣ ಆಫ್ರಿಕಾದ ಕಪ್ಪು ಸಾಹಿತ್ಯದ ಪ್ರಭಾವ ಗಮನಾರ್ಹವಾದ ರೀತಿಯಲ್ಲಿ ಕಂಡುಬಂದರೂ, ಕಪ್ಪುತನದ ಶ್ರೇಷ್ಟತೆ ಅವರಿಗೆ ಸ್ವಾಭಿಮಾನದ ಸಂಕೇತವಾದಂತೆ, ಇಲ್ಲಿಯ ದಲಿತರಿಗೆ ಸ್ಥಳೀಯ ವಿಚಾರಗಳು ಸ್ವಾಭಿಮಾನದ ಸಂಕೇತಗಳಾದವು.

ನವ್ಯ ಪಂಥದಿಂದ ಬಿಡಿಸಿಕೊಂಡು ಬಂದ ಲೋಹಿಯಾ ಮಂಚದ ಪ್ರತಿಪಾದಕರು ಶೂದ್ರತ್ವದ ನೆಲೆಯಿಂದ ತಲೆ ಎತ್ತಿದರು. ಲೋಹಿಯಾವಾದದ ಪ್ರಭಾವ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಕಾಲ ಉಳಿಯಲಿಲ್ಲ. ಲೋಹಿಯಾವಾದಿ ಬರಹಗಾರರು ಸಂಘಟನಾತ್ಮಕ ಶಕ್ತಿಗಳಿಂದ ದೂರ ಉಳಿದು ತಮ್ಮ ತನವನ್ನು ಕಾಯ್ದುಕೊಳ್ಳಲು ಹವಣಿಸಿದರು. ಹೀಗಾಗಿ ದಲಿತ

ಬಂಡಾಯದ ಮೇಲೆ ಲೋಹಿಯಾ ವಾದದ ಅಧಿಕೃತ ಪ್ರಭಾವ ಕೊನೆಯವರೆಗೆ ಉಳಿಯಲಿಲ್ಲ. ಆರಂಭದಲ್ಲಿ ಕಾಣಿಸಿಕೊಂಡರೂ ಅನಂತರ ಅದು ಕಾಣೆಯಾಯಿತು. ದಲಿತರು ಅಧಿಕೃತವಾಗಿ "ಅಂಬೇಡ್ಕರ್ ವಾದ" ವನ್ನು ನಂಬಿದರು. ಇಲ್ಲಿಯ ಮಣ್ಣಿನ ಸಮಸ್ಯೆಗಳಿಗೆ ಉತ್ತರ ಅಂಬೇಡ್ಕರ್ ವಾದದಲ್ಲಿದೆ ಎಂದು ಮನಗಂಡರು. ದಲಿತೇತರು ಮಾರ್ಕ್ಸ್‌ವಾದವನ್ನು ನೆಚ್ಚಿ ಮುನ್ನಡೆದರು. ಭಾರತದಂತಹ ವ್ಯವಸ್ಥೆಯಲ್ಲಿ ಭೂರಹಿತ ಮೇಲು ಜಾತಿಯ ಜನ ಮಾರ್ಕ್ಸ್‌ವಾದವನ್ನು ನೆಚ್ಚಿದರೆ ಭೂ ಮಾಲೀಕರು ಅಥವಾ ಜಮೀನ್ದಾರಿ ಜನ ಲೋಹಿಯಾ ವಾದವನ್ನು ನೆಚ್ಚಿ ನಡೆಯುವುದು ಆಶ್ಚರ್ಯದ ಸಂಗತಿಯೇನಲ್ಲ.

ಶಿಕ್ಷಣ ದಲಿತರ ಬದುಕಿನಲ್ಲಿ ಮಹತ್ವದ ಪಾತ್ರವಹಿಸಿತು. ಮೊದಲು ತಲೆಮಾರಿನ ಅಕ್ಷರಸ್ಥ ದಲಿತರು ಹೊರಬಂದು ಲೇಖನಿ ಹಿಡಿದಿದ್ದು, ಕತ್ತಲಾದವರಿಸಿದ ಸಾಹಿತ್ಯ ರಂಗಕ್ಕೆ ಹೊಸ ಆಶಾಕಿರಣಗಳು ಮೂಡುವಂತಾದವು. ಗ್ರಾಮೀಣ ಪರಿಸರದಿಂದ ಬಂದ ದಲಿತರಿಗೆ ಅನುಭವದ ಸಾಂದ್ರತೆ ಅಧಿಕವಾಗಿತ್ತು. ಇದರೊಂದಿಗೆ ಜಾನಪದ ಕ್ಷೇತ್ರದಲ್ಲಿ ಅನಾಯಾಸವಾಗಿ ತಲೆ ಎತ್ತಿ ನಿಂತರು. ಜಾನಪದದ ಅಧ್ಯಯನ, ಜನಾಂಗಿಕ ಅಧ್ಯಯನಗಳು ದಲಿತ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಒದಗಿಸುವಲ್ಲಿ ಸಹಕರಿಸಿದವು. ಕುದುರೆ ಮೋತಿ ಪ್ರಕರಣ, ಬೆಲ್ಚಿ ಪ್ರಕರಣ, ಕಾರಂಚೇಡು ಪ್ರಕರಣ, ಮೀಸಲಾತಿ ವಿರೋಧಿ ಪ್ರಕರಣ, ಮತಾಂತರದ ಪ್ರಸಂಗಗಳು, ಭೂ ಹೋರಾಟದ ಪ್ರಸಂಗಗಳು ಭೂ ಆಕ್ರಮಣದ ಪ್ರಕರಣ, ಮಲ ತಿನ್ನುವ ಪ್ರಕರಣ, ಬೆತ್ತಲೆ ಸೇವೆ ವಿರೋಧಿ ಪ್ರಕರಣ, ಇಂತಹ ಹಲವಾರು ಸಂದರ್ಭಗಳು ಚಳುವಳಿಯನ್ನು ಬಲಪಡಿಸಿವೆ. ಸಾಹಿತ್ಯದ ಚಟುವಟಿಕೆ ಚಕ್ರಗಳಿಗೆ ಎಣ್ಣೆಯಂತೆ ಕೆಲಸ ಮಾಡಿದವು.

ಹೀಗೆ ಒಟ್ಟಾರೆಯಾಗಿ ದಲಿತ ಸಾಹಿತ್ಯ ಚಳುವಳಿ ಒಂದು ಹೊಸ ರೂಪ, ಜನ್ಮ ತಾಳಿ ಅವರ ವಿಶಿಷ್ಟ ಸ್ವರೂಪ ಪ್ರಭಾವ ಪ್ರೇರಣೆಗಳೊಂದಿಗೆ ಸಾಗುವಂತಾಯಿತು.

೪. ದಲಿತ ಆತ್ಮಕತೆಗಳ ಸ್ವರೂಪ

"ದಲಿತ ಆತ್ಮಕತೆಗಳಲ್ಲಿ ಅಸ್ಪೃಶ್ಯತೆ ಸ್ಥಾಯೀಭಾವ. ಒಂದೇ ಮಾತಿನಲ್ಲಿ ಹೇಳುವುದಾದರೆ ದಲಿತ ಸಾಹಿತ್ಯದ ವೈಶಿಷ್ಟ್ಯವಾಗಿದೆ. ಅಸ್ಪೃಶ್ಯತೆಯ ಹಿನ್ನೆಲೆಯಿಂದ ಬಂದ ಲೇಖಕರು ತಮ್ಮ ಅನುಭವದ ನಿರೂಪಣೆಯನ್ನು ತಮ್ಮ ಆತ್ಮಕಥೆಗಳಲ್ಲಿ ನೀಡಿರುವುದನ್ನು ದಲಿತ ಸಾಹಿತ್ಯದ ಪ್ರಮುಖ ಭಾಗವಾಗಿ ಕಾಣಬಹುದು. ಶತಮಾನಗಳ ನೋವನ್ನು ಹತ್ತಿಕ್ಕಿದ್ದ ಸ್ವಾಭಿಮಾನಿ ದಲಿತನೊಬ್ಬ ತನ್ನ ತಲೆಮಾರಿನ ಅನುಭವವನ್ನು ತನ್ನದಾಗಿಸಿಕೊಂಡು, ತನ್ನ ಅಳಲನ್ನು ವಾಕರಿಕೆ ಮಾಡಿಕೊಳ್ಳದೇ ತತ್‌ಕ್ಷಣದ ತುರ್ತು, ಈ ತುರ್ತಿನ ವಾಕರಿಕೆಗೆ ಒಂದು ದಶಕ ಹಿಡಿಯಬಹುದು."

"ದಲಿತರ ಬರವಣಿಗೆಯಲ್ಲಿ ವಸ್ತುನಿಷ್ಟ ನಿರ್ಲಿಪ್ತತೆಯನ್ನು ಕಾಯ್ದುಕೊಂಡು ಬಂದರೆ ಅದು ಕಾಲದ ಪ್ರಮಾಣವನ್ನು ಗೆಲ್ಲುವುದು. ಇಲ್ಲಿ ಸಂವೇದನಾಶೀಲತೆ ಮುಖ್ಯವಾಗುತ್ತದೆ. ಎಸ್.ಆರ್.ವಿಜಯ ಶಂಕರ ಅವರ ಮಾತುಗಳನ್ನು ಇಲ್ಲಿ ಗಮನಿಸಬಹುದು. ಕನ್ನಡ ಸಾಹಿತ್ಯದಲ್ಲಿ ಈ ತನಕ ಇರದಿದ್ದ ಒಂದು ಕತ್ತಲಿನ ಲೋಕದಿಂದ ಬಂದ ಲೇಖಕರು ಅವರ ಅನುಭವವನ್ನು ಒರಟಾಗಿ ಬರೆಯುತ್ತಾರೆ. ಇವರಿಗೆ ನಾಜೂಕು ಬೇಡ; ಅವರ ಅನುಭವ ನಾಜೂಕಿನದಲ್ಲ".

ದಲಿತ ಆತ್ಮಕತೆಗಳಿಗೆ ಈ ಮಾತು ತುಂಬಾ ಒಪ್ಪಿತವಾದುದ್ದಾಗಿದೆ. ತಮ್ಮ ಜೀವನ ಅನುಭವವನ್ನು ಯಥಾವತ್ತಾಗಿ ಹಿಡಿದಿಟ್ಟಿರುವುದು ಕಂಡುಬರುತ್ತದೆ. ಅನುಭವಿಸಿದ ನೋವನ್ನು ಹೇಳಲು ಯಾವುದೇ ಸಂಕೋಚವನ್ನು ಪಟ್ಟುಕೊಳ್ಳದೆ, ನಿರಾಡಂಬರವಾಗಿ ತಮ್ಮ ನೋವಿಗೆ ಹದವಾದ ಅಭಿವ್ಯಕ್ತಿಯನ್ನು ಈ ಆತ್ಮಕಥೆಗಳಲ್ಲಿ ಕಾಣಬಹುದಾಗಿದೆ.

ಸಿದ್ಧಲಿಂಗಯ್ಯ ಅವರ "ಊರುಕೇರಿ" ಆತ್ಮಕತೆಯೂ ಸಹ ತಮ್ಮ ಜೀವನದ ಅನುಭವದ ಜೊತೆಗೆ ಸುತ್ತಲಿನ ಜನಜೀವನವನ್ನು ಪ್ರತಿಬಿಂಬಿಸುವ ಒಂದು ಮುಖ್ಯ ಕೃತಿಯಾಗಿ ಕಾಣುತ್ತದೆ. ಅಂದರೆ ಆತ್ಮಕತೆಯ ಸ್ವರೂಪ ಜೀತಪದ್ಧತಿ, ನಂಬಿಕೆ, ಆರ್ಥಿಕ ಮುಗ್ಗಟ್ಟು, ವರ್ಗಸಂಘರ್ಷ, ಹಾಸ್ಟಲ್ ಜೀವನ, ಜಾತೀಯತೆ, ಅಸ್ಪೃಶ್ಯತೆ, ಹೋರಾಟ ಮುಂತಾದ ನೆಲೆಗಳನ್ನು ಈ ಊರು ಕೇರಿಯಲ್ಲಿ ಗುರುತಿಸಬಹುದು. ತನ್ನ ವಿಷಯದ ಸ್ವರೂಪವನ್ನು ಒಂದು ಪ್ರತಿಭಟನೆಯ ಹಂತಕ್ಕೆ ತೆಗೆದುಕೊಂಡು ಹೋಗಿ ನಿಲ್ಲಿಸುತ್ತದೆ.

ತುಂಬಾಡಿ ರಾಮಯ್ಯ ಅವರ "ಮಣೆಗಾರ" ಆತ್ಮಕತೆಯಲ್ಲಿ ನಾವು ತಿಳಿಯುಂತದ್ದು ಮನೆಯ ಸ್ಥಿತಿ, ಬಡತನ, ಕಾಯಕ, ಬರಗಾಲ, ಸಂಪ್ರದಾಯ, ಅಸ್ಪೃಶ್ಯತೆ, ಶೋಷಣೆ, ಅನ್ಯಾಯದ ಪ್ರತಿಭಟನೆ ಮುಂತಾದ ಅಂಶಗಳು ಒಂದು ಹಂತಕ್ಕೆ ತಲುಪಿ ನಿಲ್ಲುವಂತದ್ದು.

ಈ ರೀತಿಯಲ್ಲಿ ದಲಿತ ಆತ್ಮಕತೆಗಳು ಬಾಲ್ಯದಿಂದ ಪ್ರಾರಂಭವಾಗಿ ಕಷ್ಟವನ್ನು ಅನುಭವಿಸಿ ನಂತರ ಸ್ವಪ್ರಯತ್ನದಿಂದ ಮೇಲಿನ ಸ್ತರವನ್ನು ತಲುಪಿದ ಹಂತದವರೆಗೆ ದಲಿತ ಆತ್ಮಕತೆಗಳಲ್ಲಿ ಅಭಿವ್ಯಕ್ತಿಯನ್ನು ಪಡೆದುಕೊಂಡಿದೆ. ಸೌಮ್ಯವಾದ ಪ್ರತಿಭಟನೆಯನ್ನು ತೋರುವ ರೀತಿಯಲ್ಲಿ ಆತ್ಮಕತೆಗಳು ಕಂಡುಬಂದಿರುವುದು ಗೋಚರಿಸುತ್ತದೆ. ಮುಂದೆ ದಲಿತರು ಈ ರೀತಿಯ ಬದುಕನ್ನು ಅನುಭವಿಸಬಾರದೆಂಬ ಅಚ್ಚರಿಯನ್ನು ಮನಗಂಡ ಲೇಖಕರು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ಭಾರತೀಯ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸ ವಿದೆಯಾದರೂ; ಅದು ಸಮಗ್ರವಾಗಿ ಭಾರತೀಯ ಜೀವನಾನುಭವಗಳ ಅಭಿವ್ಯಕ್ತಿಯಾಗಿ ನಿಲ್ಲಲಿಲ್ಲ. ಇಲ್ಲಿನ ಬಹುಜನ ಸಮುದಾಯದ ಬದುಕು. ನಿರ್ಧಿಷ್ಟವಾಗಿ ದಲಿತ ಸಮುದಾಯದ ಬದುಕು–ದಲಿತರು ಊರ ಹೊರಗೆ ಉಳಿದಂತೆ– ಭಾರತೀಯ ಸಾಹಿತ್ಯದಿಂದ ಹೊರಗೆಯೇ ಉಳಿಯಿತು. ಅದು ಇಲ್ಲಿನ ಸಾಹಿತ್ಯದಲ್ಲಿ ದಾಖಲಾಗಲು ಇಪ್ಪತ್ತನೆಯ ಶತಮಾನದ ವರೆಗೆ ಕಾಯ್ದುಕೊಂಡು ನಿಲ್ಲಬೇಕಾಯಿತು! ಇಪ್ಪತ್ತನೆಯ ಶತಮಾನದ ಎಂಭತ್ತರ ದಶಕದಲ್ಲೂ ದಲಿತ ಸಾಹಿತ್ಯವು ಸಂಕುಚಿತ ಮನೋಧರ್ಮದ ಸಂಪ್ರದಾಯಸ್ಥರಿಂದ ಏನೆಲ್ಲ ಟೀಕೆ, ಅಸಮಾಧಾನ, ಆರೋಪಗಳನ್ನು ಎದುರಿಸಬೇಕಾಯಿತು ಎಂಬುದು ಈಗ ಚರಿತ್ರೆಯ ವಿಷಯ. ಒಂದು ಖಚಿತವಾದ ಸೈದ್ಧಾಂತಿಕ ನೆಲೆ ಮತ್ತು ಪರಿವರ್ತನಶೀಲತೆಯ ಉತ್ಕಟ ಹಂಬಲದಿಂದ ಅದು ನಿಲ್ಲದೆ ಮುಂದುವರಿದುಕೊಂಡು ಬಂದಿದೆ. ಅಷ್ಟು ಮಾತ್ರವಲ್ಲ. ಅದು ಮಾಗಿ ಪಕ್ವವಾಗುತ್ತಲು ಬಂದಿದೆ. ತತ್ಪರಿಣಾಮವಾಗಿ ಇಂದು ದಲಿತ ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಭಾಗವಾಗಿ ಬೆಳೆಯುತ್ತಿದೆ.

ಕಾವ್ಯ ಪ್ರಕಾರದ ಮೂಲ ತಮ್ಮ ಬರವಣಿಗೆಯನ್ನು ಆರಂಭಿಸಿದ ದಲಿತ ಲೇಖಕರು ಅನಂತರ ಕಥೆ, ಕಾದಂಬರಿ, ನಾಟಕಗಳಿಗೆ ಅದನ್ನು ವಿಸ್ತರಿಸಿದರು. ಆತ್ಮಕಥೆಯನ್ನು ಅವರು ಆಯ್ಕೆ ಮಾಡಿಕೊಂಡಿದ್ದು ೯೦ರ ದಶಕದಿಂದ ಈಚೆಗಷ್ಟೇ.

ಆತ್ಮಕಥೆಯು 'ಆತ್ಮಚರಿತ್ರೆ' ಎಂಬ ಹೆಸರಿನಲ್ಲಿ ನಮಗೆ ಪರಿಚಿತವಾಗಿಯೇ ಇದೆ. ನಾಡಿನ ಹಲವು ಗಣ್ಯವ್ಯಕ್ತಿಗಳ ಆತ್ಮಚರಿತ್ರೆಗಳು ನಮ್ಮ ಕಣ್ಣ ಮುಂದಿವೆ. ಈ ಆತ್ಮಚರಿತ್ರೆಗಳಲ್ಲಿ ಯಥಾಪ್ರಕಾರ ಆಯಾ ಲೇಖಕರ ವೈಯಕ್ತಿಕ ಬದುಕು ಪ್ರಧಾನವಾಗಿ ಪ್ರತಿಬಿಂಬಿತವಾಗಿದೆ. ಸಾಂದರ್ಭಿಕವಾಗಿ ಸಮಕಾಲೀನ ಸಮಾಜದ ಕೆಲವು ಚಿತ್ರಗಳು ಮೂಡಿಬಂದಿವೆ. ಒಟ್ಟಾರೆಯಾಗಿ ಇವು ಪ್ರತಿಷ್ಠಿತ ವ್ಯಕ್ತಿ ಮತ್ತು ಸಮಾಜದ ಚಿತ್ರಣ ಒದಗಿಸುತ್ತವೆ. ದಲಿತ ಆತ್ಮಕಥೆಗಳು ಇವುಗಳಿಗಿಂತ ಭಿನ್ನವಾಗಿವೆ. ಒಂದೇ ಊರಿನಲ್ಲಿ ಬದುಕುತ್ತಿದ್ದರೂ ದಲಿತಕೇರಿಯ ಬದುಕನ್ನು ಕತ್ತಲು, ನೋವು, ಅಪಮಾನ ಅಸಮಾನತೆ ಬಡತನಗಳೆ ಮೊದಲಾದ ಭಯಂಕರ ಸಮಸ್ಯೆಗಳು ಏಕೆ ಆವರಿಸಿವೆ ಎಂಬ ಪ್ರಶ್ನೆಗಳೇ ದಲಿತ ಆತ್ಮಕತೆಗಳ ರಚನೆಯ ಹಿಂದಿರುವ ಮುಖ್ಯ

ಪ್ರೇರಣೆಗಳಾಗಿವೆ. ಈ ಹಿನ್ನೆಲೆಯಲ್ಲಿ ದಲಿತ ಆತ್ಮಕಥೆಗಳು ಹಿಂದಿನ ಗಣ್ಯರ ಆತ್ಮಚರಿತ್ರೆಗಳಿಗಿಂತ ಭಿನ್ನವಾಗಿವೆ. ಅಷ್ಟು ಮಾತ್ರವಲ್ಲ ಇದುವರೆಗಿನ ಇತಿಹಾಸ ಸಾಹಿತ್ಯ ಮತ್ತು ಸಾಂಸ್ಕೃತಿಕ ದಾಖಲೆಗಳಿಗೆ ಇವು ಮಾರ್ನುಡಿಯುತ್ತವೆ. ಮತ್ತು ಇತಿಹಾಸದಲ್ಲಿ ಸೇರ್ಪಡೆಯಾಗದ ಮಹತ್ವದ ಸಂಗತಿಗಳನ್ನು ದಲಿತ ಆತ್ಮಕಥೆಗಳು ತಮ್ಮಲ್ಲಿ ಗರ್ಭೀಕರಿಸಿಕೊಂಡಿವೆ. ಇಡೀ ಭಾರತೀಯ ದಾಖಲು ಸಾಹಿತ್ಯವು ಒಂದು ತುದಿಯಾದರೆ, ದಲಿತ ಆತ್ಮಕಥೆಗಳು ಆ ಸಾಹಿತ್ಯದ ಮತ್ತೊಂದು ತುದಿಯಾಗಿ ನಿಲ್ಲುತ್ತವೆ. ಇದುವರೆಗೆ ಅಜ್ಞಾತವಾಗಿ ಉಳಿದಿದ್ದ ದಲಿತ ಸಮುದಾಯಗಳ ಬದುಕು ತನ್ನ ನೈಜ ವಿವರಗಳೊಂದಿಗೆ ಆತ್ಮಕಥೆಗಳ ರೂಪದಲ್ಲಿ ದಾಖಲುಗೊಂಡಿದೆ.

ದಲಿತ ಆತ್ಮಕಥೆಗಳ ಮೊದಲ ಬೆಳೆ ಬಂದದ್ದು ಮರಾಠಿ ದಲಿತ ಸಾಹಿತ್ಯದಲ್ಲಿ. ಅಷ್ಟು ಮಾತ್ರವಲ್ಲ ಅಲ್ಲಿ ಅದರ ಸುಗ್ಗಿಯೇ ನಡೆದಿದೆ. ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಆತ್ಮಕಥೆಯನ್ನು ಬರೆಯಬೇಕೆಂದು ಕಲ್ಪನೆ ಮರಾಠಿ ದಲಿತ ಲೇಖಕರಲ್ಲಿ ಮೂಡಿದ್ದೇ ಚಾರಿತ್ರಿಕ ಮಹತ್ವದ ಒಂದು ಮುಖ್ಯ ಹೊಳಹು ಎನ್ನಬಹುದು. ಮನಸ್ಸಿಗೆ ನಡುಕ ಹುಟ್ಟಿಸುವ ಅನುಭವಗಳ ಅಜ್ಞಾತ ಬದುಕೊಂದು ಇವುಗಳಲ್ಲಿ ಅನಾವರಣಗೊಂಡಿದೆ. ತಾವು ಮತ್ತು ತಮ್ಮ ಸಮುದಾಯ ಅನುಭವಿಸಿದ ಘೋರ ನೋವು ಅಪಮಾನಗಳನ್ನು ದಲಿತ ಆತ್ಮಕಥನಕಾರರು ಇಲ್ಲಿ ದಾಖಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬಾಲಚಂದ್ರ ಫಡಕೆ ಅವರು ದಲಿತ ಆತ್ಮಕಥೆಗಳನ್ನು 'ನೀವಿನ ಕಥೆಗಳು'[೩] (ದುಃಖಾಂಚ ಅಭಂಗ ಗಾಥಾ) ಎಂದು ಕರೆದಿರುವುದು ಔಚಿತ್ಯಪೂರ್ಣವಾಗಿದೆ. ತಮ್ಮ ಜೀವನದ ಆಗುಹೋಗುಗಳ ಮೇಲೆ ಸುತ್ತಲಿನ ಪರಿಸರ ಮತ್ತು ಸಾಂಪ್ರದಾಯಿಕ, ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆ ಎಂತಹ ವಿಷಯ ಪರಿಣಾಮ ಬೀರಿದೆ ಎಂಬುದನ್ನು ಹೇಳುವುದು ಇವುಗಳ ತುರ್ತಾದ ತುಡಿತವಾಗಿದೆ. ''ನನ್ನ ಮೇಲೆ ಇಂತಹ ನಿಕೃಷ್ಟ ಜೀವನವು ಅದೇಕೆ ಹೇರಲ್ಪಟ್ಟಿತು?'' ಎಂದು ಹೇಳುವುದಕ್ಕಾಗಿಯೇ ದಲಿತ ಲೇಖಕ ಆತ್ಮಕಥೆ ಬರೆಯುತ್ತಿದ್ದಾನೆ. ಆತನ ಮೇಲೆ ಬಲವಂತವಾಗಿ ಹೇರಲ್ಪಟ್ಟ ಜೀವನ ಕೇವಲ ಆತನಿಗಷ್ಟೇ ಸೀಮಿತವಾದದ್ದಲ್ಲ. ಅದು ಇಡೀ ದಲಿತ ಸಮಾಜದ ಮೇಲೆ ಹೇರಲ್ಪಟ್ಟದ್ದಾಗಿದೆ. ಆದ್ದರಿಂದಲೇ ದಲಿತ ಆತ್ಮಕಥೆಗಳು ದಲಿತ ಸಮಾಜದ ಆತ್ಮಕಥೆಗಳೇ ಆಗಿವೆ' ಎಂಬ ಜನಾರ್ಧನ ವಾಘಮಾರೆ ಅವರ ಅಭಿಪ್ರಾಯ ಆತ್ಮಕಥೆಗಳ ಉದ್ದೇಶ ಮತ್ತು ವ್ಯಾಪ್ತಿಯನ್ನು ಸ್ಪಷ್ಟಪಡಿಸುತ್ತದೆ. ತಮ್ಮ 'ಅನ್‌ಯುಜುವಲ್' ಬದುಕಿನ ಘೋರ ವಾಸ್ತವವನ್ನು ಕಥೆ ಕಾದಂಬರಿಗಳ ಮೂಲಕ ಸಾಮಾನ್ಯೀಕರಿಸಿ ಅಭಿವ್ಯಕ್ತಿಸುವುದಕ್ಕಿಂತಲೂ ಅದನ್ನು ನೇರವಾಗಿ ಆತ್ಮಕಥೆಯ ರೂಪದಲ್ಲಿ ಅಭಿವ್ಯಕ್ತಿಸುವುದೇ ಹೆಚ್ಚು ಪರಿಣಾಮಕಾರಿ ಎಂಬುದನ್ನು ಮರಾಠಿ ದಲಿತ ಲೇಖಕರು ಕಂಡುಕೊಂಡರು ಮತ್ತು ಅದರಲ್ಲಿ ಅವರು ಯಶಸ್ಸನ್ನು ಸಾಧಿಸಿದರು. ಅವರು ಆತ್ಮಕಥೆಗಳು ಸಾಹಿತ್ಯ ವಲಯದಲ್ಲಿ ತೀವ್ರತರ ಪರಿಣಾಮವನ್ನು ಬೀರಿ ಹೊಸ ಅಲೆಯನ್ನೇ ಎಬ್ಬಿಸಿದವು.

ಕನ್ನಡ ದಲಿತ ಆತ್ಮಕಥೆಗಳಿಗೆ ಮರಾಠಿ ದಲಿತ ಆತ್ಮಕಥೆಗಳು ಮುಖ್ಯ ಪ್ರೇರಣೆ ಒದಗಿಸಿವೆ. ಮರಾಠಿಯ ಶರಣಕುಮಾರ ಲಿಂಬಾಳೆಯವರ 'ಅಕ್ಕರಮಾಶಿ'ಯನ್ನು ದು.ನಿಂ.ಬೆಳಗಲಿ

‘ಅಕ್ರಮ ಸಂತಾನ’ ಎಂಬ ಹೆಸರಿನಲ್ಲಿ ಅನುವಾದಿಸಿದರು (೧೯೯೩). ಹಾಗೆಯೇ ೧೯೯೪ರಲ್ಲಿ ಲಕ್ಷ್ಮಣ್ ಗಾಯಕವಾಡ ಅವರ ‘ಉಚಲ್ಯಾ’ವನ್ನು ಚಂದ್ರಕಾಂತ ಪೋಕಳೆ ಅನುವಾದಿಸಿದರು. ಮಹಾರಾಷ್ಟ್ರದ ಸಾಹಿತ್ಯದಲ್ಲಿ ಒಂದು ಹೊಸ ಅಲೆಯನ್ನು ಎಬ್ಬಿಸಿದ ದಲಿತ ಆತ್ಮಕಥೆಗಳ ಪರಿಣಾಮ ನೆರೆಯ ರಾಜ್ಯವಾದ ಕರ್ನಾಟಕಕ್ಕೂ ಬಹುಬೇಗ ತಲುಪಿರುವ ಸಾಧ್ಯತೆಯಿದೆ. ಅನುಭವಗಳ ಪ್ರಾಮಾಣಿಕ ನಿರೂಪಣೆ ಮತ್ತು ಅಭಿವ್ಯಕ್ತಿಯ ವಿಶಿಷ್ಟ ಶೈಲಿಯಿಂದಾಗಿ ಈ ಆತ್ಮಕಥೆಗಳು ಕನ್ನಡ ಓದುಗರ, ವಿಮರ್ಶಕರ ಗಮನವನ್ನೂ ಸೆಳೆದವು. ಕನ್ನಡದಲ್ಲಿ ಈ ಬಗೆಯ ರಚನೆಗಳ ಕೊರತೆ ಇದೆ ಎಂಬುದನ್ನು ಡಾ.ಗಿರಡ್ಡಿ ಗೋವಿಂದರಾಜ ಅವರು ಗುರುತಿಸುತ್ತ “ನಮ್ಮ ದಲಿತ ಲೇಖಕರಿಗೆ ಇಂಥ ದಾರುಣ ಅನುಭವಗಳು ಇಲ್ಲವೇ? ಅವುಗಳನ್ನು ಹೇಳಿಕೊಂಡರೆ ತಮ್ಮ ಪ್ರತಿಷ್ಠೆಗೆ ಕುಂದಾದೀತೆಂಬ ಭಯವೇ? ಅವರಲ್ಲಿ ಸಿಟ್ಟೇನೋ ಸಾಕಷ್ಟಿದೆ. ಆದರೆ ಆ ಸಿಟ್ಟಿನ ಕಾರಣ ಸಾಮಾನ್ಯೀಕರಿಸಿದ್ದೇ ಹೊರತು ವೈಯಕ್ತಿಕ ಅನುಭವದಲ್ಲಿ ಕುದ್ದು ಗಟ್ಟಿ ಯಾದದ್ದಲ್ಲ. ಅವರು ತಮ್ಮ ಸಿಟ್ಟಿನ ಅಭಿವ್ಯಕ್ತಿಗಾಗಿ ಇನ್ನೂ ಸಾಂಪ್ರದಾಯಿಕ ಸಾಹಿತ್ಯ ಪ್ರಕಾರಗಳಲ್ಲಿಯೇ ತಡಕಾಡುತ್ತಿದ್ದಾರೆ. ಮರಾಠಿ ದಲಿತ ಲೇಖಕರಂತೆ ತಮ್ಮ ವಿಶಿಷ್ಟ ನೋವಿನ ಅಭಿವ್ಯಕ್ತಿಗಾಗಿ ವಿಶಿಷ್ಟ ಸಾಹಿತ್ಯ ಪ್ರಕಾರವೊಂದನ್ನು ರೂಪಿಸಿಕೊಳ್ಳಲು ಯತ್ನಿಸುತ್ತಿಲ್ಲ”[೫] ಎಂಬ ಪ್ರಶ್ನೆಯನ್ನು ಎತ್ತಿದರು. ಪ್ರಜಾವಾಣಿಯಲ್ಲಿ ಬಂದ ಈ ಚರ್ಚೆ ಪ್ರಾಯಶಃ ಅರವಿಂದ ಮಾಲಗತ್ತಿಯವರಿಗೆ ಅವರ ಆತ್ಮಕಥೆಯನ್ನು ಬರೆಯಲು ಪ್ರೇರಣೆ ಒದಗಿಸಿರಬೇಕು.

ಅರವಿಂದ ಮಾಲಗತ್ತಿಯವರ ‘ಗೌರ್ಮೆಂಟ್ ಬ್ರಾಹ್ಮಣ’ ಕನ್ನಡದಲ್ಲಿ ಬಂದ ಮೊದಲ ದಲಿತ ಆತ್ಮಕಥೆ. ಇದು ೧೯೯೪ರಲ್ಲಿ ಪ್ರಕಟವಾಗಿ ಸಹೃದಯ ಓದುಗರ ಮತ್ತು ವಿಮರ್ಶಕರ ಗಮನ ಸೆಳೆಯಿತು. ಅಲ್ಲದೆ ರಾಜ್ಯಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಪಡೆಯಿತು. ಮರಾಠಿಯಿಂದ ಕನ್ನಡಕ್ಕೆ ಅನುವಾದವಾಗಿ ಬಂದ ಆತ್ಮಕಥೆಗಳು ಮತ್ತು ‘ಗೌರ್ಮೆಂಟ್ ಬ್ರಾಹ್ಮಣ’ ಮುಂದಿನ ಆತ್ಮಕಥೆಗಳ ರಚನೆಗೆ ಚಾಲನೆ ನೀಡಿದವು. ಅನಂತರದಲ್ಲಿ ಸಿದ್ಧಲಿಂಗಯ್ಯ ಅವರ ‘ಊರುಕೇರಿ’ (೧೯೯೭) ತುಂಬಾಡಿ ರಾಮಯ್ಯ ಅವರ ‘ಮಣೆಗಾರ’ (೧೯೯೯), ಕೆ. ಗೋವಿಂದರಾಜ ಅವರ ‘ಮನವಿಲ್ಲದವರ ಮಧ್ಯೆ’ (೨೦೦೦) ಮತ್ತು ಸಿ.ಜಿ.ಕೃಷ್ಣಸ್ವಾಮಿ ಅವರ ‘ಕತ್ತಾಲೆ ಬೆಳದಿಂಗಳೊಳಗೆ’ (೨೦೦೨) ಪ್ರಕಟವಾದವು. ಮುನಿವೆಂಕಟಪ್ಪನವರ ‘ಅಂತ್ಯಜನ ಅಂತರಂಗ’ ಆತ್ಮಕಥೆ ಕಂತುಗಳಾಗಿ ಪ್ರಕಟವಾಗುತ್ತಿದೆ. ಹಿರಿಯ ಲೇಖಕಿ ಬಿ.ಟಿ. ಲಲಿತಾ ನಾಯಕ ಅವರು ತಮ್ಮ ಆತ್ಮಕಥೆಯ್ನು ಲಂಕೇಶ್ ಪತ್ರಿಕೆಯಲ್ಲಿ ಹಲವು ಕಂತುಗಳಲ್ಲಿ ಪ್ರಕಟಿಸಿದ್ದಾರೆ. ಆದರೆ ಇದ ಪೂರ್ಣಗೊಂಡು ಪುಸ್ತಕ ರೂಪದಲ್ಲಿ ಬರಬೇಕಾಗಿದೆ. ಅಲ್ಲದೆ ಇನ್ನೂ ಹಲವು ದಲಿತ ಲೇಖಕರಿಂದ ಆತ್ಮಕಥೆಗಳನ್ನು ನಿರೀಕ್ಷಿಸಲೂಬಹುದಾಗಿದೆ. ಕನ್ನಡದಲ್ಲಿ ಆತ್ಮಕಥೆಗಳು ಕಡಿಮೆ ಸಂಖ್ಯೆಯಲ್ಲಿ ಬಂದಿವೆಯಾದರೂ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅವು ಗಮನಾರ್ಹವಾಗಿ ನಿಂತಿರುವುದು ನಿಜ.

ಅಸ್ಪೃಶ್ಯತೆಯ ಘೋರ ಅನುಭವ, ಭೀಕರವಾದ ಬಡತನದ ಕಹಿ, ಪರಾವಲಂಬನೆಯಿಂದ ಬಂದ ದಾಸ್ಯ, ವ್ಯವಸ್ಥೆಯ ಅಟ್ಟಹಾಸ, ದಲಿತರ ಬದುಕನ್ನು ನುಂಗಿ ನೀರು ಕುಡಿಯುತ್ತಿರುವ ಮೌಢ್ಯ, ಸ್ವಾತಂತ್ರ್ಯಾನಂತರ ಬಂದ ಶೈಕ್ಷಣಿಕ ಸವತ್ತುಗಳಿಂದಾದ ಅನುಕೂಲತೆ, ತಮ್ಮ ಮೇಲಿನ ದೌರ್ಜನ್ಯವನ್ನು ಎದುರಿಸಲು ದಲಿತರು ನಡೆಸಬೇಕಾಗಿ ಬಂದ ಹೋರಾಟ ಇತ್ಯಾದಿ ವಿಷಯಗಳು ಈ ಆತ್ಮಕಥೆಗಳ ಒಡಲಲ್ಲಿ ಇಂಬುಗೊಂಡಿವೆ.

ಅಸ್ಪೃಶ್ಯತೆ ದಲಿತ ಸಮುದಾಯವನ್ನು ಬೆನ್ನುಬಿಡದೆ ಕಾಡುವ ಭೂತಾಕಾರದ ಸಮಸ್ಯೆ, ಬುದ್ಧ, ಬಸವ, ಅಂಬೇಡ್ಕರ್ ಮುಂತಾದ ಘಟಾನುಘಟಿಗಳು ಇದನ್ನು ತೊಲಗಿಸಲು ಏನೆಲ್ಲ ಹೋರಾಟ ಮಾಡಿದರೂ ಇದು ರಕ್ತಬೀಜಾಸುರನಂತೆ ಮತ್ತೆ ಮತ್ತೆ ಹೆಡೆಯತ್ತಿ ದಲಿತ ಸಮುದಾಯವನ್ನು ನೋವು, ಆತಂಕಗಳಿಗೆ ಗುರಿಮಾಡಿದೆ. ಗೌರ್ಮೆಂಟ್ ಬ್ರಾಹ್ಮಣದ 'ಬೆದಗೆ ಬಿದ್ದ ಎಮ್ಮೆ ಓಡಿ ಬಂದ ಕೋಣ', 'ಹಂಡ್ಯಾನ ಲಾಳಿ ಕತ್ತರಿಸಿದ ಪ್ರಸಂಗ', 'ಮಾಜಿ ಪ್ರೇಯಸಿ', ದಲಿತ ಬರೆದದ್ದು ಎನ್ನುವ ಕಾರಣಕ್ಕಾಗಿ ಮಠದಲ್ಲಿಟ್ಟ ರಾಘವೇಂದ್ರನ ಪಟವನ್ನು ಅಲ್ಲಿಂದ ತೆಗೆದುಹಾಕುವ ಪ್ರಸಂಗಗಳು ಸಂವೇದನಶೀಲತೆಯುಳ್ಳ ಯಾರನ್ನಾದರೂ ಬೆಚ್ಚಿಬೀಳಿಸುವಂತಿವೆ. ತಮ್ಮ ಹಿಡಿತದಲ್ಲಿರುವ ಕೋಣ, ನಾಯಿಗಳನ್ನು ಶೂದ್ರರ ಎಮ್ಮೆ ನಾಯಿಗಳೊಂದಿಗೆ ಅವುಗಳ ಲೈಂಗಿಕ ಹಸಿವು ತೀರಿಸಿಕೊಳ್ಳಲು ಬಿಡದ ಸವರ್ಣೀಯ ವ್ಯಕ್ತಿಗಳ ಸಂಕುಚಿತ ಸ್ವಭಾವ ಮತ್ತು ಅಸ್ಪೃಶ್ಯತೆಯ ಆಚರಣೆ ಲೇಖಕರನ್ನು ಮೂಕವಿಸ್ಮಿತರನ್ನಾಗಿ ಮಾಡಿದೆ. 'ಸೃಷ್ಟಿಯ ಜೀವಿಗಳಿಗೂ ಸಹಜವಾಗಿ ಸೇರಲು ಅವಕಾಶ ಕೊಡದ ಈ ಸಮಾಜ ಪರಸ್ಪರ ಜನರನ್ನು, ಪ್ರೇಮಿಗಳನ್ನೂ ಸೇರಲು ಹಾಗೆ ತಾನೆ ಅವಕಾಶ ಕೊಟ್ಟೀತು?' ಅಸಹಾಯಕತೆ, ನೋವು ಮತ್ತು ಮೌನದ ಆಳದಿಂದ ಏಳುವ ಈ ಪ್ರಶ್ನೆಗೆ ಇನ್ನೂ ಪರಿಹಾರ ದೊರೆಯಬೇಕಾಗಿದೆ.

'ತಮ್ಮನ್ನು ಕಂಡರೆ ತೊಣಚೆಹತ್ತಿದ ಹಸು ಎಗರಾಡುವಂತೆ ಎಗರಾಡುವ ಜೈನರ' ಪ್ರಸಂಗ, ದೇವಸ್ಥಾನದ ಪ್ರವೇಶದ ನಿಷೇಧ ಪ್ರಸಂಗ ಮಣೆಗಾರರಿಗೆ ಮತ್ತು ಹೊಲೆಯರಿಗೆ ಪ್ರತ್ಯೇಕ ಬಾವಿಗಳಿರುವ ಸಂದರ್ಭ, ಹೊಲೆಯರ ಹೆಂಗಸರು ಮಣೆಗಾರರ ಹಟ್ಟಿಗೆ ಕೂಲಿ ಆಳುಗಳನ್ನು ಕರೆಯಲು ಬರುವಾಗ ಕೆಂಡದ ಮೇಲೆ ನಡೆದು ಬರುವಂತೆ ಮಡಿಮೈಲಿಗೆಯ ಭಾವದಿಂದ ಬಂದುಹೋಗುತ್ತಿದ್ದರೆನ್ನುವ 'ಮೇಕೆಗಾರ'ದಲ್ಲಿಯ ಪ್ರಸಂಗಗಳು ಮತ್ತಷ್ಟು ಸೂಕ್ಷ್ಮವಾಗಿವೆ. ಅಸ್ಪೃಶ್ಯ ಸಮುದಾಯಗಳ ನಡುವೆಯೇ ಹುಟ್ಟಿಕೊಂಡ ಒಳಜಾತಿಯ ಪ್ರಜ್ಞೆ ಮತ್ತು ಅಲ್ಲಿಯೇ ಇರುವ ಮೇಲುಕೀಳಿನ ಭಾವನೆಯು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯತೆಯ ಭಾವನೆಯು ಹೇಗೆ ಅದರ ಮೂಲೆ ಮೂಲೆಗೂ ವ್ಯಾಪಿಸಿಕೊಂಡಿದೆ ಎಂಬುದನ್ನು ಸೂಚಿಸುತ್ತದೆ. ತಾವು ದಲಿತ ವಿದ್ಯಾರ್ಥಿಯೆಂದು ತಿಳಿದಾಗ ತಮ್ಮಿಂದ ನೀರು ತರಿಸಿಕೊಳ್ಳುವುದನ್ನು ನಿಲ್ಲಿಸಿದ ಪ್ರಸಂಗವನ್ನು ಸಿದ್ಧಲಿಂಗಯ್ಯ ಅವರು ಗಾಢವಾದ ನೋವಿನೊಂದಿಗೆ 'ಊರು-ಕೇರಿ'ಯಲ್ಲಿ ದಾಖಲಿಸಿದ್ದಾರೆ. ದಲಿತ ಆತ್ಮಕಥೆಗಳು ಆಯಾ

ಲೇಖಕರು ಅನುಭವಿಸಿದ ಅಸ್ಪೃಶ್ಯತೆಯ ಕಹಿ–ನೋವುಗಳನ್ನು ಅಭಿವ್ಯಕ್ತಿಸುತ್ತಲೇ ದಲಿತ ಸಮುದಾಯದ ಆ ಭಯಂಕರವಾದ ಸಮಸ್ಯೆಯಿಂದ ತತ್ತರಿಸಿ ಹೋದ ಇತಿಹಾಸದ ಕಠೋರ ವಾಸ್ತವವನ್ನು ಕಟ್ಟಿಕೊಡುತ್ತವೆ.

ಬ್ರಿಟೀಷರ ಉದಾರ ನೀತಿಯ ಫಲವಾಗಿ ಮೊಟ್ಟಮೊದಲ ಬಾರಿಗೆ ಶಿಕ್ಷಣ ಪಡೆಯುವ ಅವಕಾಶ ಈ ಸಮುದಾಯಕ್ಕೆ ದೊರೆಯಿತು. ಆದರೆ ಇಲ್ಲಿನ ಬಹುಪಾಲು ಸಂಪ್ರದಾಯಸ್ಥರಿಗೆ ಇದು ಸಹ್ಯವಾಗಿರಲಿಲ್ಲ. ನುಂಗಲಾರದ ತುತ್ತಾಗಿತ್ತು. ಶಾಲೆಯಲ್ಲಿ ಮುಕ್ತವಾಗಿ ದಲಿತ ವಿದ್ಯಾರ್ಥಿಗಳು ಇತರರೊಡನೆ ಒಡನಾಡುವ, ಗುರುಗಳನ್ನು ಸಂಪರ್ಕಿಸುವ ಧೈರ್ಯವನ್ನು ಅಂದಿನ ವ್ಯವಸ್ಥೆ ಅವರಿಗೆ ಕೊಟ್ಟಿರಲಿಲ್ಲ. ಇದಕ್ಕೆ ಅಪವಾದಗಳು ಇದ್ದವು; ಆ ಮಾತು ಬೇರೆ. ದಲಿತ ವಿದ್ಯಾರ್ಥಿಗಳು ಸದಾ ಮುದುಡಿಕೊಂಡಿರಬೇಕಾದ ಅನಿವಾರ್ಯತೆ ಇತ್ತು. ಕಪ್ಪು ಹಲಗೆಯ ಮೇಲೆ ಮಾಲಕತ್ತಿ ಎಂದು ತಪ್ಪಾಗಿ ಬರೆದುದ್ದನ್ನು ಮಾಲಗತ್ತಿ ಎಂದು ತಿದದು ಬರೆದುದಕ್ಕೆ ಗೌರಮೆಂಟ್ ಬ್ರಾಹ್ಮಣದ ಕಥಾನಾಯಕ ಗುರುಗಳಿಂದ ತಿರಸ್ಕಾರ, ಹೀಯಾಳಿಕೆಗೆ ಗುರಿಯಾಗಬೇಕಾಗುತ್ತದೆ. ಗುರುಗಳ ಭಯದಿಂದ ತಮ್ಮ ಅಣ್ಣ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ದಾರುಣ ಪ್ರಸಂಗವನ್ನು ಮಣೆಗಾರದ ಲೇಖಕ ತುಂಬಾಡಿ ರಾಮಯ್ಯ ತೀರಲಾರದ ನೋವಿನಿಂದ ದಾಖಲಿಸಿದ್ದಾರೆ.

ಚರಿತ್ರೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ದಲಿತರನ್ನು ಅಕ್ಷರಾಭ್ಯಾಸದಿಂದ ಮಾತ್ರವಲ್ಲ, ಆಸ್ತಿಯ ಒಡೆತನದಿಂದಲು ದೂರವಿರಿಸಿ ಭೌತಿಕ ಸೇವೆಗಾಗಿಯೇ ಅವರನ್ನು ಒತ್ತಾಯಿಸುತ್ತ ಬಂದಿರುವುದು ಸ್ಪಷ್ಟವಾಗುತ್ತದೆ. ಹೀಗಾಗಿ ರಟ್ಟೆಯೇ ಅವರಿಗೆ ಬಂಡವಾಳ. ಭೌತಿಕ ಶ್ರಮವೇ ಉತ್ಪಾದನೆಯ ಮೂಲ. ರಟ್ಟೆ ಮತ್ತು ದುಡಿಮೆ ಕೈಕೊಟ್ಟರೆ ಅವರಿಗೆ ಭಿಕ್ಷೆಯೇ ಗತಿ. ಅದೂ ಸಿಗದಿದ್ದರೆ ಉಪವಾಸ. ಧೈರ್ಯವಿದ್ದರೆ ಕಳ್ಳತನ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವುದು. ಇದು ದಲಿತರ ತುತ್ತಿನ ಚೀಲದ ಕಥೆ. ಹಣ ಮತ್ತು ಅದಕ್ಕೆ ಸಂಬಂಧಿಸಿದ ವಸ್ತುಗಳು ಸವರ್ಣೀಯರಿಗೆ ಅಮಂಗಳ. ಆದರೆ ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ದಲಿತರಿಗೆ ಹೆಣದ ಮೇಲೆ ತೂರಿದ ಪುಡಿಗಾಸು ಕೂಡ ಅಮೂಲ್ಯ. ಅದನ್ನು ಪಡೆಯಲು ಅವರಲ್ಲಿ ನೂಕುನುಗ್ಗಲು ನಡೆಯುತ್ತಿದ್ದನ್ನು 'ಗೌರ್ಮೆಂಟ್ ಬ್ರಾಹ್ಮಣ'ದಲ್ಲಿನ 'ಹೆಣದ ಮೇಲಿನ ದುಡ್ಡು' ಪ್ರಸಂಗ ಚಿತ್ರಿಸುತ್ತದೆ. 'ಊರು–ಕೇರಿಯ' ನಾಯಕನ ಕುಟುಂಬವೂ ಕಡುಬಡತನದಿಂದ ನಲುಗಿದೆ. ನಾಯಕನ ತಂದೆ ಹೊಟ್ಟೆಪಾಡಿಗೆ ಎತ್ತಿನಂತೆ ನೊಗಹೊತ್ತು ಎಳೆಯುತ್ತಾನೆ. ಮೈಮುಪ್ಪಾಗುವಂತೆ ಸೌದೆ ಒಡೆಯುತ್ತಾನೆ, ಸಾಲದ ಹೊರೆ ಹೊರಲಾರದೆ ಕೊನೆಗೆ ಆತ್ಮಹತ್ಯೆಯ ಪ್ರಯತ್ನಕ್ಕೂ ಅವನು ಕೈಹಾಕುವ ಪ್ರಸಂಗ ಓದುಗರನ್ನು ತಲ್ಲಣಗೊಳಿಸುತ್ತದೆ. ಅಲ್ಲದೆ ಸ್ವತಃ 'ಊರುಕೇರಿಯ' ನಾಯಕ ಓದುತ್ತಿರುವಾಗಲೇ ದುಡಿಯಬೇಕಾದ ಅನಿವಾರ್ಯತೆ ಬರುತ್ತದೆ. ಸಿಲ್ಕ್ ಮತ್ತು ಸಾಬೂನು ಫ್ಯಾಕ್ಟರಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. 'ಮಣೆಗಾರ' ಕೃತಿಯ ನಾಯಕನ ತಂದೆ ಕೂಡ ಕಡುಬಡವ. ಚಪ್ಪಲಿ ಹೊಲಿಯುವುದು, ಹಲಗೆ

ಬಾರಿಸುವುದು, ಹಂದಿ ಮೇಯಿಸುವುದು-ಹೀಗೆ ಅವನ ಕೆಲಸಗಳು ಬದಲಾಗುತ್ತ ಹೋಗುತ್ತವೆ. ಆದರೂ ಹೊಟ್ಟೆ ತುಂಬುವುದಿಲ್ಲ; ಸಾಲದ ಹೊರೆ ಇಳಿಯುವುದಿಲ್ಲ. ಕಥಾನಾಯಕ ಕೂಡ ರಜಾ ದಿನಗಳಲ್ಲಿ ಹಂದಿ ಕಾಯುವ, ಚಪ್ಪಲಿ ಹೊಲಿಯುವ, ಹಲಗೆ ಬಾರಿಸುವ ಕೆಲಸಗಳನ್ನು ಮಾಡುತ್ತಾನೆ. ಹೊಲ ಗದ್ದೆ,ಮನೆ ಆಸ್ತಿಗಳಿಲ್ಲದ ಈ ಜನ ಜೀವನಕ್ಕೆ ಮಾರ್ಗೋಪಾಯಗಳನ್ನು ಕಂಡುಕೊಂಡ ರೀತಿಯೇ ಆಶ್ಚರ್ಯಕರವಾದದ್ದು. ಕತ್ತಾಳೆಯಿಂದ ನಾರು ತೆಗೆದು ಹಗ್ಗ ತಯಾರಿಸುವುದು, ಸತ್ತ ದನಗಳ ಚರ್ಮದಿಂದ ಕೃಷಿ ಸಲಕರಣೆಗಳನ್ನು ತಯಾರಿಸುವುದು ಅಷ್ಟೇ ಏಕೆ ಚರ್ಮವಾದ್ಯಗಳನ್ನು ಆವಿಷ್ಕರಿಸಿದ್ದು ಅವರ ಸೃಷ್ಟ್ಯಾತ್ಮಕ ಪ್ರತಿಭೆಗೆ ಸಾಕ್ಷಿಯಾಗಿದೆ.

ಈ ಆತ್ಮಕಥೆಗಳಲ್ಲಿ ಕಥಾನಾಯಕನ ಬದುಕು ಮಾತ್ರ ಬರುವುದಿಲ್ಲ. ಬದಲಿಗೆ ಅವರ ಸುತ್ತಲಿನ ಬದುಕಿನ ಆಗುಹೋಗುಗಳು ಇಲ್ಲಿ ಅನಾವರಣಗೊಂಡಿವೆ. 'ಊರು-ಕೇರಿ'ಯಲ್ಲಿ ನಡೆಯುತ್ತಿದ್ದ ಜಗಳಗಳು, ಅಲ್ಲಿದ್ದ ರೌಡಿಗಳು, ಅವರ ಚಟುವಟಿಕೆಗಳು, ಕುಡುಕರ ಹಾವಳಿ, ಹೆಂಡತಿಯ ಶೀಲ ಶಂಕಿಸುವ ಗಂಡ, ಗಂಡನನ್ನೇ ಹೊಡೆಯುವ ಹೆಂಡತಿ, ದೇವರು, ದೆವ್ವ, ಮಾಟ, ಮಂತ್ರಗಳ ಬಗೆಗಿನ ನಂಬಿಕೆ ಆಚರಣೆ ಮುಂತಾದ ಪ್ರಸಂಗಗಳಿಂದ ಇಡೀ ಕೇರಿಯೇ ಅಲ್ಲಿ ಜೀವಂತವಾಗಿ ನಡೆದಾಡಿದಂತಾಗುತ್ತದೆ. 'ಮನವಿಲ್ಲದವರ ಮಧ್ಯ'ದಲ್ಲಿ ಗೋವಿಂದರಾಜ್ ಅವರು ತಮ್ಮ ಕುಟುಂಬದ ಕಥೆಯನ್ನು ಹೇಳುತ್ತಲೇ ಅಶೋಕಪುರಂನ ಹೊಲಗೇರಿಯ ಜೀವನವನ್ನು ಕಟ್ಟಿಕೊಟ್ಟಿದ್ದಾರೆ. ಅಲ್ಲಿಯ ಜನರ ಅವಿದ್ಯೆ, ಬಡತನ, ಜಗಳ, ಕೊಳಕುತನಗಳನ್ನು ವಿವರಿಸುತ್ತಲೇ ಅಲ್ಲಿನ ಜನರು ಆಚರಿಸುವ ಹಬ್ಬ, ಜಾತ್ರೆ, ಉತ್ಸವ, ಊಟೋಪಚಾರ, ಆಟನೋಟಗಳನ್ನು ಚಿತ್ರವತ್ತಾಗಿ ಹಿಡಿದಿಟ್ಟಿದ್ದಾರೆ. ವಿದ್ಯೆ ಮತ್ತು ನಾಗರೀಕತೆಯ ಸೌಲಭ್ಯಗಳಿಂದ ಬದಲಾವಣೆಗೆ ಒಳಗಾಗುತ್ತಿರುವ ದಲಿತ ಸಮುದಾಯದ ವಿಶಿಷ್ಟ ಚಿತ್ರ ಈ ಕೃತಿಯಲ್ಲಿ ಕಾಣುತ್ತದೆ.

ನಾಲ್ಕು ಆತ್ಮಕಥೆಗಳಲ್ಲಿ ಕಂಡುಬರುವ ವಿಶಿಷ್ಟ ಅಂಶಗಳನ್ನು ಹೀಗೆ ಗುರುತಿಸಬಹುದು:

೧. ಇವುಗಳಲ್ಲಿನ ಕಥಾನಾಯಕರು ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ, ಎತ್ತರಕ್ಕೆ ಬೆಳೆದದ್ದು, ಸಮುದಾಯದ ಉಳಿದ ಜನ ಇಂತಹ ಎತ್ತರವನ್ನು ಮುಟ್ಟದಿದ್ದರೂ ತಮ್ಮ ತಮ್ಮ ಮಿತಿಗಳಲ್ಲಿ ಜೀವನೋಪಾಯಗಳನ್ನು ಹುಡುಕಿಕೊಂಡಿರುವುದು.

೨. ಆತ್ಮಕಥೆಗಳಲ್ಲಿ ವ್ಯವಸ್ಥೆಯ ವಿರುದ್ಧ ಸಿಟ್ಟು ಆಕ್ರೋಶ ಪ್ರಕಟವಾಗಿದ್ದರೂ, ಮಾನವೀಯತೆಯನ್ನು ತೋರಿದ ಸಂದರ್ಭಗಳಲ್ಲಿ ಕೃತಜ್ಞತೆಯನ್ನೂ ವ್ಯಕ್ತಪಡಿಸಲಾಗಿದೆ.

೩. ಗೌರ್ಮೆಂಟ್ ಬ್ರಾಹ್ಮಣ ಹೊರತುಪಡಿಸಿದರೆ ಉಳಿದ ಮೂರೂ ಆತ್ಮಕಥೆಗಳಲ್ಲಿ ಬಸವಲಿಂಗಪ್ಪನವರ ಭೂಸಾ ಪ್ರಕರಣ ಹಾಗೂ ಡಿ.ಎಸ್.ಎಸ್.ನ. ಚಟುವಟಿಕೆಗಳು ವಿವರಗಳೊಂದಿಗೆ ದಾಖಲಾಗಿವೆ.

೪. “೧೯೮೩ನೆಯ ಇಸವಿಯಲ್ಲಿ ರಾಮಕೃಷ್ಣ ಹೆಗಡೆ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಆಗ ರಾಜ್ಯದಲ್ಲಿ ದಲಿತರ ಮೇಲೆ ನಡೆಯುತ್ತಿದ್ದ ಹಲ್ಲೆ ದೌರ್ಜನ್ಯಗಳು ಎಲ್ಲೆ ಮೀರಿದ್ದವು’’ ಎನ್ನುತ್ತ ‘‘ಮಣೆಗಾರ’’ ಹೆಗಡೆ ಅವರನ್ನು ಸೇರಿದಂತೆ ಅವರ ಮಂತ್ರಿ ಮಂಡಲದ ವಿರುದ್ಧ ದಲಿತ ಸಂಘಟನೆ ಪಿಕೇಟಿಂಗ್ ನಡೆಸಿದ ಪ್ರಸಂಗವನ್ನು ದಾಖಲಿಸಿದೆ. ಇನ್ನೊಂದೆಡೆ ಸಿದ್ಧಲಿಂಗಯ್ಯ ಅವರ ‘ಊರು-ಕೇರಿ’ ಹೆಗಡೆಯವರಿಗೆ ಅರ್ಪಿತವಾಗಿದೆ. ವೈರುಧ್ಯಮಯವಾಗಿ ಕಾಣುವ ಈ ವಿಷಯ ಚರ್ಚಾಸ್ಪದವಾಗಿದೆ.

ನಾಲ್ಕೂ ಆತ್ಮಕಥನಗಳಲ್ಲಿ ಕಥನ ಕೌಶಲದ ಯಶಸ್ಸಿದೆ. ಮಾಲಗತ್ತಿಯವರು ಸಾಮಾನ್ಯವಾಗಿ ಪ್ರತಿಪ್ರಸಂಗವನ್ನು ಒಂದು ಪುಟ್ಟ ಪೀಠಿಕೆಯೊಂದಿಗೆ ಪ್ರಾರಂಭಿಸುತ್ತಾರೆ. ಅನಂತರ ಪ್ರಸಂಗದ ವಿವರವಾದ ನಿರೂಪಣೆ ಬರುತ್ತದೆ. ಕೊನೆಯಲ್ಲಿ ಅದು ಪ್ರಶ್ನೆ ಅಥವಾ ಗಂಭೀರ ಪ್ರತಿಕ್ರಿಯೆಯೊಂದಿಗೆ ಮುಕ್ತಾಯವಾಗುತ್ತದೆ. ಇಲ್ಲಿನ ಇಪ್ಪತ್ತೂ ಅಧ್ಯಾಯಗಳಲ್ಲಿ ವಿಷಯ ವೈವಿಧ್ಯ ಇದೆ. ಸನ್ನಿವೇಶಗಳನ್ನು ಅನುಭವಗಳನ್ನು ಅದರ ಎಲ್ಲಾ ಸೂಕ್ಷ್ಮಗಳೊಂದಿಗೆ ನಿರೂಪಿಸುವ ಕಥನ ಕೌಶಲವಿದೆ. ‘ಮಾಲಗತ್ತಿಯ ವರದು ವೇದನೆ ತುಂಬಿದ ದಾರ್ಶನಿಕನಂತೆ ವಿವೇಚನೆ ಮಾಡುವ ಗಂಭೀರ ಬರಹವಾಗಿದೆ. ಕೆಲವೊಮ್ಮೆ ಅವರು ಸಮಾಜದ ವರ್ತನೆಯನ್ನು ವಿಮರ್ಶೆ ಮಾಡುವ ಸಿನಿಕತೆ ಎನಿಸುವ ಆಕ್ರೋಶದ ಅಂಚಿಗೂ ಸರಿಯುವುದುಂಟು. ಅವರ ಬರಹದ ಶಕ್ತಿ ಇರುವುದು ಅತ್ಯಂತ ವಿಶಿಷ್ಟವಾದ ಅನುಭವಗಳಲ್ಲಷ್ಟೇ ಅಲ್ಲ; ಆ ಅನುಭವಗಳನ್ನು ನಿರೂಪಿಸಲು ಬಳಸುವ ಚಿತ್ರಮಯ ಭಾಷೆಯಲ್ಲಿ. ಈ ಬರಹಗಳು ಹೀಗಾಗಿ ಒಮ್ಮೆ ಕವಿತೆಯಂತೆ ಮತ್ತೊಮ್ಮೆ ಪ್ರಬಂಧಗಳಂತೆ ಬಹಳ ಸಲ ಕಥೆಗಳಂತೆ ಓದಿಸಿಕೊಳ್ಳುತ್ತವೆ. ಮುಟ್ಟಿದರೆ ಮಿಡಿಯುತ್ತವೆ.’ ಭಾವಸಮತೋಲನ, ತರ್ಕಬದ್ಧ ಪ್ರತಿಕ್ರಿಯೆ ಹಾಗೂ ಪರಿಣಾಮಕಾರಿಯಾದ ಕಥನ ಕೌಶಲದಿಂದ ಗೌರ್ಮೆಂಟ್ ಬ್ರಾಹ್ಮಣ ಸಾಕಷ್ಟು ಯಶಸ್ಸನ್ನು ಸಾಧಿಸಿತು. ಈ ಕೃತಿಯ ಯಶಸ್ಸು ಒಂದರ್ಥದಲ್ಲಿ ಅನಂತರದಲ್ಲಿ ಒಂದರ ಹಿಂದೆ ಒಂದು ದಲಿತ ಆತ್ಮಕಥೆಗಳು ಬರಲು ಪ್ರೇರಣೆಯನ್ನು ಒದಗಿಸಿತು. ಸಿದ್ಧಲಿಂಗಯ್ಯ ಅವರ ‘ಊರುಕೇರಿ’ ಇನ್ನೂ ಸಂಪೂರ್ಣವಾಗಿ ಮುಕ್ತಾಯವಾಗಿಲ್ಲ. ಒಂದು ಭಾಗ ಪುಸ್ತಕರೂಪದಲ್ಲಿ ಪ್ರಕಟವಾಗಿದೆ. ಉಳಿದ ಭಾಗ ಕಂತುಗಳ ರೂಪದಲ್ಲಿ ‘ಅಗ್ನಿ’ ವಾರಪತ್ರಿಕೆಯಲ್ಲಿ ಪ್ರಕಟವಗುತ್ತಿದೆ. ಕಾವ್ಯದಲ್ಲಿ ಅತ್ಯಂತ ಉಗ್ರವಾಗಿ ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸಿದ ಈ ಕವಿ ಆತ್ಮಕಥನದಲ್ಲಿ ಆವೇಶವನ್ನು ಬದಿಗಿರಿಸ ನೋವು-ವಿಷಾದಗಳೊಂದಿಗೆ ತಮ್ಮ ಹಾಗೂ ತಮ್ಮ ದಲಿತ ಕೇರಿಯ ವಾಸ್ತವ ಬದುಕನ್ನು ಬಿಡಿಸಿಟ್ಟಿದ್ದಾರೆ. ಈ ಆತ್ಮಕಥೆಯ ಉದ್ದಕ್ಕೂ ವಿನೋದ-ವ್ಯಂಗ್ಯ-ವಿಡಂಬನೆಯ ಧಾಟಿ ಎದ್ದು ಕಾಣುತ್ತದೆ. ಎಷ್ಟೋ ಪ್ರಸಂಗಗಳನ್ನು ಓದಿದಾಗ ನಗುವನ್ನು ತಡೆಯಲಾಗುವುದಿಲ್ಲ. ಆದರೆ ಆ ನಗುವಿನ ಹಿಂದೆಯೇ ದಲಿತ ಬದುಕಿನ ದಾರುಣತೆ ಮನವನ್ನು ಕಲಕಿ ವ್ಯವಸ್ಥೆಯ ಬಗೆಗೆ ಚಿಂತನೆ ಮೂಡಿಸುತ್ತದೆ. ತುಂಬಾಡಿ ರಾಮಯ್ಯ ಅವರ ‘ಮಣೆಗಾರ’ ಕೂಡ ಕಥನ ಶೈಲಿಯಲ್ಲಿ ಮೇಲಿನ ಎರಡು ಕೃತಿಗಳಿಗೆ ಸರಿಸಾಟಿಯಾಗಿಯೇ ಕಾಣುತ್ತದೆ.

ಮತ್ತು ಸಮೂಹನಿಷ್ಠ ಅನುಭವಗಳಿಂದಾಗಿ ಗಮನ ಸೆಳೆಯುತ್ತದೆ. 'ಮನವಿಲ್ಲದವರ ಮಧ್ಯೆ' ಒಂದು ಅತ್ಯಂತ ದೀರ್ಘ ಆತ್ಮಕಥನ, ಹೆಚ್ಚು ವ್ಯಕ್ತಿನಿಷ್ಟವಾದ ಅದರ ಉತ್ತರಾರ್ಧವನ್ನು ಹೊರತುಪಡಿಸಿದರೆ ಪೂರ್ವಾರ್ಧ ದಲಿತ ಅನುಭವಗಳಿಂದ ಗಮನ ಸೆಳೆಯುತ್ತದೆ. ಇದರ ಕಥನ ಕೌಶಲ ಕೂಡ ಯಶಸ್ವಿಯಾದದ್ದೆ.

ಮರಾಠಿ ಹಾಗೂ ಕನ್ನಡ ದಲಿತ ಆತ್ಮಕಥೆಗಳನ್ನು ಪರಸ್ಪರ ಹೋಲಿಸಿ, ನೋಡುವ ವಿಚಾರ ಅಲ್ಲಲ್ಲಿ ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಮರಾಠಿ ದಲಿತ ಆತ್ಮಕಥೆಗಳ ಅನುಭವ ಲೋಕ ಓದುಗರ ಮೈಯಲ್ಲಿ ನಡುಕ ಹುಟ್ಟಿಸುವಷ್ಟು ಕಠೋರವಾಗಿದೆ. ಕನ್ನಡ ಆತ್ಮಕಥೆಗಳಲ್ಲಿ ಆ ಕಂಪನ ಗುಣ ಕಡಿಮೆ. ಆದರೆ ದಲಿತ ಸಮುದಾಯ ಅನುಭವಿಸಿದ ಅಸ್ಪೃಶ್ಯತೆ ಬಡತನ ನೋವು ಅಪಮಾನಗಳನ್ನು ಕಟ್ಟಿಕೊಡುವಲ್ಲಿ ಕನ್ನಡ ದಲಿತ ಆತ್ಮಕಥೆಗಳು ಯಶಸ್ವಿಯಾಗಿವೆ ಎಂದೇ ಹೇಳಬೇಕು. ಈ ಆತ್ಮಕಥೆಗಳು ಕೇವಲ ಸಾಹಿತ್ಯ ಪ್ರಕಾರಗಳಾಗಿ ಮಾತ್ರನಿಲ್ಲದೆ ದಲಿತ ಸಮುದಾಯದ ಸಾಂಸ್ಕೃತಿಕ ಚರಿತ್ರೆಗಳಾಗಿಯೂ ಗಮನ ಸೆಳೆಯುತ್ತವೆ. ಚರಿತ್ರೆಯಲ್ಲಿ ದಾಖಲಾಗದೆ ಉಳಿದುಕೊಂಡುಬಂದ ಘೋರವೂ, ವಿಸ್ಮಯಕಾರಿಯೂ ಆದ ದಲಿತ ಜೀವನ ಇವುಗಳಲ್ಲಿ ಅಭಿವ್ಯಕ್ತವಾಗಿದೆ. ಆದ್ದರಿಂದ ಸಮಾಜಶಾಸ್ತ್ರ, ಮಾನವಶಾಸ್ತ್ರ ಮತ್ತು ಸಾಂಸ್ಕೃತಿಕ ಇತಿಹಾಸಗಳಂತಹ ಅಧ್ಯಯನಕ್ಕೆ ಇವು ಆಕರಗಳಾಗಿ ನಿಲ್ಲುತ್ತವೆ.

ಅಡಿಟಿಪ್ಪಣಿ

೧. ದಲಿತಮಾರ್ಗ–ಸಂ. ಡಾ. ಅರವಿಂದ ಮಾಲಗತ್ತಿ, ಪುಟ ೧೨೭.

೨. ಅದೇ ಪುಟ ೧೨೮.

೩. ಉಧೃತ – ಸರಜು ಕಾಟ್ಕರ್ – ಕನ್ನಡ ಮರಾಠಿ ದಲಿತ ಸಾಹಿತ್ಯ ಪುಟ ೧೮೧

೪. ಉಧೃತ – ಸರಜು ಕಾಟ್ಕರ್ – ಕನ್ನಡ ಮರಾಠಿ ದಲಿತ ಸಾಹಿತ್ಯ, ಪುಟ ೧೮೨

೫. ಉಧೃತ – ಸರಜು ಕಾಟ್ಕರ್ – ಕನ್ನಡ ಮರಾಠಿ ದಲಿತ ಸಾಹಿತ್ಯ, ಪುಟ ೨೦೧

೬. ರಹಮತ್ ತರೀಕೆರೆ, ಪ್ರಜಾವಾಣಿ ೨೬.೦೨.೧೯೯೫.

೫. ದಲಿತ ಆತ್ಮಕತೆಗಳಿಗೆ ಪ್ರೇರಣೆ ಮತ್ತು ಪ್ರಭಾವ

ದಲಿತ ಆತ್ಮಕತೆಗಳಿಗೆ ಮೊದಲು ಪ್ರೇರಣೆ ನೀಡಿದವುಗಳು ಮರಾಠಿ ಆತ್ಮಕತೆಗಳು. "ಆತ್ಮಕತೆಗಳನ್ನು ಗಂಭೀರ ಸೃಜನ ಪ್ರಕಾರವಾಗಿ ವಿಸ್ತರಿಸಿದ ಸಾಧನೆ ಮರಾಠಿಯ ದಲಿತ ಬರಹಗಾರರದ್ದು. ಕೇವಲ ವಯಸ್ಸು ಮಾಗಿದವರು, ತುಂಬು ಜೀವನ ನಡೆಸಿದವರು ತಮ್ಮ ಬದುಕಿನತ್ತ ಹರಿಸುವ ಹಿನ್ನೋಟದಂತಿದ್ದ ಆತ್ಮಕಥನ ಪ್ರಕಾರ ಈ ಬರಹಗಾರರು ನಿರ್ಭಿಡತೆಯಿಂದ ತೆರೆದಿಟ್ಟ ಅಸ್ಪೃಶ್ಯ ಅದೃಶ್ಯ ಅನುಭವಗಳಿಂದ ಹೊಸ ನೋಟ, ಹೊಸ ತಿಳಿವಿಗೆ ನಾಂದಿಯಾಯಿತು. ಸಂಪ್ರದಾಯನಿಷ್ಟ ನಂಬಿಕೆಗಳ ಅಡಿಪಾಯವೇ ಅಲ್ಲಾಡುವಂತೆ ದಿಗ್ಭ್ರಮೆ ಹುಟ್ಟಿಸಿದ ಈ ಬರಹಗಳ ಮುಖಾಂತರ ಆತ್ಮಕಥೆಯು ಕಾವ್ಯ, ಕಾದಂಬರಿಗಳಂತೆ ಬಹುರೂಪಿ ಸಮೃದ್ಧಿ ಪಡೆಯಲು ಸಾಧ್ಯವಾಯಿತು."[೧]

"ಡಾ. ಹೆಚ್.ಎಸ್.ರಾಘವೇಂದ್ರರಾವ್ ಅವರ ಪ್ರಕಾರ ಕನ್ನಡದಲ್ಲಿ ದಲಿತರು ತಮ್ಮ ಸೃಜನಶೀಲ ಕೃತಿಗಳಲ್ಲೇ ತಮ್ಮ ಅನುಭವಗಳನ್ನು ಬಳಸಿಕೊಳ್ಳುವ ಕಾರಣವಾಗಿರಬಹುದು ಎಂದಿದ್ದಾರೆ. ಸೃಜನಶೀಲ ಕೃತಿಗಳು ಬೇರೆ ಬೇರೆ ಓದುಗರಿಗೆ ಬೇರೆ ಬೇರೆ ಸ್ತರಗಳಲ್ಲಿ ಭಿನ್ನ ಭಿನ್ನ ನೆಲೆಯಲ್ಲಿ ದಲಿತಾನುಭವದ ಅನೇಕ ಸಾಧ್ಯತೆಗಳನ್ನು ತಂದು ಕೊಡಬಲ್ಲವು ಎಂಬುದು ಸುಳ್ಳಲ್ಲ."[೨]

ಈ ರೀತಿಯ ಮಾತುಗಳ ಸಂದರ್ಭದಲ್ಲಿ ಮರಾಠಿ ದಲಿತ ಆತ್ಮಕತೆಗಳಾದ 'ಉಚಲ್ಯಾ' 'ಆಕ್ರಮಸಂತಾನ' ಇವು ಕನ್ನಡಕ್ಕೆ ಅನುವಾದಗೊಂಡವು. ಈ ಕೃತಿಗಳು ದಲಿತರ ಬದುಕನ್ನು ಮುಕ್ತವಾಗಿ ಒಂದು ಸಮುದಾಯದೊಂದಿಗೆ ಒಪ್ಪಂದದಲ್ಲಿ ಕಾಣಿಸುವ ಪ್ರಯತ್ನವನ್ನು ಮಾಡಿವೆ.

ಇಂಥ ಸಂದರ್ಭದಲ್ಲಿ ಕನ್ನಡ ಲೇಖಕರಲ್ಲಿ ಈ ರೀತಿ ಆಸೆ ಮೊಳಕೆಯೊಡೆದು ನಾವು ಏಕೆ ಬರೆಯಬಾರದೆಂಬ ಆಕಾಂಕ್ಷೆಯಿಂದ ಕನ್ನಡ ಸಾಹಿತ್ಯ ಸಂದರ್ಭದ ಪ್ರಸಿದ್ಧ ಲೇಖಕರಾದ ಡಾ.ಅರವಿಂದ ಮಾಲಗತ್ತಿ ಅವರು "ಗೌರ್ನಮೆಂಟ್ ಬ್ರಾಹ್ಮಣ" ಆತ್ಮಕತೆಯನ್ನು ಮೊದಲು ಬರೆದರು. ಇವರು ದಲಿತ ಆತ್ಮಕಥೆಗಳ ಪ್ರಭಾವದಿಂದ ತಮ್ಮ ಬಾಲ್ಯ ಯೌವನದ ಅನುಭವವನ್ನು ಯಾವುದೇ ಸಂಕೋಚವಿಲ್ಲದೆ ಮುಕ್ತ ಮನಸ್ಸಿನಿಂದ ತಮ್ಮ ಆತ್ಮಕಥೆಯನ್ನು ಬರೆದುಕೊಂಡಿದ್ದಾರೆ. ಈ ಕೃತಿಯಲ್ಲಿ ದಲಿತ ಸಮುದಾಯದ ಒಂದು ಪ್ರದೇಶದಲ್ಲಿ ಶೋಷಣೆಗೆ ಒಳಪಟ್ಟ ಜನರ ದನಿಯೊಂದಿಗೆ ಆತ್ಮಕಥೆಯು ಹೊಸ ತಿರುವನ್ನು ಪಡೆದುಕೊಂಡಿದೆ.

ಸಿದ್ಧಲಿಂಗಯ್ಯನವರ "ಊರುಕೇರಿ" ಆತ್ಮಕಥೆ ಬಂತು. ಇದು ಸಹ ತಮ್ಮ ಸಮುದಾಯದ ಅನುಭವಗಳಿಂದ ಕಷ್ಟ, ಶೋಷಣೆ ಮುಂತಾದ ನೆಲೆಯಲ್ಲಿ ತಾವು ಅನುಭವಿಸಿದ ಅಪಮಾನಗಳನ್ನು ತಮ್ಮದೇ ಆದ ಪ್ರಾದೇಶಿಕ ಭಾಷಾ ನೆಲೆಯಲ್ಲಿ ಹೇಳಿರುವುದು ಕಂಡುಬರುತ್ತದೆ. ಹೀಗೆ ಮುಂದುವರೆದು ಇಂಥ ಸಂದರ್ಭದಲ್ಲಿ ತುಂಬಾಡಿ ರಾಮಯ್ಯ ಅವರ

“ಮಣೆಗಾರ” ಕೃತಿ ಬಂತು. ಇವರು ಹಿಂದೆ ಬಂದ ಕೃತಿಗಳಿಗಿಂತ ಭಿನ್ನವಾಗಿ ತಮ್ಮ ಕೃತಿಯ ಶಿರೋನಾಮದಿಂದಲೂ ತಮ್ಮ ಸೃಜನಶೀಲತೆಯನ್ನು ತೋರಿಸಿದ್ದಾರೆ. ಇವರು ತಮ್ಮ ಜೀವನದಲ್ಲಿ ಅನುಭವಿಸಿದ ನೋವು, ಬಡತನ, ಶೋಷಣೆ ಮುಂತಾದ ಅನುಭವಗಳನ್ನು ಯಾವುದೇ ಪ್ರತಿಕ್ರಿಯೆಯನ್ನು ತೋರದೇ ತೀರ ಸೌಮ್ಯವಾಗಿ ತಮ್ಮ ಬರಹವನ್ನು ಹಿಡಿದಿಟ್ಟಿರುವುದು ಗೋಚರಿಸುತ್ತದೆ. ನಂತರ ಮುಂದೆ ಗೋವಿಂದ ರಾಜ್ ಅವರ “ಮನವಿಲ್ಲದವರ ಮಧ್ಯೆ” ಆತ್ಮಕಥೆ ಬಂತು. ಈ ರೀತಿಯ ಸಾಹಿತ್ಯ ಬರಲು ದಲಿತ ಲೋಕದ ಅನುಭವವನ್ನು ಯಾವುದೇ ಸಂಕೋಚವಿಲ್ಲದೇ ತೆರೆದ ಮನಸ್ಸಿನಿಂದ ತಮ್ಮ ಬಾಲ್ಯದ ಅನುಭವಗಳನ್ನು ಇದರಲ್ಲಿ ತಾನೇ ನಾಯಕನಾಗಿ ಹೇಳಿರುವ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದಲ್ಲಿಯೂ ಅಂಥ ಅನುಭವಗಳನ್ನು ಬಿತ್ತರಿಸಲು ದಲಿತ ಆತ್ಮಕಥೆಗಳ ಪ್ರೇರಣೆ ಮತ್ತು ಪ್ರಭಾವವಾಗಿರುವುದು ಕಂಡುಬರುತ್ತದೆ.

ಅಡಿಟಿಪ್ಪಣಿ

೧) ನೋವು ಹೆತ್ತ ಪ್ರೀತಿ : ಸಂ. ಅಪ್ಪಗೆರೆ ಸೋಮಶೇಖರ್, ನರೇಂದ್ರಕುಮಾರ ಪು. ೨೯.

೨) ಅದೇ: ಪುಟ ೨೯

೩. ಕನ್ನಡ ಆತ್ಮಕತೆಗಳಲ್ಲಿ ದಲಿತ ಆತ್ಮಕತೆಗಳ ಸ್ಥಾನ

ಕನ್ನಡ ಸಾಹಿತ್ಯದಲ್ಲಿ ಆತ್ಮಕತೆಗಳು ಪ್ರಾರಂಭವಾದ ಕಾಲದಿಂದಲೂ ಅವುಗಳು ತನ್ನ ಮಾನ್ಯತೆಯನ್ನು ಉಳಿಸಿಕೊಂಡು ಬಂದಿವೆ. ನವೋದಯ ಸಾಹಿತ್ಯ ಸಂದರ್ಭದಲ್ಲಿ ಬಂದಂತಹ ಆತ್ಮಕತೆಗಳಲ್ಲಿ ಕುವೆಂಪು ಅವರ "ನೆನಪಿನ ದೋಣಿಯಲ್ಲಿ" ಕಾರಂತರ "ಹುಚ್ಚು ಮನಸ್ಸಿನ ಹತ್ತು ಮುಖಗಳು" ಇವುಗಳು ಇಳಿವಯಸ್ಸಿನಲ್ಲಿ ಬರೆದಂತವುಗಳಾಗಿವೆ. ಜೊತೆಗೆ ಆ ಸಾಹಿತ್ಯ ಘಟ್ಟದಲ್ಲಿ ಪ್ರಮುಖ ಬರವಣಿಗೆಗಳೂ ಕೂಡ ಆಗಿವೆ.

ನವೋದಯ ಸಂದರ್ಭದಲ್ಲಿ "ಆತ್ಮಕತೆಗಳ ಒತ್ತಾಸೆಯ ಮೂಲ ವ್ಯಕ್ತಿನೆಲೆಯದೊ ಅಥವಾ ಸಮುದಾಯ ನೆಲೆಯದೊ ಎಂಬ ಪ್ರಶ್ನೆಯು ಎದುರಾಗುತ್ತದೆ. ಸಮುದಾಯದ ನೆಲೆಯದಾಗಿದ್ದರೆ ಅದು ಸಮುದಾಯದ ಅಪೇಕ್ಷೆಯೇ ಆಗಿರುತ್ತದೆ. ವ್ಯಕ್ತಿ ನೆಲೆಯದಾಗಿದ್ದರೆ ಅದು ವ್ಯಕ್ತಿಯ ಅಪೇಕ್ಷೆಯಾಗಿರುತ್ತದೆ. ಆದರೆ ವ್ಯಕ್ತಿಯ ಅಪೇಕ್ಷೆ ಎಂಬುದನ್ನು ಕೂಡ ಸಮಾಜವೇ ಸೃಷ್ಟಿಸುತ್ತದೆ. ಹಾಗಾಗಿ ತನ್ನ ಬಗ್ಗೆ ತಾನು ಹೇಳಿಕೊಳ್ಳಬೇಕೆಂಬ ಹಂಬಲವು ಒಂದು ಹಂತದಲ್ಲಿ ವ್ಯಕ್ತಿ ಮೂಲದ್ದು ಎಂದು ಕಾಣಿಸಿದರೂ ಮತ್ತೊಂದು ದೃಷ್ಟಿಯಲ್ಲಿ ಅದು ಸಮಾಜ ಮೂಲದ್ದು ಆಗಿರುತ್ತದೆ. ಅಥವಾ ಇವೆರಡೂ ಪರಸ್ಪರ ಒಂದನ್ನೊಂದು ಅವಲಂಬಿಸಿರುತ್ತವೆ."[೧]

ಶ್ರೀರಂಗರು ತಮ್ಮ ಆತ್ಮಕತೆಯ ಬಗ್ಗೆ ಹೇಳಿಕೊಂಡಿರುವ ಮಾತುಗಳನ್ನು ಇಲ್ಲಿ ಗಮನಿಸಬಹುದು. "ಆತ್ಮಕತೆ ಎಂದರೆ ಪೂರ್ತಿ ವಾಸ್ತವವಾಗಿ ನಡೆದುದರ ಕಥೆ ಎಂದು ಹೇಳಲಾಗದು"[೨] ಎಂದಿದ್ದಾರೆ.

"ಕಥೆಯಲ್ಲಿಯಂತೆ ಆತ್ಮಕಥೆಯಲ್ಲಿಯೂ ಕಲ್ಪನೆಗೆ ಇಲ್ಲವೇ, ಅಪ್ರತ್ಯಕ್ಷ ಅನುಭವಕ್ಕೆ ಅವಕಾಶವಿದೆ. ತನ್ನ ಬಾಲ್ಯದ ಬಗ್ಗೆ ಬರೆಯುವ ಎಪ್ಪತ್ತರ ಸಮೀಪದ ವಯಸ್ಸಿನ ನನ್ನಂತಹ ಬರಹಗಾರನಿಗೆ ಬಾಲ್ಯದ ಪ್ರತ್ಯಕ್ಷ ಅನುಭವಕ್ಕಿಂತ ಅಸ್ಪಷ್ಟ ಸ್ಮರಣೆಗಳ ಆಧಾರವೇ ಹೆಚ್ಚಾಗಿರಬಹುದಾಗಿದೆ. ಎರಡರಲ್ಲಿ ಸತ್ಯದ ಇಲ್ಲವೇ ಪ್ರತ್ಯಕ್ಷದ ಅಂಶವೂ ಸಾಕಷ್ಟಿದೆ ಎನ್ನಬಹುದಲ್ಲ"[೩] ಎಂದು ಶ್ರೀರಂಗರು ಆತ್ಮಕತೆಯ ಉದ್ದೇಶವನ್ನು ಹೇಳುವಾಗ ಈ ಮಾತನ್ನು ಹೇಳಿಕೊಂಡಿದ್ದಾರೆ.

"ಇನ್ನೊಬ್ಬರ ಬಗ್ಗೆ ಬರೆಯುವಾಗ ಪ್ರತಿಷ್ಠೆಯ ಬಗ್ಗೆ ಅಷ್ಟೊಂದು ಹೊಣೆಗಾರಿಕೆ ಎನಿಸದೆ ಕಟುಸತ್ಯವನ್ನು ಬರೆಯಬಲ್ಲವನು ತನ್ನ ಬಗ್ಗೆ ಬರೆಯುವಾಗ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವುದಕ್ಕೆ ಕೆಲವೊಮ್ಮೆ ಕಟುಸತ್ಯವನ್ನು ಬಚ್ಚಿಡಲೂ ಯತ್ನಿಸಬಹುದಲ್ಲ. ಆತ್ಮಕತೆಯನ್ನು ಬರೆಯುವಾಗ ಕಲ್ಪನಾಶಕ್ತಿಯನ್ನು ಪೂರ್ತಿಯಾಗಿ ಬದಿಗಿಟ್ಟದ್ದೇನೆ ಎಂದು ಹೇಳಲಾರೆ."[೪]

ಶ್ರೀರಂಗರ ಮಾತಿನ ಹಿನ್ನೆಲೆಯಲ್ಲಿ ನವೋದಯ ಸಂದರ್ಭದ ಆತ್ಮಕತೆಗಳಲ್ಲಿ ವಾಸ್ತವತೆಯನ್ನು ಮುಚ್ಚಿ ಬರೆಯುತ್ತಿದ್ದರೆಂಬ ಕಲ್ಪನೆಯನ್ನು ಇವರ ಮಾತಿನಿಂದ ನಾವು ತಿಳಿಯಬಹುದಾಗಿದೆ.

ಪ್ರಗತಿಶೀಲ ಕಾಲಘಟ್ಟದಲ್ಲಿ ಬಂದ ಆತ್ಮಕತೆಗಳು ತಮ್ಮ ಸ್ವರೂಪವನ್ನು ಅದೇ ರೀತಿಯಲ್ಲಿ ಉಳಿಸಿಕೊಂಡು ಬಂದವು. ಮತ್ತು ನವ್ಯ ಸಾಹಿತ್ಯ ಸಂದರ್ಭದಲ್ಲಿಯೂ ಸಹ ಈ ರೀತಿಯ ಆತ್ಮಕತೆಗಳು ಬಹಳ ಕಡಿಮೆ ಸಂಖ್ಯೆಯಲ್ಲಿ ಕಂಡುಬಂದಿವೆ. ಮತ್ತು ಆ ವೇಳೆಯಲ್ಲಿ ವ್ಯಕ್ತಿಗತ ನೆಲೆಯಲ್ಲಿ ಯೋಚಿಸುವಂತಹ ಕಾಲಘಟ್ಟವಾಗಿತ್ತು. ಅವುಗಳು ಸಮಾಜದ ಪ್ರಶ್ನೆಯ ಗೊಡವೆಗೆ ಹೋಗಲಿಲ್ಲ.

ಆದರೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅದರಲ್ಲೂ ದಲಿತ ಸಾಹಿತ್ಯ ಸಂದರ್ಭವಾದ ಎಂಭತ್ತರ ದಶಕದಲ್ಲಿ ಬಂದಂತಹ ಆತ್ಮಕತೆಗಳು ಬಹಳ ಮುಖ್ಯವಾದ ನೆಲೆಯನ್ನು ಗುರುತಿಸಿಕೊಂಡು ಬಂದವುಗಳಾಗಿವೆ. ದಲಿತ ಲೇಖಕರ ಆತ್ಮಕತೆಗಳಲ್ಲಿ ಜನಸಮುದಾಯದ ಪರಿಸರದ ಕತೆಯನ್ನು ತಮ್ಮಲ್ಲಿ ಸಮೀಕರಿಸಿಕೊಂಡು ಹೇಳಿರುವುದು ಗೋಚರಿಸುತ್ತದೆ.

ದಲಿತ ಆತ್ಮಕತೆಗಳಲ್ಲಿ ಪ್ರಥಮವಾಗಿ ಗೌರ್ನಮೆಂಟ್ ಬ್ರಾಹ್ಮಣ ಕೃತಿ ಬಂತು. ಅಲ್ಲಿ ವ್ಯಕ್ತವಾಗಿರುವ ಹಿಂಸೆ, ಬಡತನ, ಶೋಷಣೆಯು ಓದುಗರ ಮನವನ್ನು ಕೆರಳಿಸುತ್ತವೆ. ದಲಿತ ಆತ್ಮಕತೆಗಳು ಸಮಾಜಮುಖಿಯಾಗಿ ತನ್ನ ಜನಾಂಗದ ಬದುಕಿನ ಕಷ್ಟ ನೋವಿನ ಪ್ರತೀಕವಾಗಿ ರಚನೆಯಾಗಿವೆ.

ಕನ್ನಡ ಸಾಹಿತ್ಯದ ಇತರ ಕಾಲಘಟ್ಟಗಳಿಗೆ ಪ್ರತಿಯಾಗಿ ದಲಿತ ಆತ್ಮಕತೆಗಳು ಜನ್ಮ ತಾಳಿರುವುದು ಕಂಡುಬರುತ್ತದೆ. ತಾವು ಹೇಳುವಂತಹ ವಿಷಯಗಳಿಗೆ ಯಾವುದೇ ರೀತಿಯ ರೊಚ್ಚು ಆವೇಶದ ಮಾತುಗಳನ್ನಾಡದೆ ಸೌಮ್ಯವಾಗಿ, ಶಾಂತಿಯಿಂದ ತಮ್ಮ ಧೋರಣೆಯನ್ನು ವ್ಯಕ್ತಪಡಿಸಿರುವುದರಿಂದ ಇತರ ಆತ್ಮಕತೆಗಳಿಗೆ ಭಿನ್ನವಾದ ನೆಲೆಯಲ್ಲಿ ನಿಲ್ಲಲು ಕಾರಣವಾಗಿದೆ.

ದಲಿತ ಆತ್ಮಕತೆಗಳಿಗೆ ಮೂಲ ಮರಾಠಿ ದಲಿತ ಆತ್ಮಕತೆಗಳು ಆದರೆ ಕನ್ನಡ ದಲಿತ ಸಾಹಿತ್ಯ ಸಂದರ್ಭದಲ್ಲಿ "ಗೌರ್ನಮೆಂಟ್ ಬ್ರಾಹ್ಮಣ" ಮಾಲಗತ್ತಿ ಅವರ ಆತ್ಮಕತೆ ಮೊದಲನೆಯದಾಗಿದೆ. ಇದು ಅವರ ನಲವತ್ತನೆಯ ವಯಸ್ಸಿನಲ್ಲಿ ಬಂತು.

ದಲಿತ ಆತ್ಮಕತೆಗಳು ಅವರ ಬಾಲ್ಯ, ಯೌವನದ ನೆಲೆಯಲ್ಲಿ ಬಂದು ನಿಲ್ಲುವುದು ಇತರ ಆತ್ಮಕತೆಗಳಿಗೆ ಭಿನ್ನವಾಗಿವೆ.

ಇದೇ ವೇಳೆಯಲ್ಲಿ ಅಂದರೆ ಹಲವು ವರ್ಷಗಳ ನಂತರ ಸಿದ್ದಲಿಂಗಯ್ಯ ಅವರ "ಊರುಕೇರಿ" ಮತ್ತು ತುಂಬಾಡಿ ರಾಮಯ್ಯ ಅವರ "ಮಣೆಗಾರ" ಹಾಗೆಯೇ ಗೋವಿಂದ ರಾಜ್ ಅವರ "ಮನವಿಲ್ಲದವರ ಮಧ್ಯೆ" ಕೃತಿಗಳು ಪ್ರಕಟವಾದವು.

ಹಾಗೆಯೇ ನ.ಜಿ.ಕೃಷ್ಣಸ್ವಾಮಿ ಅವರ 'ಕತ್ತಲೆ ಬೆಳದಿಂಗಳು' ಮುನಿವೆಂಕಟಪ್ಪನವರ 'ಅಂತ್ಯಜನ ಅಂತರಂಗ ಆತ್ಮಕಥೆ ಕಂತುಗಳಾಗಿ ಪ್ರಕಟವಾಗುತ್ತಿತ್ತು. ಹಿರಿಯ ಲೇಖಕಿ ಬಿ.ಟಿ.ಲಲಿತಾ ನಾಯಕ್ ಕೂಡ ತಮ್ಮ ಆತ್ಮಕಥನವನ್ನು ಲಂಕೇಶ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ಈ ಆತ್ಮಕಥೆಗಳಿಂದ ಓದುಗರಿಗೆ ಒಂದು ಹೊಸ ಬಗೆಯ ರೋಮಾಂಚನವಾಗುತ್ತದೆ. ಏಕೆಂದರೆ ನಾವು ಹಿಂದೆ ನವೋದಯ, ನವ್ಯ, ಪ್ರಗತಿಶೀಲ ಕಾಲಘಟ್ಟಗಳ ಆತ್ಮಕಥೆಗಳನ್ನು ನೋಡುವ ಬಗೆಗೂ ದಲಿತ ಆತ್ಮಕಥೆಗಳನ್ನು ನೋಡುವ ಬಗೆಗೂ ಓದುಗ ವ್ಯತ್ಯಾಸವನ್ನು ಕಾಣುತ್ತಾನೆ. ಹೇಗೆಂದರೆ ಮೊದಲ ೭೦ರ ದಶಕದ ಆಚೆಗಿನ ಆತ್ಮಕಥೆಗಳನ್ನು ಲೇಖಕ ಸಂಪೂರ್ಣವಾಗಿ ತನ್ನ ಜೀವನದ ಸಂಗತಿಗಳನ್ನು ವಾಸ್ತವದ ಹಿನ್ನೆಲೆಯಲ್ಲಿ ಪ್ರತ್ಯಕ್ಷವಾಗಿ ಹೇಳಲಾಗದೆ ಅಲ್ಪ-ಸ್ವಲ್ಪ ಮುಚ್ಚು ಮರೆಯಿಂದ, ಕಲ್ಪನೆಗಳಿಂದ, ಉತ್ಪ್ರೇಕ್ಷೆಯ ಶೈಲಿಯೊಂದಿಗೆ ಹೇಳಿದ್ದರೆ, ದಲಿತ ಆತ್ಮಕಥೆಗಳು ಕೇವಲ ಒಬ್ಬ ವ್ಯಕ್ತಿಯ ಚರಿತ್ರೆಯಾಗದೆ, ಒಂದು ಜನಾಂಗ, ಅಲ್ಲಿ ವರ್ಗ ಸಮಾಜ ಅಸ್ತಿತ್ವದಲ್ಲಿದ್ದು ಸವರ್ಣೀಯರು ಕಪ್ಪು ಜನಾಂಗವನ್ನು ನಡೆಸಿಕೊಳ್ಳುತ್ತಿದ್ದಂತಹ ರೀತಿಯನ್ನು, ಒಬ್ಬ ದಲಿತ ಸಾಹಿತಿ ತನ್ನ ಆತ್ಮಕಥನದಲ್ಲಿ ನೇರವಾಗಿ ಬಿತ್ತರಿಸತೊಡಗುತ್ತಾನೆ. ಹೀಗಾಗಿ ಅದು ಒಬ್ಬ ವ್ಯಕ್ತಿಯ ಕಥನವಾಗಿರದೆ ಅದೊಂದು ಸಮುದಾಯದ ಚರಿತೆಯಾಗಿ, ಅಂದಿನ ಸಮಾಜದ ನೈಜ ಇತಿಹಾಸದ ಚಿತ್ರಣವನ್ನು ಓದುಗನ ಕಣ್ಣ ಮುಂದೆ ಚಿತ್ರಿಸುವ ಮತ್ತು ಸ್ವಾಭಿಮಾನ, ಅಭಿಮಾನವನ್ನು ಬದಿಗೆ ತಳ್ಳಿ ಮೇಲ್ ಜಾತಿಯವರು ನಡೆಸಿಕೊಂಡಂತೆ ನಡೆಯುವ, ಅವರು ಕಾಲಲ್ಲಿ ತೋರಿದ ಕೆಲಸವನ್ನು ತಲೆಯಲ್ಲಿ ಹೊತ್ತಿ ಮಾಡಿರುವ ಹಲವು ಬಾಲ್ಯದ ಚಿತ್ರಣಗಳು ದಲಿತ ಆತ್ಮಕಥೆಗಳಲ್ಲಿ ಅನಾವರಣಗೊಂಡಿದೆ. ಹಾಗಾಗಿ ಹಿಂದಿನ ಸಾಹಿತ್ಯ ಆತ್ಮಕಥೆಗಳು ವಿಭಿನ್ನವೂ ಮತ್ತು ಮುಂದಿನ ತಲೆಮಾರಿನ ದಲಿತ ಲೇಖಕರಿಗೆ ಪ್ರೇರಣ ಶಕ್ತಿಯೂ ಆಗಿ ನಿಲ್ಲುತ್ತದೆ.

ಈ ಆತ್ಮಕತೆಗಳು ನಿರೂಪಣೆಯ ಶೈಲಿ ಹಾಗೂ ಭಾಷೆಯ ಬಳಕೆಯಲ್ಲಿ ಪ್ರಾದೇಶಿಕತೆಯನ್ನು ಕಾಯ್ದುಕೊಂಡು ಬಂದಿವೆ. ಈ ದಲಿತ ಆತ್ಮಕತೆಗಳು ಆಯಾ ಲೇಖಕರ ಮಧ್ಯ ವಯಸ್ಸಿನಲ್ಲಿ ಬಂದವುಗಳಾಗಿವೆ.

ಈ ಮೇಲಿನ ಅಂಶಗಳಿಂದ ಹಿಂದಿನ ಆತ್ಮಕತೆಗಳಿಗಿಂತ ದಲಿತ ಆತ್ಮಕತೆಗಳು ಯಾವ ರೀತಿಯಲ್ಲಿ ಭಿನ್ನವೆಂದು ತಿಳಿಯಬಹುದಾಗಿದೆ. ಲೇಖಕನ ಮುಪ್ಪಿನ ಸಂದರ್ಭದಲ್ಲಿ ಬಂದಂತಹ ಆತ್ಮಕತೆಗಳಿಗೂ ಮತ್ತು ಮಧ್ಯ ವಯಸ್ಸಿನಲ್ಲಿ ಬಂದಂತಹ ಆತ್ಮಕತೆಗಳಿಗೂ ಅವುಗಳ ವ್ಯಾಪ್ತಿ,

ಸ್ವರೂಪ, ಹೇಳುವ ವಿಷಯಗಳ ಹಿನ್ನೆಲೆಯಲ್ಲಿ ದಲಿತ ಆತ್ಮಕತೆಗಳ ಸ್ಥಾನ ಉನ್ನತವಾದ ನೆಲೆಯಲ್ಲಿ ನಿಲ್ಲಬಹುದು ಎನಿಸುತ್ತದೆ.

ಅಡಿಟಿಪ್ಪಣಿ

೧) ಆತ್ಮಕತೆಗಳಲ್ಲಿ ಕರ್ನಾಟಕದ ಕತೆ : ಬಿ.ಎಂ.ಪುಟ್ಟಯ್ಯ – ಪುಟ ೫.

೨) ಅದೇ : ಪುಟ ೬

೩) ಅದೇ : ಪುಟ ೬

೪) ಅದೇ : ಪುಟ ೭

೭. ಎರಡು ದಲಿತ ಆತ್ಮಕತೆಗಳ ತೌಲನಿಕ ನೋಟ

"ಊರುಕೇರಿ" – ಒಂದು ವಿಶ್ಲೇಷಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮಾಗಡಿ ತಾಲ್ಲೂಕಿನ ಮಂಚನಬೆಲೆಯಲ್ಲಿ ೧೯೫೪ರಲ್ಲಿ ಹುಟ್ಟಿದ ಸಿದ್ಧಲಿಂಗಯ್ಯನವರು ದಲಿತ ಮತ್ತು ಬಂಡಾಯ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರು. ೧೯೭೫ರಲ್ಲಿ ಇವರ "ಹೊಲೆ ಮಾದಿಗರ ಹಾಡು" ಪ್ರಕಟಗೊಂಡಾಗ ಕನ್ನಡ ಕಾವ್ಯಲೋಕ ಹೊಸ ಆಯಾಮ ಮತ್ತು ಧ್ವನಿಯನ್ನು ಪಡೆಯಿತು. ಜಿಡ್ಡುಗಟ್ಟಿದ್ದ ಭಾವನೆಗಳ ಅಭಿವ್ಯಕ್ತಿ ಹೊಸ ರಕ್ತಪುಷ್ಟಿಯನ್ನು ಪಡೆಯಿತು. ಶತಮಾನಗಳಿಂದ ತುಳಿತಕ್ಕೆ ಒಳಗಾಗಿದ್ದ ವರ್ಗದ ವೇದನೆ ಸಂವೇದನೆಗಳು ವಿಶಿಷ್ಟ ರೀತಿಯಲ್ಲಿ ಅಭಿವ್ಯಕ್ತಿ ಪಡೆದು ಆ ವರ್ಗ ಅದುವರೆಗೆ ಅದುಮಿಟ್ಟಿದ್ದ ರೋಷ, ರೊಚ್ಚು ವಿಷಾದಗಳೆಲ್ಲಾ ಕಾವ್ಯದುದ್ದಕ್ಕೂ ಹರಿದವು.

ಇವರು ಕಾಲೇಜು ದಿನಗಳಲ್ಲಿ ಶ್ರೇಷ್ಠ ದರ್ಜೆಯ ಚರ್ಚಾಪಟುವಾಗಿದ್ದರು. ಹಾಸ್ಯ ಲೇಪಿತವಾದ ಆದರೆ ಚುರುಕು ಮುಟ್ಟಿಸುವ ಪರಿಣಾಮಕಾರಿಯಾದ ಭಾಷಣ ಕಲೆಯನ್ನು ಕರಗತವಾಗಿಸಿಕೊಂಡರು. ಸಂಶೋಧನಾ ಸಹಾಯಕರಾಗಿ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರ ಪ್ರವೇಶಿಸಿದ ಸಿದ್ಧಲಿಂಗಯ್ಯ ಅವರು ಇದೀಗ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿಯೂ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ಪ್ರಸ್ತುತ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸಿದ್ಧಲಿಂಗಯ್ಯ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿ ಮತ್ತು ಸತತವಾಗಿ ಎರಡು ಬಾರಿ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿ ದಲಿತರು, ಮಹಿಳೆಯರ ಸಮಸ್ಯೆಗಳು, ಕನ್ನಡದ ಸಮಸ್ಯೆ ಮತ್ತು ಕನ್ನಡಿಗರ ಬವಣೆಗಳನ್ನು ಅಧಿಕಾರಶಾಹಿಗಳಿಗೆ ತಮ್ಮ ಛಾಟಿ ಏಟಿನಂಥ ಮಾತುಗಳ ಮೂಲಕ ಮನವರಿಕೆ ಮಾಡಿಕೊಟ್ಟರು.

ಇವರ ಕೃತಿಗಳು "ಸಾವಿರಾರು ನದಿಗಳು" 'ಕಪ್ಪುಕಾಡಿನ ಹಾಡು' 'ಮೆರವಣಿಗೆ' (ಕವಿತಾ ಸಂಕಲನಗಳು) 'ಊರುಕೇರಿ' (ಆತ್ಮಕತೆ) 'ಪಂಚಮ', 'ನೆಲಸಮ', 'ಏಕಲವ್ಯ' (ನಾಟಕಗಳು) ವಿಮರ್ಶೆ, ಪ್ರಬಂಧ, ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ.

ಕನ್ನಡ ದಲಿತ ಸಾಹಿತ್ಯ ಸಂದರ್ಭದ ದೈತ್ಯ ಪ್ರತಿಭೆಯ ಒಂದು ಮುಖವಾಗಿ ಸಿದ್ಧಲಿಂಗಯ್ಯನವರು ಕಾಣಿಸಿಕೊಂಡಿದ್ದಾರೆ. ಅವರ 'ಊರು ಕೇರಿ' (ಆತ್ಮಕತೆಯನ್ನು) ನನ್ನ ಪ್ರಬಂಧದ ವ್ಯಾಪ್ತಿಯಲ್ಲಿ ವಿಶ್ಲೇಷಿಸಿದ್ದೇನೆ. -

“ನಾವು ಬದುಕುತ್ತಿರುವ ಯುಗದ ಬಹು ಮುಖ್ಯ ಧ್ಯಾನ ಬಡತನವನ್ನು ಕುರಿತದ್ದು ಅದಕ್ಕಾಗಿಯೇ ಇದು ಬಡತನದ ಯುಗ. ಬಡವರ ಯುಗ ಬಡವರ ಕ್ರಾಂತಿಕಾರ ಕತೆಯನ್ನು ಅನೇಕ ರಾಜಕೀಯ ಸಿದ್ಧಾಂತಗಳ ಮೂಲಕ ಈ ಯುಗ ಆರಾಧಿಸಿತು.”[೧]

ಇದಕ್ಕೆ “ಊರು ಕೇರಿ’ ಯಲ್ಲಿ ‘ಐನೋರ ಹೊಲದಲ್ಲಿ ಇಬ್ಬರು ಮನುಷ್ಯರ ಹೆಗಲ ಮೇಲೆ ನೊಗ ಹೂಡಿ ಇನ್ನಿಬ್ಬರು ಹೊಲ ಉಳುತ್ತಿದ್ದರು. ನೊಗ ಹೊತ್ತ ಆ ಇಬ್ಬರು ಮನುಷ್ಯರು ಎತ್ತುಗಳಂತೆ ಮುಂದೆ ಹೋಗುತ್ತಿದ್ದರು. ಇನ್ನೊಬ್ಬ ಹಿಂದಿನಿಂದ ಚಾಟಿಯ ತಿರುಗಿಸುತ್ತಾ ಉಳುಮೆ ಮಾಡುತ್ತಿದ್ದ.’[೨] ಇಲ್ಲಿ ಬಡತನದ ಜೀವನ ಅತಿರೇಕ ತಲುಪಿರುವುದು ಗೋಚರವಾಗುತ್ತದೆ. ಅಂದರೆ ಈ ಅನುಭವಗಳನ್ನು ಕಂಡ ಮನುಷ್ಯನ ಸ್ಥಿತಿಯನ್ನು ಗಮನಿಸಿದರೆ, ಈ ಯುಗದಲ್ಲಿ ಮಾನವ ಅನ್ನಕ್ಕಾಗಿ ಮಾತ್ರ ಜೀವಿಸಿದ್ದಾನೆ. ಬದುಕುವ ಮಾನವ ಇನ್ನೂ ಹುಟ್ಟಿಲ್ಲ ಎಂಬ ಮಾತು ಸ್ಪಷ್ಟವಾಗುತ್ತದೆ. ಅಂದಿನ ಸಾಮಾಜಿಕ ಸ್ಥಿತಿಯಲ್ಲಿ ದಲಿತರು ಒಂದು ದುಡಿಯುವ ವರ್ಗಕ್ಕೆ ಸೇರಿದ್ದರು. ಆದ್ದರಿಂದ ತಮ್ಮ ಬದುಕನ್ನು ಸಾಗಿಸಲು ಈ ರೀತಿಯ ಹಿಂಸೆಯ ನೋವನ್ನು ಅನುಭವಿಸಿ ಜೀವನ ಸಾಗಿಸುವ ಪರಿಸ್ಥಿತಿ ಇತ್ತು.

“ಒಡೆಯರ ಮನೆಗೆ ಹೋಗಿ ಅಪ್ಪ, ಅವ್ವ, ನಾನು ಅವರ ಬಾಗಿಲ ಮುಂದೆ ನಿಂತಾಗ ಅವರು ಮನೆಯಲ್ಲಿ ಉಳಿದಿದ್ದ ಚಿತ್ರಾನ್ನ, ಪೂರಿ, ಇತ್ಯಾದಿಗಳನ್ನು ಕೊಡುತ್ತಿದ್ದರು. ಈ ತಿಂಡಿಗಳನ್ನು ನಾನು ಎಂದು ತಿಂದಿರಲಿಲ್ಲ.”[೩]

ಅಂದಿನ ದಲಿತ ಸಮುದಾಯಕ್ಕೆ ಎಂಥ ಸ್ಥಿತಿಯಿತ್ತು ಎಂಬುದು ಇದರಿಂದ ಅರಿವಿಗೆ ಬರುತ್ತದೆ. ಹಸಿವು ಎಂಬುದು ಯಾವುದೇ ಜೀವಿಯನ್ನು ಬಿಟ್ಟಿದ್ದಲ್ಲ. ಮಾನವನೂ ಸಹ ಇದರೊಳಗೆ ಸೇರಿರುತ್ತಾನೆ. ಅದೇ ರೀತಿಯಲ್ಲಿ ದಲಿತ ಜನರು ಒಂದು ಹೊತ್ತಿನ ಊಟಕ್ಕೆ ಯಾವ ರೀತಿ ಪರಿತಪಿಸುತ್ತಿದ್ದರು ಎಂಬುದು ವೇದ್ಯವಾಗುತ್ತದೆ.

“ಸಾವಿನ ಭಯದಿಂದ ಬಡವರೂ ಹಬ್ಬ ಮಾಡಿದರು, ಶ್ರೀಮಂತರು ಅನ್ನ ಸಂತರ್ಪಣೆ ಮಾಡಿದರು. ಇದರ ಪ್ರಯೋಜನವನ್ನು ನಮ್ಮ ಕೇರಿಯ ಜನ ಚೆನ್ನಾಗಿಯೇ ಪಡೆದರು.”[೪]

ಇಲ್ಲಿ ಸೌಮ್ಯವಾಗಿ ಆ ಸಮಸ್ಯೆಯನ್ನು ಎತ್ತಿ ತೋರಿಸಲು ಈ ವಾಕ್ಯ ರೂಪಿತವಾಗಿರುವಂತೆ ಕಂಡುಬರುತ್ತದೆ. ಅಂದರೆ ಶ್ರೀಮಂತರು ತಮ್ಮಲ್ಲಿ ಇದ್ದೂ, ಅದನ್ನು ಬಡವರಿಗೆ ಕೊಡದೆ ತಾವೇ ಅನುಭವಿಸುತ್ತಿರುವ ವಾತಾವರಣದಿಂದ ಸಾವಿನ ಭಯ ಹುಟ್ಟಿ ನಾವೂ ಸಾಯುತ್ತೇವೆ ಎಂದು ಹೆದರಿ ತಮ್ಮ ದಾನ ಧರ್ಮಗಳಿಂದ ಉಳಿಯುತ್ತೇವೆ ಎಂಬ ನಂಬಿಕೆಯ ಮೇಲೆ ಅನ್ನ ಸಂತರ್ಪಣೆಯನ್ನು ಕೈಗೊಳ್ಳುತ್ತಾರೆ.

ದಲಿತರಿಗೆ ಅಂದು ಸಾವಿನ ಚಿಂತೆ ಇರಲಿಲ್ಲ. ತಮ್ಮ ಹಸಿವಿನ ಹಾಹಾಕಾರವನ್ನು ನೀಗಿಸಿಕೊಳ್ಳುವ ಉದ್ದೇಶವಿತ್ತೇ ಹೊರತು ಸಾವಿನ ಬಗ್ಗೆ ಚಿಂತೆ ಇರಲಿಲ್ಲ. ಸಾವು ಬಂದರೆ

ಬರಲಿ, ಅವರಿಗೆ ಅನ್ನ ಮುಖ್ಯವಾಗಿತ್ತು. ಈ ಹಸಿವಿನಲ್ಲಿ ಶ್ರೀಮಂತ ಬಡವ ಎಂಬ ತಾರತಮ್ಯವನ್ನು ನಾವು ಕಾಣಲು ಬರುವುದಿಲ್ಲ. ಇದು ಎಲ್ಲಾ ಜೀವಿಗಳಿಗೆ ಒಂದೇ ಎಂಬ ಪ್ರಕೃತಿಯ ಸೃಷ್ಟಿಯ ಮೂಲ ನೆಲೆಯಿಂದಲೇ ಬಂದಿರುವಂಥದ್ದು.

ಈ ಬಡತನ ಮತ್ತು ಹಸಿವುಗಳನ್ನು ತಮ್ಮ ಜೀವನದಲ್ಲಿ ಯಾವುದೇ ಎತ್ತರದ ದನಿಯಲ್ಲಿ ಪ್ರಕಟಿಸದೆ ಕೃತಿ ಇದನ್ನು ಗೆಲ್ಲುವ ಸಂದರ್ಭವೂ ಸಹ ಬರುತ್ತದೆ. ಆರ್ಥಿಕ ಸ್ಥಿತಿಯು ದಲಿತ ಸಮೂಹದ ಒಂದು ದೊಡ್ಡ ಸಮಸ್ಯೆಯಾಗಿ ಅಂದಿನ ಕಾಲದಿಂದಲೂ ಇಂದಿನ ಕಾಲದವರೆಗೂ ಕಂಡುಬರುವ ಒಂದು ಮುಖ್ಯ ಅಂಶವಾಗಿದೆ. ಇಲ್ಲಿ ಐನೋರ ಹೊಲಕ್ಕೆ ಹೋಗಿ ದುಡಿಯುವುದು ಮತ್ತು ತಮ್ಮ ಸಂಸಾರ ಸಾಗಿಸಲು ಶ್ರೀಮಂತರಿಂದ ಹಣ ಪಡೆದು ಜೀವನ ನಿರ್ವಹಿಸುವ ಪರಿಸ್ಥಿತಿ ಇತ್ತು.

“ಇದ್ದ ಚೂರು ಹೊಲದಲ್ಲಿ ಬೆಳೆದದ್ದು ತಂದೆಯ ಮೇಲಿದ್ದ ಸಾಲದ ಬಡ್ಡಿಗೆ ಸಾಕಾಗುತ್ತಿತ್ತು. ಕೂಲಿಯ ಹಣ ಕುಟುಂಬದ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಕೆಲವು ದಿನ ನನ್ನ ತಾಯಿ ಸಾವನದುರ್ಗಕ್ಕೆ ಕಾಡಿನಲ್ಲಿ ಸೌದೆ ತರಲು ಹೋಗುತ್ತಿದ್ದಳೂ. ಸಂತೆಯಲ್ಲಿ ಈ ಸೌದೆ ಹೊರೆಯನ್ನು ಮಾರುತ್ತಿದ್ದಳು; ತುಂಬಾ ಕಷ್ಟವಾಗಿತ್ತು. ಪಕ್ಕದ ಕಾಡಿಗೆ ಹೋಗಿ ಸೌದೆ ತಂದು ಮಾರುತ್ತಿದ್ದಳು.”[೫]

ದಲಿತರ ಪರಿಸ್ಥಿತಿ ಶೋಚನೀಯವಾಗಿತ್ತು. ಬಡತನದಿಂದ ಇದ್ದ ಕುಟುಂಬಗಳು ತಾವು ಹೋಗಿ ಶ್ರೀಮಂತರ ಮನೆಯಲ್ಲಿ ಜೀತಕ್ಕೆ ಇದ್ದು, ದುಡಿದರೂ ಅವರ ಶ್ರಮವೆಲ್ಲ ತಾವು ಪಡೆದ ಹಣಕ್ಕೆ ಬಡ್ಡಿಯಾಗಿ ತೆರುವ ಪ್ರಸಂಗ ಬರುತ್ತಿತ್ತು. ತಮ್ಮ ಜೀವಮಾನವೆಲ್ಲ ಶ್ರೀಮಂತರ ಮನೆಯಲ್ಲಿ ದುಡಿದು ಸಾಲ ತೀರಿಸಬೇಕಾಗದಂತಹ ಪರಿಸ್ಥಿತಿ ಅಂದಿನ ದಲಿತ ಜನಾಂಗಕ್ಕೆ ಇದ್ದ ಸ್ಥಿತಿಯನ್ನು ಅನಾವರಣ ಮಾಡುತ್ತದೆ.

“ಕೈಗಾರಿಕಾ ಕ್ರಾಂತಿ ಹಲವಾರು ಪರಿಣಾಮಗಳನ್ನು ಪಡೆಯಿತು. ದುಡಿಮೆಯೊಂದಿಗೆ ಜನರಿಗಿದ್ದ ಕರುಳು ಬಳ್ಳಿಯ ಸಂಬಂಧವನ್ನೇ ಅದು ಕತ್ತರಿಸಿ ಹಾಕಿತು. ಬಂಡವಾಳಶಾಹಿ ಉತ್ಪಾದನಾ ವಿಧಾನವು ಬಂಡವಾಳಕ್ಕೆ ಬಂಡವಾಳಗಾರನನ್ನು, ಶ್ರಮಕ್ಕೆ ಶ್ರಮಿಕನನ್ನು ಏಕ ವ್ಯಕ್ತಿಯಂತೆ ನಿರ್ಮಿಸಿತು. ಈ ವಾತಾವರಣದಲ್ಲೇ ವೈಯಕ್ತಿಕತೆ ಸೃಷ್ಟಿಯಾಯಿತು.”[೬]

ಈ ರೀತಿಯ ಬೆಳವಣಿಗೆಯಿಂದ ಶೋಷಿತ ಸಮುದಾಯ ಸಮಾಜದಿಂದ ದೂರ ಇರಲು ಪ್ರತ್ಯೇಕತೆಯನ್ನು ತಳೆಯುವಂತಾಯಿತು. ಬಂಡವಾಳಶಾಹಿಯ ಉತ್ಪಾದನಾ ವ್ಯವಸ್ಥೆ ಇನ್ನೂ ಬದಲಾಗದೆ ಇರುವುದು ಒಂದು ಮುಖ್ಯ ಕಾರಣ ಆಗಿದೆ. ಅದಕ್ಕೆ ನಮ್ಮ ದೇಶದಲ್ಲಿ ಬಡತನದಲ್ಲಿರುವ ಜನತೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸಾಧ್ಯವಾಗದೇ ಇರುವುದು ಕಂಡುಬರುತ್ತದೆ.

ತನ್ನ ಬಾಲ್ಯದಲ್ಲಿ ಅನುಭವಿಸಿದ ಬಡತನ ಮತ್ತು ಹಸಿವಿನ ತೃಷೆಯನ್ನು, ಹಾಗೆಯೇ ಆರ್ಥಿಕ ದುಸ್ಥಿತಿಯನ್ನು ಸಿದ್ಧಲಿಂಗಯ್ಯನವರು ಆತ್ಮಕತೆಯಲ್ಲಿ ಹೇಳುವ ರೀತಿಯು ಒಂದು ರೀತಿಯ ವ್ಯಂಗ್ಯದಿಂದ ಗೇಲಿ ಮಾಡಿ ನೋಡುವ ಗುಣವನ್ನು ಮೀರಿ ಹೇಳಲು ಕವಿಗಳು ಪ್ರಯತ್ನಿಸಿರುವುದು ಗೋಚರಿಸುತ್ತದೆ. ಅಂದಿನ ಅನುಭವಗಳನ್ನು ಇಂದಿನ ಸಾಮಾಜಿಕ ಸ್ಥಿತಿಯನ್ನು ಈಗ ಗಮನಿಸಿದರೆ ಹೃದಯದಲ್ಲಿ ತಲ್ಲಣಗಳು ಕುದ್ದು ಇಳಿಯುತ್ತವೆ. ಕವಿಗಳು ತಮಗಾದ ಅವಮಾನಗಳನ್ನು ಹೇಳುವ ಸಂದರ್ಭದಲ್ಲಿ ಹೇಳುವುದನ್ನು ತಮ್ಮ ವೇದನೆಯನ್ನು ಸಂವೇದನೆಗೊಳಿಸುವಲ್ಲಿ ಸಫಲರಾಗಿದ್ದಾರೆ. ತಮ್ಮ ಬದುಕಿನಲ್ಲಿ ಹಸಿವು, ನೋವು, ಅವಮಾನಗಳನ್ನು ಯಾವುದೆ ಅಬ್ಬರದಲ್ಲಿ, ವಿಷಾದದಲ್ಲಿ ಹೇಳದೇ ಅದನ್ನು ತಮ್ಮ ಬದುಕಿನಲ್ಲಿ ಹೇಗೆ ದಾಟಿ ಮುಂದೆ ಬರಬಹುದೆಂದು ಹೇಳುತ್ತಲೇ ನಮಗೆ ಮಾರ್ಗದರ್ಶಿಯಾಗಿ ಕಾಣಿಸಿಕೊಳ್ಳುತ್ತಾರೆ.

ದಲಿತ ಜನಾಂಗದಲ್ಲಿ ಅಥವಾ ಸಮುದಾಯದಲ್ಲಿ ನಂಬಿಕೆ ಎಂಬುದು ಆಳವಾಗಿ ಬೇರೂರಿತ್ತು. ಅಂಥ ಪ್ರಸಂಗಗಳಲ್ಲಿ ಮುಖ್ಯವಾಗಿ ತಮ್ಮ ಮನೆಯ ದೇವರೆಂದು, ಮಂಟೇಸ್ವಾಮಿ, ಮಲೆ ಮಹದೇಶ್ವರ ಇವುಗಳ ಬಗ್ಗೆ ಅಪಾರ ನಂಬಿಕೆಯನ್ನು ಇಟ್ಟುಕೊಂಡು ಆರಾಧಿಸುತ್ತಾರೆ. ಇಂದಿಗೂ ಕೆಲವು ದಲಿತ ಜನಾಂಗ ನಾವು ಮಂಟೇಸ್ವಾಮಿ ಕುಲ ಎಂದು ಹೇಳುತ್ತಾರೆ. ಮೇಗಳ ಹಟ್ಟಿಯಲ್ಲಿ ಇನ್ನೊಂದು ದೇವತೆ ಮೈತುಂಬಿ ಬರುತ್ತಿತ್ತು. ಹಾಗೆಯೇ ಒಬ್ಬಳು ಅಜ್ಜಿಗೆ ಮಾರಮ್ಮ ಮೈ ದುಂಬಿ ಬರುತ್ತಾಳೆ. ಅಂದಿನ ದಲಿತರ ದಾರುಣ ಬದುಕಿನ ಬೇರೆ ಬೇರೆ ಮಗ್ಗಲುಗಳನ್ನು ಈ ಮೂಲಕ ನಾವು ಅರಿಯಬಹುದಾಗಿದೆ.

ದಲಿತ ಆತ್ಮಕತೆಗಳಲ್ಲಿ ನಂಬಿಕೆ ಬಗ್ಗೆ ಹೇಳುವುದು, ನೀವು ದೇವರನ್ನು ನಂಬಿ ಎಂದಲ್ಲ. ಅಂದಿನ ದಲಿತತ ಸಮೂಹ ಯಾವ ರೀತಿ ಈ ಮೂಢ ನಂಬಿಕೆಗೆ ಒಳಗಾಗಿತ್ತು ಎಂಬುದನ್ನು ಇಂದಿನ ದಲಿತ ಸಮೂಹಕ್ಕೆ ತಿಳಿಸಲು ತಮ್ಮ ಆತ್ಮಕತೆಯಲ್ಲಿ ಹೇಳಿಕೊಳ್ಳುವುದು ವಿಶಿಷ್ಟತೆ ಎನಿಸುತ್ತದೆ. ಇಂತಹ ಹಲವು ಹತ್ತು ಬಾಲ್ಯದ ನೆನಪುಗಳನ್ನು ಸಿದ್ಧಲಿಂಗಯ್ಯನವರೂ ಒಳಗೊಂಡಂತೆ ಎಲ್ಲಾ ಆತ್ಮಕಥನಕಾರರೂ ಬಗೆಬಗೆಯಾಗಿ ಬರೆದಿದ್ದಾರೆ.

ಸಿದ್ಧಲಿಂಗಯ್ಯನವರು ಪ್ರಬುದ್ಧಾವಸ್ಥೆಗೆ ಬಂದ ನಂತರ ಮೂಢನಂಬಿಕೆಗಳು ಸುಳ್ಳು ಎಂದು ತೋರಿಸಲು ಮುಂದಾದರು. ಒಬ್ಬ ಪ್ರಜಾರಪ್ಪನಿಗೆ ದೇವರು ಬರುತ್ತದೆಂಬ ನಂಬಿಕೆಯಿಂದ ಆತ ದಿನ ಒಂದು ಕುರಿಯನ್ನು ಕತ್ತರಿಸಿ ತಿನ್ನುತ್ತಿರುತ್ತಾನೆ. ಇದನ್ನು ಸುಳ್ಳು ಎಂದು ಖಾತರಿ ಮಾಡಲು ಪ್ರಜಾರಪ್ಪನ ಕುರಿಯನ್ನು ತಂದು ಕೊಡುತ್ತಾರೆ. ಅಂದು ಅವನು ಸ್ವೀಕರಿಸುವುದಿಲ್ಲ. ಈ ಪ್ರಸಂಗ ನಗೆತರುವಂತಿದ್ದರೂ ದಲಿತ ಸಮೂಹವನ್ನು ಮೋಸ ಮಾಡುವ ರೀತಿಯನ್ನು ಹೇಳುತ್ತದೆ. ಆದರೆ ಮನುಷ್ಯರ ಮೈಯ ಮೇಲೆ ದೇವರು ಬರುತ್ತದೆ ಎಂಬ ನಂಬಿಕೆಯನ್ನು ಸುಳ್ಳು ಎಂದು ಈ ಸಂದರ್ಭದಲ್ಲಿ ತೋರಿಸಿಕೊಡಲಾಗಿದೆ. ಹಾಗೆಯೇ ಹಳ್ಳಿ

ಪಟ್ಟಣಗಳ ಮೂಲೆ ಮೂಲೆಯಲ್ಲಿ ಒಂದೊಂದು ಗುಡಿ ಗೋಪುರಗಳನ್ನು ಕಟ್ಟಿಸಿಕೊಂಡಿರುವುದು ಇಂದಿನ ಪರಿಸ್ಥಿತಿಯಲ್ಲಿಯೂ ನಾವು ಕಾಣಬಹುದಾಗಿದೆ.

ಆರ್ಯ ಮೂಲದಿಂದ ಆರಂಭಗೊಂಡ ಈ ಅಸ್ಪೃಶ್ಯತೆ ಎಂಬ ಪಿಡುಗು ಇಪ್ಪತ್ತೊಂದನೆಯ ಶತಮಾನವಾದ ಇಂದಿನವರೆಗೂ ಕೂಡ ಬಹಳ ವ್ಯವಸ್ಥಿತವಾಗಿ ಮುಂದುವರೆದುಕೊಂಡು ಬಂದಿದೆ. ಸಮಾಜದಲ್ಲಿ ಮೇಲುಸ್ತರದ ವ್ಯಕ್ತಿಗಳು ಕೆಳಸ್ತರದ ವ್ಯಕ್ತಿಗಳನ್ನು ಹೀನಾಯವಾಗಿ ಕಾಣುವ, ಪಶುಗಳಂತೆ ನಡೆಸಿಕೊಳ್ಳುವ ಪರಿಸ್ಥಿತಿ ಇಂದಿಗೂ ಕೂಡ ನಮ್ಮ ಅನೇಕ ಭಾಗಗಳಲ್ಲಿ ಗಟ್ಟಿಯಾಗಿ ಬೇರೂರಿದೆ.

''ಊರುಕೇರಿ'' ಆತ್ಮಕತೆಯಲ್ಲಿ ಅಸ್ಪೃಶ್ಯತೆಯ ಪರಮಾವಧಿ ಗೋಚರಿಸುತ್ತದೆ. ''ನಮ್ಮ ಕೇರಿಯ ಜನಕ್ಕೆ ಕುಡಿಯಲು ನೀರು ಸಿಕ್ಕರೆ ಅದೇ ದೊಡ್ಡ ಸಂಗತಿ, ತೋಟದ ಪಕ್ಕದ ಬಾವಿಯಲ್ಲಿ ನೀರು ತರುತ್ತಿದ್ದರು. ದಲಿತರನ್ನು ಬಿಟ್ಟರೆ ಉಳಿದವರು ಅಲ್ಲಿಂದ ನೀರು ತರುವುದನ್ನು ನಾನು ನೋಡಿಲ್ಲ.''[೬]

ಉನ್ನತ ವರ್ಗದ ಜನರು ದಲಿತರು ಮುಟ್ಟುವ ಯಾವುದೇ ವಸ್ತುವನ್ನು ಅಪವಿತ್ರವೆಂದು ತಿಳಿದುಕೊಂಡಿದ್ದರು. ಆದರೆ ಇಂದೂ ಆ ಪರಿಸ್ಥಿತಿಯೂ ಸ್ವಲ್ಪ ಸುಧಾರಿಸುವಂತೆ ಕಾಣಿಸುತ್ತದೆ. ಅಂದಿನ ರೀತಿಯ ಅಸ್ಪೃಶ್ಯತೆಯ ನೋವನ್ನು ಇಂದಿನ ದಲಿತ ಜನಾಂಗ ಅನುಭವಿಸದಿರುವುದು ಗೋಚರಿಸುತ್ತದೆ.

ಸಿದ್ಧಲಿಂಗಯ್ಯನವರು ತಮ್ಮ ಬಾಲ್ಯದಲ್ಲಿ ನಡೆದ ಘಟನೆಯೊಂದನ್ನು ದಾಖಲಿಸುತ್ತಾರೆ; ''ಒಂದು ದಿನ ನಾನು ಬೀದಿಯಲ್ಲಿ ಜೋರಾಗಿ ಓಡುತ್ತಿದ್ದೆ, ಎದರಿಗೆ ಬರುತ್ತಿದ್ದವರ ಬಟ್ಟೆಗೆ ನನ್ನ ಕೈ ಸೋಂಕಿತು. ಆ ವ್ಯಕ್ತಿ ಕೋಪಗೊಂಡು ನಿಂತುಬಿಟ್ಟ. ನಾನು ಗಾಬರಿಯಿಂದ ನಿಂತುಬಿಟ್ಟೆ. ನಮ್ಮ ಅಜ್ಜಿಯವರಿಂದ ಕ್ಷಮೆ ಕೇಳಿದ ಮೇಲೆ ಆತ ಹೊರಟು ಹೋದ.''[೮]

ದಲಿತರು ಮುಟ್ಟುವುದು ಅಶುದ್ಧ ಎಂದು ತಿಳಿದ ಜನರು ತಾವು ಮೇಲು ಕುಲದವರು, ಕೀಳು ಕುಲದ ಜನರ ಸೋಂಕು ತಗಲಿದರೆ ತಮ್ಮ ಪವಿತ್ರತೆ ಹೋಗುತ್ತದೆಂದು ನಂಬಿದರು. ಆ ಪರಿಸ್ಥಿತಿ ಇಂದು ಸ್ವಲ್ಪ ಸುಧಾರಿಸಿದಂತೆ ಕಾಣುತ್ತದೆ. ಆದರೆ ಇಂದಿನ ಕಾಲಮಾನಕ್ಕೆ ಹೋಲಿಸಿದರೆ ಹೋಟೆಲ್, ಅಂಗಡಿ, ಬಸ್ಸು ಮುಂತಾದ ಕಡೆಯಲ್ಲಿ ಇಂಥ ಮಡಿವಂತಿಕೆಯನ್ನು ನಾವು ಹೆಚ್ಚಾಗಿ ಕಾಣುವುದಿಲ್ಲ.

ಮಾನವ ಹುಟ್ಟುತ್ತಾ ಯಾವುದೇ ಜಾತಿಗೆ ಸೇರಿದವನಲ್ಲ. ಆದರೆ ಮನುಷ್ಯನು ನಾಗರೀಕನಾಗಿ ಬೆಳೆದಂತೆ ಜಾತಿ, ವರ್ಗಗಳನ್ನು ಸೃಷ್ಟಿಸಿಕೊಂಡ. ಇವುಗಳು ಕಾಲದಿಂದ ಕಾಲಕ್ಕೆ ಗಟ್ಟಿಯಾಗುತ್ತಾ ಈ ವ್ಯವಸ್ಥೆಯಲ್ಲಿ ಭದ್ರವಾಗಿ ನೆಲೆಯೂರಿದವು. ''ಊರುಕೇರಿ'' ಆತ್ಮಕತೆಯಲ್ಲಿ ವ್ಯಕ್ತವಾಗಿರುವ ಜಾತೀಯತೆ ಭಿನ್ನವಾದ ನೆಲೆಯಲ್ಲಿ ಕಾಣುತ್ತದೆ. ''ನಮ್ಮ ದೇವರು

ಹೊಲೆಯರೆಂದು ಹೇಳುತ್ತಾರೆ. ಆದರೆ, ಈ ಗುರುಗಳು ಸವರ್ಣೀಯರು ಆದ್ದರಿಂದಲೋ ಏನೋ ಹೊಲೆಯರ ಕೇರಿಗೆ ಹೆಜ್ಜೆ ಇಡಲಿಲ್ಲ.''[೯]

ದಲಿತರು ದೇವರ ಪರಂಪರೆಯನ್ನು ಸೃಷ್ಟಿಸಿಕೊಂಡಿದ್ದರು. ಅವರ ಮನೆತನದ ದೇವರಾದ ಮಂಟೇಸ್ವಾಮಿ, ಅದನ್ನು ಬಹಳವಾಗಿ ದಲಿತ ಜನಾಂಗ ನಂಬಿದ್ದಾರೆ. ಆದರೆ ಈ ದೇವರ ಸ್ವಾಮಿಗಳು ಸವರ್ಣೀಯ ಕುಲದವರು ಆಗಿರುವುದರಿಂದ ಆತ ದಲಿತಕೇರಿಗೆ ಹೋಗಲಿಲ್ಲ. ಹಾಗೆಯೇ ತನ್ನ ಕುಲದ ಘನತೆಗೋಸ್ಕರ ಆತ ಅಲ್ಲಿಗೆ ತೆರಳದೆ ನಿಂತಿದ್ದಾನೆಂದು ಹೇಳುತ್ತಾರೆ. ಅಂದರೆ ದಲಿತ ಸಮುದಾಯಕ್ಕೆ ಅಂಥ ಅರಿವು ಇರಲಿಲ್ಲ. ಯಾವುದೇ ಆಗಲಿ ನಮ್ಮ ಹಳ್ಳಿಯ ತನಕ ಬಂದನೆಂದು ತಿಳಿದು ಆರಾಧಿಸಿದರು. ಆತ್ಮಕತೆಗಳು ದಲಿತ ಲೇಖಕನ ಕಥೆಯಾಗಿರದೆ ಇಡೀ ಸಮುದಾಯದ, ದಲಿತ ಜನಾಂಗದ, ಜೀವನವನ್ನು ಸುತ್ತಲಿನ ಪ್ರಾದೇಶಿಕತೆಯ ನೆಲೆಯನ್ನು ಸ್ಪರ್ಶಿಸುವ ಗುಣವನ್ನು ಹೊಂದಿದ್ದರೆ ಮಾತ್ರ ದಲಿತ ಆತ್ಮಕತೆ ಎಂದು ಕರೆಯಬಹುದು ಎಂಬ ನಂಬಿಕೆ ಈ ಕಾಲಕ್ಕೆ ಹೊಂದಿಕೊಂಡಿದೆ ಎಂದು ಹಲವಾರು ವಿದ್ವಾಂಸರುಗಳು ಹೇಳಿರುವುದು ಕಂಡುಬರುತ್ತದೆ.

''ನಮ್ಮ ಕೇರಿಯನ್ನು ದಾಟುತ್ತಿದ್ದಂತೆ ಸರ್ಕಾರದ ಟಾರು ರಸ್ತೆ, ಈ ರಸ್ತೆ ಊರು ಮತ್ತು ಹೊಲಗೇರಿಯನ್ನು ವಿಭಾಗಿಸುವ ಗೆರೆ. ಆ ಕಡೆ ಸವರ್ಣೀಯರ ಮನೆಗಳು.''[೧೦]

''ಊರು ಇದ್ದತ್ತವು ಹೊಲಗೇರಿ ಇದ್ದೇ ಇರುತ್ತದೆ'' ಎಂಬ ವಾಣಿ ಸವರ್ಣೀಯರ ಬಾಯಲ್ಲಿ ಇಂದೂ ಚಾಲ್ತಿಯಲ್ಲಿರುವುದನ್ನು ಗುರುತಿಸಬಹುದು. ಯಾವುದೇ ಹಳ್ಳಿಯಲ್ಲಿ ನೋಡಿದರೂ ದಲಿತರ ಕೇರಿಗಳು ಪ್ರತ್ಯೇಕವಾಗಿ ಇರುವುದು ಗೋಚರಿಸುತ್ತವೆ. ಇಂದು ಜಾತೀಯತೆ ಎಂಬುದು ಸ್ವಲ್ಪ ಕಡಿಮೆಯಾಗಿದೆ. ಆದರೆ ಹಲವು ಹಳ್ಳಿಗಳಲ್ಲಿ ಇನ್ನೂ ಇರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಕೆಲವು ಹಳ್ಳಿಯಲ್ಲಿ ತಮ್ಮ ದಿನನಿತ್ಯಕ್ಕೆ ಬೇಕಾದ ಸೌಕರ್ಯದ ವಸ್ತು, ಪದಾರ್ಥಗಳನ್ನು ಕೊಂಡುಕೊಳ್ಳುವ ಸಂದರ್ಭ ಇಂದೂ ಸಹ ಹಳ್ಳಿಯ ಪರಿಸರದಲ್ಲಿ ಜಾತೀಯತೆಯನ್ನು ಕಾಣಬಹುದು. ಆದರೆ ಪಟ್ಟಣ ಪ್ರದೇಶದಲ್ಲಿ ಸುಧಾರಿಸಿದೆ, ಜಾತೀಯತೆ ಎಂಬ ಹೆಮ್ಮಾರಿಯಂತಹ ಪಿಡುಗು ಆ ಸಂದರ್ಭದಲ್ಲಿ ಹೋಟೆಲ್‌ನಲ್ಲಿ ನೀರು ಕುಡಿಯುವುದೂ ಸಹ ತಪ್ಪು ಎಂದು ಹೇಳುವ ಸ್ಥಿತಿ ಇತ್ತು. ''ಮೇಗಳ ಹಟ್ಟಿಯಲ್ಲಿ ಒಂದು ಹೋಟೆಲ್ ಇಟ್ಟಿದ್ದರು, ದಲಿತರು ಮಾತ್ರ ಆ ಹೋಟೆಲ್‌ಗೆ ಬರುತ್ತಿದ್ದರು.''[೧೧] ಅಂದಿನ ಸಮಾಜದಲ್ಲಿ ಇದು ಅನಿವಾರ್ಯವಾದುದೆಂದು ಬೆಳೆದು ಬಂದಿತ್ತು. ಪರಂಪರೆಯನ್ನು ವ್ಯಕ್ತಿ ರೂಪಿಸಿಕೊಳ್ಳುತ್ತಾನೆ. ವ್ಯಕ್ತಿಯನ್ನು ಪರಂಪರೆ ಪೋಷಿಸುತ್ತದೆ. ಆದರೆ ದಲಿತರು ಅಂದು ತಿಳಿದಿರುವುದು ತಪ್ಪು: ಹೇಗೆಂದರೆ ತಾನೇ ಹೋಟೆಲ್‌ಗೆ ಹೋದರೆ ಏನು ತಿಳಿಯುತ್ತಾರೆಂಬ ಭಾವನೆ ಅವನಲ್ಲಿ ಮೂಡಿದ್ದರಿಂದಲೇ ಈ ರೀತಿಯ ಸಮಾಜ ಸೃಷ್ಟಿಯಾಯಿತು. ಇಲ್ಲಿ ಬದುಕುವ ರೀತಿಯನ್ನು ಆ ಮೂಲಾಗ್ರವಾಗಿ ಬದಲಾಗಬೇಕಾದ ಸಂದರ್ಭದಲ್ಲಿ ಈ ಸೃಷ್ಟಿಯ

ಆಶಯಗಳು ಮಾನವೀಯವಾಗಿರಬೇಕು ಎಂಬುದೇ ಮುಖ್ಯವಾಗುತ್ತದೆ. ಇಲ್ಲಿ ಸಮಾಜದಿಂದ ವ್ಯಕ್ತಿ ತನ್ನ ಆಂತರಿಕ ತುಡಿತಕ್ಕೆ ಪೋಷಕ ಸಾಮಗ್ರಿಯನ್ನು ಸಮಾಜವು ವ್ಯಕ್ತಿಯಿಂದ ತನ್ನ ಚಲನಶೀಲತೆಯನ್ನು ನಿರೀಕ್ಷಿಸುವುದು ಆಯಾ ಸ್ಥಿತಿಗಳ ನಡುವೆ ಇರುವ ಸಂಬಂಧವನ್ನು ಸೂಕ್ಷ್ಮವಾಗಿ ತಿಳಿಸುತ್ತದೆ. ವ್ಯವಸ್ಥೆಯು ಸ್ಥಿತ್ಯಂತರದ ನಡುವೆ ತೂಗುಯ್ಯಾಲೆಯಾಡುತ್ತಿರುವಾಗ ಯಾವುದನ್ನೂ ಸರಳೀಕರಿಸಿಕೊಳ್ಳುವುದಿಲ್ಲ. ಈ ಜಾತಿಯ ಪರಿಕಲ್ಪನೆ ಎನ್ನುವುದು ಸಿದ್ಧಲಿಂಗಯ್ಯನವರ ಬದುಕಿನ ಮೇಲೆ ಅಗಾಧವಾದ ಪರಿಣಾಮ ಬೀರಿದೆ.

“ಊರುಕೇರಿ” ಕೃತಿಯು ದಲಿತ ಸಾಂಸ್ಕೃತಿಕ ರಾಜಕಾರಣ ಪ್ರಜ್ಞಾಪೂರ್ವಕವಾಗಿ ನಂಬಿಕೊಂಡಿರುವ ಅನೇಕ ಕೀಳರಿಮೆಯನ್ನು ಕಾಲೆಳೆದು ಬೀಳಿಸುತ್ತದೆ. ದಲಿತರಿಗೆ ಗತಕಾಲದ ಸಂಸ್ಕೃತಿಯಲ್ಲಿ ಹಿರಿಮೆಯ ಪಾಲುದಾರಿಕೆ ಇಲ್ಲ ಎಂಬ ನಂಬಿಕೆಯನ್ನು ಸಿದ್ಧಲಿಂಗಯ್ಯ ತನ್ನ ದೊಡ್ಡಪ್ಪನ ಬಗ್ಗೆ ಬರೆಯುತ್ತಾ ಹಂಗಿಸುತ್ತಾರೆ. ಆದರೆ ನೇರವಾಗಿ ಅಲ್ಲ, ಆ ದೊಡ್ಡಪ್ಪ ಕೇರಿಯ ನಾಯಕನಾಗಿ ಇಡೀ ಊರೆಲ್ಲ ಗಣ್ಯನಾದಂತಹ ಜೈಮಿನಿ ಭಾರತ ಓದುತ್ತಿದ್ದ ವ್ಯಕ್ತಿ ಆದರೆ ಸಾಲಗಾರನಿಗೆ ಅವಮಾನ ತಾಳಲಾರದೇ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.”[೧೨] ಇಲ್ಲಿ ಸತ್ತಂತಹ ವ್ಯಕ್ತಿಯು ಕುಲದ ಆತ್ಮಗೌರವಕ್ಕೆ ಕುಂದು ಬಾರದ ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆ ಕಾಲದಿಂದಲೂ ಈ ರಾಜಕಾರಣ ವ್ಯಕ್ತಿಯ ನೆಲೆಯಲ್ಲಿ ಕೇಂದ್ರೀಕೃತವಾಗಿಲ್ಲ. ಅದು ಸಮಷ್ಟಿಯ ಧೋರಣೆಯನ್ನು ಸೃಷ್ಟಿಸಲು ಈ ಪ್ರಸಂಗ ಮುಖ್ಯವಾಗಿ ನಿಲ್ಲುತ್ತದೆ.

ಅಂದಿನ ಸಮಾಜ ಸವರ್ಣೀಯರು, ಶ್ರೀಮಂತರು, ಬಂಡವಾಳಶಾಹಿಗಳ ಹಿಡಿತದಲ್ಲಿದ್ದಂತಹ ರಾಜಕಾರಣಕ್ಕೆ ದಲಿತನೊಬ್ಬನ ಹಸ್ತಕ್ಷೇಪ ಒಂದು ಹಳ್ಳಿಯಲ್ಲಿ ನಡೆದಿದೆ ಎಂದರೆ ಸೋಜಿಗವೆನಿಸುತ್ತದೆ. ದಲಿತರಿಗೂ ರಾಜಕಾರಣದಲ್ಲಿ ಆಸಕ್ತಿ ಹೆಚ್ಚಾಗಿ ಶ್ರೀಮಂತರ ವಿರುದ್ಧ ನಾವು ಜಯಶೀಲರಾಗಿರುತ್ತೇವೆಂಬ ಹೆಗ್ಗಳಿಕೆಗೆ ಪಾತ್ರವಾಗಿ ಇದು ಕಂಡುಬಂದಿದೆ. ಆದರೆ ಶ್ರೀಮಂತರ, ಪಟೇಲರ ವಿರುದ್ಧ ಪೈಪೋಟಿ ನಡೆಸಿ ಗೆಲ್ಲುತ್ತೇವೆ ಎಂಬ ನಂಬಿಕೆಯನ್ನು ಇಂದಿನ ರಾಜಕಾರಣಕ್ಕೆ ಕನ್ನಡಿ ಹಿಡಿದಂತಾಗಿದೆ. ಈ ಒಂದು ರಾಜಕೀಯದ ಬೆಳವಣಿಗೆಗೆ ಅಂದಿನ ಕಾಲದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮೇಲೆ ಪ್ರಭಾವ ಬೀರಿದರೆಂದು ಕಾಣುತ್ತದೆ. ಇಂಥ ಘಟನೆಗಳನ್ನು ಸಿದ್ಧಲಿಂಗಯ್ಯನವರು ಸ್ವತಃ ತನ್ನ ದೊಡ್ಡಪ್ಪನ ಸಂಗತಿಯನ್ನು ಇಂದಿನ ರಾಜಕೀಯಕ್ಕೆ ತಳುಕು ಹಾಕಿ ನೋಡುವ ಸಂದರ್ಭ ಬರುವುದಿಲ್ಲ. ಆದರೆ ದಲಿತರಲ್ಲಿಯೂ ತನ್ನ ಸಮುದಾಯ, ಜನಾಂಗದ ಬಗ್ಗೆ ನಂಬಿಕೆಯುಳ್ಳ ಜನತೆಯನ್ನು ಇಂದು ಕಾಣುವುದು ಅಪರೂಪ. ದಲಿತರಲ್ಲಿ ಸ್ವಲ್ಪ ಮೇಲೆ ಬಂದು ತನ್ನ ಜೀವನಕ್ಕೆ ಸರಿಯಾದ ಮಾರ್ಗೋಪಾಯ ಸಿಕ್ಕ ನಂತರ ಬದಲಾಗುವುದು; ಇಂದು ದಲಿತ ಜನಾಂಗ ಅಥವಾ ಸಮುದಾಯದ ಕೆಲವು ಜನತೆಯಲ್ಲಿ ಕಾಣಬಹುದು.

“ಬಾಲ್ಯ ಎನ್ನುವುದು ಬರೀ ವಯಸ್ಸಲ್ಲ ಅದೊಂದು ಸಮೃದ್ಧ ಸೃಜನಶೀಲ ಸ್ಥಿತಿ. ಬಾಲ್ಯ ಕಾಲದ ವಿವರಗಳು ಸಮೃದ್ಧವಾಗಿ ಅರಳಿ, ಒಂದರೊಳಗೊಂದು ಬೆರೆತು ಬೆಳೆಯುತ್ತಾ ಹೋಗುವ ಸ್ಥಿತಿ ನಿಜಕ್ಕೂ ರೋಮಾಂಚನಕಾರಿ. ಇದು ಕುವೆಂಪು ಅವರಿಂದ ಹಿಡಿದು ಇಂದಿನ ತನಕ ಸಲ್ಲುವ ಮಾತು. ವಯಸ್ಕ ಸಂವೇದನೆಗೆ ತಕ್ಕಂತೆ ಆತ್ಮಕಥನ ಬರೆಯುವುದು ಕಷ್ಟವಾಗುತ್ತದೆ. ಸಾಮಾಜಿಕ ತೆಳು ವರ್ಣನೆಯಲ್ಲಿ ಅವು ಕೊನೆಗೊಳ್ಳುತ್ತವೆ.’’[೧೩]

ಗ್ರಾಮೀಣ ಮತ್ತು ನಗರ ಜೀವನದ ಮುಖಾಮುಖಿಯನ್ನು ಗುರುತಿಸಬಹುದು. ಊರುಕೇರಿಯ ಪ್ರಾರಂಭ ಹಳ್ಳಿಯ ಜೀವನದಲ್ಲಿ ತಾನು ಕಂಡು ಅನುಭವಿಸಿದ ನೋವು ಯಾವ ರೀತಿಯದು ಎಂದು ತಿಳಿಯಬಹುದು. ಗ್ರಾಮೀಣ ಜೀವನದಲ್ಲಿ ಜಾತೀಯತೆ, ಅಸ್ಪೃಶ್ಯತೆ, ಬಡತನ, ಹಸಿವು ಮುಂತಾದ ಕಷ್ಟಗಳನ್ನು ಕಂಡುಂಡಿದ್ದಾರೆ. ನಂತರ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ನಗರ ಪ್ರದೇಶಗಳಿಗೆ ತೆರಳುವುದು ಅಲ್ಲಿಯೂ ಸಹ ಯಾತನಾಮಯ ಜೀವನ ಎಲ್ಲಾ ದಲಿತರನ್ನು ಬಿಡುವುದಿಲ್ಲ ಎಂಬುದಕ್ಕೆ ಊರುಕೇರಿಯಲ್ಲಿ ವ್ಯಕ್ತವಾದ ಗ್ರಾಮೀಣ ಮತ್ತು ನಗರ ಬದುಕಿನ ಮುಖಾಮುಖಿಯಲ್ಲಿ ನಡೆದ ಘಟನೆಗಳಲ್ಲಿ ಹಳ್ಳಿಯ ಜೀವನಕ್ಕಿಂತ ನಗರ ಜೀವನ ಸ್ವಲ್ಪ ಬದಲಾಗಿದೆ.

ಆತ್ಮಕಥನಕಾರ ಮೊದಲಿಗೆ ತನ್ನ ಅನುಭವಲೋಕದಿಂದ ಪ್ರತ್ಯೇಕಗೊಳ್ಳುತ್ತಾನೆ. ಅನಂತರ ತನ್ನಿಂದಲೇ ತಾನೇ ಪ್ರತ್ಯೇಕಗೊಳ್ಳುತ್ತಾನೆ. ಅನುಭವಲೋಕ; ಅನುಭವಗಳ ವಾರಸುದಾರ; ಆತ್ಮಕಥನಕಾರ ಈ ಮಾದರಿಯ ವಿನ್ಯಾಸ ಅನಾಯಾಸವಾಗಿ ಬಂದು ಬಿಡುತ್ತವೆ. ಇಲ್ಲಿ ಎಂತಹ ಕಹಿ ಅನುಭವಕ್ಕೂ ತಾನೇ ಕೊನೆಯವನು ಎಂಬುದನ್ನು ಸ್ಥಾಪಿಸಲು ಗ್ರಾಮೀಣ ಮತ್ತು ನಗರ ಜೀವನದಲ್ಲಿ ಸಿಕ್ಕಂತಹ ದಟ್ಟ ದಾರುಣತೆಯನ್ನು ಬಿಂಬಿಸುತ್ತದೆ. ದಲಿತ ಕೌಟುಂಬಿಕ ಚಿತ್ರಣಗಳು ಸಹ ಕಾಣಿಸಿಕೊಳ್ಳುತ್ತವೆ. ಇಲ್ಲಿ ಕುಟುಂಬ ವ್ಯವಸ್ಥೆ ಸಾಧಾರಣವಾಗಿ ಅವಿಭಕ್ತ ಕುಟುಂಬದ ರೀತಿಯಲ್ಲಿದ್ದು ಮತ್ತೆ ಅವುಗಳು ಚಿಕ್ಕ ಚಿಕ್ಕ ಆತ್ಮಕಥನಕಾರರು ಹುಟ್ಟಿದ ಮಂಚನ ಬೆಲೆ ಹಳ್ಳಿಯ ಪರಿಸರದ ಕೌಟುಂಬಿಕ ಚಿತ್ರಣವಾಗಿದೆ.

“ಬಡತನ ಮತ್ತು ಪ್ರತಿಭೆಗಳ ನಡುವಣ ಸಂಬಂಧ ಊರು–ಕೇರಿಯ ಒಂದು ಮುಖ್ಯ ವಸ್ತು. ದಲಿತ ಸಾಹಿತಿಯ ಆತ್ಮಕತೆಯನ್ನು ಓದುವುದು ಏಕ ಕಾಲಕ್ಕೆ ಆಸಕ್ತಿ ಮತ್ತು ಆತಂಕಗಳನ್ನು ಹುಟ್ಟಿಸುತ್ತದೆ. ಇಲ್ಲಿ ಹೊಸ ಲೋಕವೊಂದರ ಶೋಧನೆ ಎಂಬ ಕಾರಣಕ್ಕೆ ಆಸಕ್ತಿ. ಸವರ್ಣೀಯ ಸಮಾಜದ ಹಿಂಸೆ ಸಾಹಿತ್ಯ ಕೃತಿಯಲ್ಲಿಯೇ ಎದ್ದು ಕಾಣುತ್ತದೆ.”[೧೪]

“ಈ ವ್ಯವಸ್ಥೆಯ ಪರಿಣಾಮವಾಗಿ ವೃತ್ತಿ ನಿರ್ಮಿತ ಜಾತಿ, ಕರ್ಮ ಬಂಧನದ ನಿರ್ಧಾರಿತ ಮೌಲ್ಯವಾಗಿ ರೂಪುಗೊಂಡು ಜಾತಿ, ಸಾಮಾಜಿಕ ಸ್ಥಾನಮಾನದ ಮುಖ್ಯಸ್ತರವಾಯಿತು. ನಿಂದನೆಯಿಂದ ಹಿಡಿದು ಶಿಕ್ಷೆಯವರೆಗೂ ಒಂದು ಅಸ್ತ್ರವಾದ ಜಾತಿ, ಅಕ್ಷರ ಕಲಿಕೆಯು ಯಾರ ಹಕ್ಕು ಎಂಬುದರ ನಿರ್ಣಾಯಕ ಅಂಶವಾಗಿ ಪರಿಣಮಿಸಿತು. ಜಾತಿಯ

ಕಾರಣ ಕೆಲವರಿಗೆ ಪೂರ್ಣ ನಿಷೇಧ ಬಂದಿತು. ಅಕ್ಷರ ಕಲಿಕೆಯಲ್ಲಿ ಆಸಕ್ತಿಯಿಂದ ಕದ್ದು ಕೇಳಿದ ಅಪರಾಧಕ್ಕೆ ಕಿವಿಯಲ್ಲಿ ಕಾಯಿಸಿದ ಸೀಸವನ್ನು ಹೊಯ್ಯುವಂತಹ ಗಂಭೀರ ಶಿಕ್ಷೆಯು ಸಾಮಾನ್ಯವಾಯಿತು.''[೧೫]

ಒಂದು ಕಾಲದಲ್ಲಿ ಶ್ರೀಮಂತರಿಗೆ ಸೀಮಿತವಾದ ಶಿಕ್ಷಣ ವ್ಯವಸ್ಥೆಯನ್ನು ಕಾಣಬಹುದು. ಇಂಥ ಸ್ಥಿತಿಯನ್ನು ಸ್ವಾತಂತ್ರ್ಯ ನಂತರದಲ್ಲಿಯೂ ಸಹ ನಾವು ಕಾಣಬಹುದಾಗಿದೆ. ಬಡತನ ಮತ್ತು ಪ್ರತಿಭೆಗಳ ಮುಖಾಮುಖಿಯನ್ನು ನಾವು ಊರು ಕೇರಿಯಲ್ಲಿ ಹಲವು ಸಂದರ್ಭಗಳಲ್ಲಿ ಗುರುತಿಸಬಹುದು. ದಲಿತರಿಗೆ ಶಿಕ್ಷಣ ಎನ್ನುವುದು'' ನೀರು ಇಳಿಯದ ಗಂಟಲಲ್ಲಿ ಕಡುಬು ತುರುಕಿದಂತೆ'' ಅಂದರೆ ದಲಿತ ಜನಾಂಗ, ಸಮುದಾಯಕ್ಕೆ ಶಿಕ್ಷಣ ಕೊಡಿಸುವುದು ಮುಖ್ಯವಾಗಿರಲಿಲ್ಲ. ತನ್ನ ಮನೆಗೆ ಬಂದ ಪತ್ರವನ್ನು ಓದಲು ಬಂದರೆ ಸಾಕು ಎನ್ನುವಂತಹ ಧೋರಣೆಯು ಅಂದಿನ ದಲಿತ ಜನಾಂಗದ ಸ್ಥಿತಿಯನ್ನು ತಿಳಿಸುವಲ್ಲಿ ಯಶಸ್ವಿಯಾಗಿದೆ.

''ನನ್ನ ತಾಯಿ ಒಂದು ದಿನ ನನ್ನ ಮಗನನ್ನು ಓದಿಸಬೇಕು; ಅವನಿಗೆ ನೆಂಟರು ಬರೆದ ಕಾಗದ ಓದಲು ಬಂದರೆ ಸಾಕು. ಆಮೇಲೆ ಬಿಡಿಸಿ ಬಿಡುತ್ತೇವೆ ಎಂದಳು.''[೧೬]

ಈ ಮೇಲಿನ ಮಾತುಗಳಿಂದ ನಮಗೆ ತಿಳಿದು ಬರುವುದೇನೆಂದರೆ ಅಂದಿನ ಪರಿಸರದಲ್ಲಿ ದಲಿತರ ಸಮೂಹದಲ್ಲಿ ಇದ್ದಂತಹ ಪರಿಸ್ಥಿತಿಯನ್ನು ಗಣನೆಗೆ ತಂದುಕೊಂಡು ಈ ಮಾತನ್ನು ಹೇಳಿರಬಹುದು. ಇಂಥ ಸಂದರ್ಭದಲ್ಲಿ ಬಡತನದ ಬೇಗೆಯಲ್ಲಿ ಬೆಂದ ವ್ಯಕ್ತಿಗಳೂ ಸಮುದಾಯದಲ್ಲಿ ಮುಂದೆ ಬರಲು ಸಾಧ್ಯವೆಂಬುದನ್ನು ತೋರಿಸಲು ಇಂದು ಸಿದ್ಧಲಿಂಗಯ್ಯನವರು ಸಾಕ್ಷಿಯಾಗಿ ನಿಲ್ಲುತ್ತಾರೆ. ಈ ರೀತಿಯ ಧೋರಣೆಯನ್ನು ದಲಿತ ಜನಾಂಗ ನಿರ್ಧಾರ ಮಾಡಿ ಅದನ್ನು ಹೋಗಲಾಡಿಸಲು ಪ್ರಯತ್ನ ಪಡಬೇಕು ಎಂದು ಹೇಳಲಾಗಿದೆ. ಕಲಿಯುವ ಆಸಕ್ತಿಯನ್ನು ಹೊಂದಿರುವವನು ಎಲ್ಲಾ ಕಷ್ಟಗಳನ್ನು ಅನುಭವಿಸಿಯೂ ಸ್ಮಶಾನದಲ್ಲಿಯಾದರೂ ಓದಿ ಮುಂದೆ ಬರಬಹುದೆಂಬುದಕ್ಕೆ ಇದು ನಿದರ್ಶನವಾಗುತ್ತದೆ.

ಯಾವುದೇ ದಲಿತ ಜನಾಂಗದಲ್ಲಿ ಹುಟ್ಟಿದ ವ್ಯಕ್ತಿಗಳು ಶಿಕ್ಷಣದ ಸಂದರ್ಭದಲ್ಲಿ ಕಂಡಂತಹ ಅವ್ಯವಸ್ಥೆಯ ಬಗ್ಗೆ ದನಿ ಎತ್ತುವ ಮೂಲಕ ಹೋರಾಟಗಾರರಾಗಿ ರೂಪುಗೊಳ್ಳಲು ಕಾರಣವಾಯಿತು. ದಲಿತರಿಗೆ ತಮ್ಮ ಜೀವನದಲ್ಲಿ ಓದಲು ಹಾಸ್ಟೆಲ್ ವ್ಯವಸ್ಥೆ ಇದ್ದ ಕಾಲದಲ್ಲಿ ಸರಿಯಾದ ಊಟದ ವ್ಯವಸ್ಥೆಯಿಲ್ಲದ, ಅನ್ಯಾಯದ ವಿರುದ್ಧ ಬಂಡೇಳಲು ಹೋರಾಟ ಸಹಜವಾಗಿ ಬೆಳೆದು ಬಂದಿದೆ. ಅಂದಿನ ಸಮಾಜದಲ್ಲಿ ದಲಿತರ ಮೇಲೆ ನಡೆಯುತ್ತಿದ್ದ ದೌರ್ಜನ್ಯವನ್ನು ವಿರೋಧಿಸುವುದು ಅನಿವಾರ್ಯವಾಯಿತು. ಇದಕ್ಕೆ ಒಟ್ಟುಗೂಡಲು ದಲಿತ ಸಂಘರ್ಷ ಸಮಿತಿಯನ್ನು ಇಡೀ ದಲಿತ ಸಮುದಾಯದ ಮೇಲೆ ನಡೆದ ಶೋಷಣೆಯನ್ನು ವಿರೋಧಿಸಲು ಹೋರಾಟವನ್ನು ಒಂದು ಅಸ್ತ್ರವಾಗಿ ಬಳಸಿ ಅಂದಿನ ಸಮಾಜದ ಕಣ್ಣು ತೆರೆಸಲು ಕಾರಣವಾಯಿತು.

ಬಡತನದ ನಡುವೆಯೂ ತಮ್ಮ ಪ್ರತಿಭೆಯನ್ನು ಮೆರೆಯಬಹುದೆಂಬುದಕ್ಕೆ ಈ ಆತ್ಮಕತೆ ಬಹಳ ಮುಖ್ಯವಾಗಿ ನಮ್ಮ ಮುಂದೆ ನಿಲ್ಲುತ್ತದೆ. ಅಂದಿನ ಸಾಮಾಜಿಕ ಒಳನೋಟಗಳು ದಲಿತ ಆತ್ಮಕತೆಯಲ್ಲಿ ತುಂಬಿಕೊಂಡಿರುತ್ತವೆ. ಸಾಮಾಜಿಕ ಪರಿಸ್ಥಿತಿಯನ್ನು ತನ್ನ ಜೀವನದಲ್ಲಿ ನಡೆದ ಒಂದೊಂದು ಘಟನೆಯಾಗಿ ಹೇಳುವ ಪರಿಪಾಠ ದಲಿತ ಆತ್ಮಕತೆಗಳಲ್ಲಿ ಕಂಡುಬರುವ ಮುಖ್ಯ ಸಂಗತಿಯಾಗಿದೆ.

"ಬಾಲ್ಯಕಾಲದ ಸಂವೇದನೆಯ ಅಖಂಡ ಸ್ಥಿತಿ ವೈಯಕ್ತಿಕ-ಸಮಷ್ಟಿ, ಖಾಸಗಿ ಸಾರ್ವಜನಿಕ ಇತ್ಯಾದಿ ವರ್ಗೀಕರಣಗಳಿರದ- ಸ್ಥಿತಿ ಅದು. ವಯಸ್ಕ ಸ್ಥಿತಿ ತಾರತಮ್ಯ ನಿರ್ಮಾಣದ ವರ್ಗೀಕರಣಗಳ ಸ್ಥಿತಿ. ತನ್ನ ಸಾಮಾಜಿಕ ಮುಖವಾಡಗಳನ್ನೇ ಸಮರ್ಥಿಸಿಕೊಳ್ಳುವ, ವಿಸ್ತರಿಸುವ ಬರವಣಿಗೆಯಾಗಿ ಆತ್ಮಕಥನ ಬಳಕೆಯಾಗುತ್ತದೆ. ಭಂಗಿಸುವ, ನೋಯಿಸುವ ತನ್ನನ್ನೇ ವಿಕಟವಾಗಿ ಕಾಣುವ ಗುಣಗಳು ಇಲ್ಲದ ಆತ್ಮಕತೆ ಅಗ್ಗದ ಸ್ವಸಮರ್ಥನೆಯಾಗುತ್ತದೆ."[೧೭]

"ಊರುಕೇರಿ" ಆತ್ಮಕತೆಯು ಒಂದು ಜನಾಂಗದ ಸಾಂಸ್ಕೃತಿಕ ಕೃತಿಯಾಗಿ ಅಂದಿನ ಸಮಾಜದ ಸ್ಥಿತಿಯನ್ನು ಅನಾವರಣಗೊಳಿಸುವಲ್ಲಿ ಯಶಸ್ವಿಯಾಗಿದೆ. ತಮ್ಮ ಅನುಭವವನ್ನು ಸಿದ್ಧಲಿಂಗಯ್ಯನವರು ಈ ಆತ್ಮಕತೆಯಲ್ಲಿ ವೈಶಿಷ್ಟ್ಯಪೂರ್ಣವಾಗಿ ವ್ಯಕ್ತಪಡಿಸಿರುವುದನ್ನು ಕಾಣಬಹುದು.

ಊರುಕೇರಿ ಆತ್ಮಕತೆಯು ಒಬ್ಬ ದಲಿತ ವ್ಯಕ್ತಿಯ ಆತ್ಮಕತೆಯಾಗಿದೆ. ಸಮಸ್ತ ದಲಿತ ವ್ಯಕ್ತಿಗಳ ಪರಿಸರದ ಪ್ರಾದೇಶಿಕತೆಯ ಸಾಂಸ್ಕೃತಿಕ ಒಳನೋಟವನ್ನು ಬಿಚ್ಚಿ ತೋರುವ ಒಂದು ಮಹಾನ್ ಕೃತಿಯಾಗಿ ಕಂಡುಬರುತ್ತದೆ.

"ಹೀಗಾಗಿ ತೀವ್ರವಾಗಿ ಅನುಭವಿಸಿದ ಹಾಗೂ ಪುನರ್ ಸೃಷ್ಟಿಸಿದ ಬಾಲ್ಯಕಾಲ ಮತ್ತು ಸ್ವಾರಸ್ಯಕರ ತೆಳುತನದಿಂದ ಪುನರ್‌ಸೃಷ್ಟಿಸಿರುವ ಕಾಲೇಜು ದಿನಗಳು ಇಷ್ಟಕ್ಕೇ ನಿಂತಿದೆ ಎನ್ನುವುದು ಕನ್ನಡ ಸಂಸ್ಕೃತಿಯ ಅಲಿಖಿತ ನಿಯಮ ಮತ್ತು ನಂಬಿಕೆಗಳನ್ನು ಸಮರ್ಥಿಸುತ್ತದೆ. ಈ ದೃಷ್ಟಿಯಿಂದ ಆತ್ಮಕತೆಯನ್ನು ಓದಿದವರು ಬೆರಗಾಗದೆ ಇರಲಾರ. ನಗರದ ಜೀವನ ಇನ್ನೂ ಆತ್ಮಕತೆಗಳಲ್ಲಿ ಅಷ್ಟು ಆಳವಾಗಿ ಕಾಣದೇ ಇರುವ ಬಗೆಗೂ ಆತ ಬೆರಗಾಗದೆ ಕನ್ನಡ ಆತ್ಮಕತೆಗಳಲ್ಲಿ ನಗರಗಳು ಇದ್ದೂ ಇಲ್ಲದಂತೆ ಇವೆ. ಗ್ರಾಮೀಣ ಜೀವನದ ವಿವರಗಳು ಬಂದಷ್ಟು ಉತ್ಕಟವಾಗಿ ನಗರಗಳ ಬದುಕು ಬರುವುದಿಲ್ಲ. ವಿಶೇಷವಾಗಿ ಆತ್ಮಕತೆಗಳಿಗೆ ಮೀಸಲಾದ ಸಮಸ್ಯೆ ಇದು ಎನ್ನುವುದನ್ನು- ಈ ಸಂದರ್ಭದಲ್ಲಿ ಗಮನಿಸಬಹುದು."[೧೮]

"ಯಾವುದರ ಬಗ್ಗೆಯೂ ತೀವ್ರ ರಾಗಾವೇಶ ಸಾಧ್ಯವಾಗದೆ ಸದಾ ತುಂಟತನ, ಕೊಂಕು ನಗು, ಸಂಶಯದಲ್ಲೇ ಸುತ್ತಿ ಬೆಳೆದ ತಲೆಮಾರು ಅದು. ನಾವು ಅರ್ಧ ನಂಬಿಕೆ, ಅರ್ಧ ಸಂಶಯದಲ್ಲಿ ಹೇಳುತ್ತಿದ್ದುದನ್ನು ಅನೇಕ ಹುಂಬರು ಪೂರ್ಣ ಆವೇಶದಿಂದ ಸ್ವೀಕರಿಸಿ

ಕಳೆದೆರಡು ದಶಕಗಳಲ್ಲಿ ಅನಾಹುತಗಳನ್ನು ಉಂಟು ಮಾಡಿದರು. ಸದಾ ಹುಡುಗಾಟಿಕೆಯಲ್ಲಿಯೇ ಎಲ್ಲವನ್ನು ನಡೆಸುತ್ತಿದ್ದ ನಮ್ಮ ಗೆಳೆಯರ ಗುಂಪಿನ ಕಾರ್ಯಗಳು ಸಮಕಾಲೀನ ಬದುಕಿನಲ್ಲಿ ಕೆಲವು ಒಳ್ಳೆಯದನ್ನು ಮಾಡಿದವು."[೧೯]

ಈ ಆತ್ಮಕತೆಯಲ್ಲಿ ಒಂದು ತಲೆಮಾರಿನ ಕಥೆಯನ್ನು ಒಳಗೊಂಡು ಪ್ರಕಟವಾಗಿರುವುದು ಕಂಡುಬರುವ ಸಂಗತಿಯಾಗಿದೆ. ಇಂದಿನ ಸಮಾಜಕ್ಕಿಂತ ಹಿಂದಿನ ಸಮಾಜದ ಭಿನ್ನ ಹೊಳಹುಗಳನ್ನು ನಾವು ಇಲ್ಲಿ ಕಾಣಬಹುದು. ತಲೆಮಾರಿನ ಪರಿಸರದ ಸ್ಥಿತಿ ಅಲ್ಲಿಯ ಜನರ ಬದುಕು ಮತ್ತು ಸಾಮಾಜಿಕವಾಗಿ ಜನರು ಅನುಭವಿಸುತ್ತಿರುವ ನೋವು, ಸಂಕಟಗಳು ಅದರ ಜೊತೆಗೆ ಜಾತೀಯತೆ, ಶೋಷಣೆ, ವರ್ಗ ಸಂಘರ್ಷಗಳು ಯಾವ ರೀತಿಯಲ್ಲಿ ನಡೆದುಕೊಂಡು ಬರುತ್ತಿವೆ ಎಂಬುದರ ಸ್ಪಷ್ಟ ಚಿತ್ರಣವನ್ನು ಕಾಣಬಹುದಾಗಿದೆ.

ಸ್ವತಃ ಕಥನಕಾರರು ಅನುಭವಿಸಿದ ಸಮಸ್ಯೆಗಳ ಚಿತ್ರಣವನ್ನು ಓದುಗರ ಮೈನವಿರೇಳುವಂತೆ ಚಿತ್ರಿಸಿರುವುದು ಕಂಡುಬರುತ್ತದೆ. ಇಂದಿನ ತಲೆಮಾರಿನ ಅನೇಕ ಘಟನೆಗಳು ದಾಖಲೆಯಾಗಿರುವುದು ಕಂಡುಬರುತ್ತದೆ. ಆ ಸಂಗತಿಗಳು ಹೋರಾಟದ ವಿವಿಧ ಹಂತಗಳನ್ನು ಪ್ರತಿನಿಧಿಸುತ್ತವೆ.

ಒಬ್ಬ ಬಡತನದ ವ್ಯಕ್ತಿ, ಸಾಮಾಜಿಕವಾಗಿ ಹೆದರದೆ ಛಲದಿಂದ ಬದುಕಿ ತನ್ನ ಸಾಧನೆಯ ಕಡೆಗೆ ತುಡಿಯುತ್ತಿರುವ ಹಲವಾರು ವ್ಯಕ್ತಿಗಳಿಗೆ ತೋರುಬೆರಳಾಗಿ ಈ ಆತ್ಮಕತೆ ಕಾಣಿಸುತ್ತದೆ.

ಅಡಿಟಿಪ್ಪಣಿ

೧. ಬಡವರ ನಗುವಿನ ಶಕ್ತಿ : ಸಂ. ಎಚ್.ದಂಡಪ್ಪ, ಪುಟ ೨೬೧.

೨. ಊರುಕೇರಿ : ಪುಟ ೯

೩. ಅದೇ : ಪುಟ ೧೦

೪. ಅದೇ : ಪುಟ ೧೩

೫. ಅದೇ : ಪುಟ ೧೩

೬. ಬಡವರ ನಗುವಿನ ಶಕ್ತಿ : ಸಂ. ಎಚ್.ದಂಡಪ್ಪ, ಪುಟ ೩೯೪

೭. ಊರುಕೇರಿ : ಪುಟ ೯

೮. ಅದೇ : ಪುಟ ೨೧

೯. ಅದೇ : ಪುಟ ೧೭

೧೦. ಅದೇ : ಪುಟ ೨೦

೧೧. ಅದೇ : ಪುಟ ೨೦

೧೨. ಬಡವರ ನಗುವಿನ ಶಕ್ತಿ : ಸಂ.ಎಚ್. ದಂಡಪ್ಪ ಪುಟ ೨೬೫

೧೩. ಅದೇ : ಪುಟ ೨೬೫

೧೪. ಅದೇ : ಪುಟ ೨೬೨

೧೫. ದಲಿತ ಮಾರ್ಗ : ಸಂ.ಅರವಿಂದ ಮಾಲಗತ್ತಿ, ಪುಟ ೪೦೧

೧೬. ಊರುಕೇರಿ : ಪುಟ ೧೮

೧೭. ಬಡವರ ನಗುವಿನ ಶಕ್ತಿ : ಸಂ. ಎಚ್.ದಂಡಪ್ಪ, ಪುಟ ೨೬೬

೧೮. ಅದೇ : ಪುಟ ೨೬೬

"ಮಣೆಗಾರ"- ಒಂದು ವಿಶ್ಲೇಷಣೆ

ತುಂಬಾಡಿ ರಾಮಯ್ಯ ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ತುಂಬಾಡಿ ಗೊಲ್ಲಹಳ್ಳಿಯಲ್ಲಿ ೦೧.೦೬.೧೯೫೪ರಲ್ಲಿ ಜನಿಸಿದರು: ತಂದೆ ಕ್ಯಾತಪ್ಪ, ತಾಯಿ ಸಂಜೀವಮ್ಮ ಬಡ್ಡಗೆರೆ, ಕೊರಟಗೆರೆ ಮತ್ತು ತುಮಕೂರಿನಲ್ಲಿ ವಿದ್ಯಾಭ್ಯಾಸ ಮಾಡಿದರು.

ಕಲಾವಿದರು, ಸಾಹಿತಿಗಳು ಹೋರಾಟಗಾರರ ಸಂಘ ಹಾಗೂ ಪ್ರಗತಿಪರ ಸಂಘಟನೆಯಲ್ಲಿ ತೊಡಗಿಸಿಕೊಂಡು ನೇಪಥ್ಯದಲ್ಲೇ ಇರಬಯಸುವ ಸಜ್ಜನ. ಜೊತೆಗೆ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಸದಾ ಒತ್ತಾಸೆ ನೀಡುವ ಮುಗ್ಧ ಮನಸ್ಸಿನವರು. ಈಗ ಕರ್ನಾಟಕದ ಸರ್ಕಾರದ ಕಾರ್ಮಿಕ ಇಲಾಖೆಯಲ್ಲಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಎಪ್ಪತ್ತರ ದಶಕದಲ್ಲಿ ಹುಟ್ಟನ್ನು ಪಡೆದ ದಲಿತ ಸಂಘರ್ಷ ಸಮಿತಿಯು ರಾಜ್ಯಾದ್ಯಾಂತ ಆರಂಭಿಸಿದ ಹೋರಾಟದಲ್ಲಿ ತಮ್ಮನ್ನು ಕ್ರಿಯಾಶೀಲವಾಗಿ ಅರ್ಪಿಸಿಕೊಂಡವರು. ಚಳುವಳಿಯ ಮೂಲಕವೇ ತಮ್ಮ ಅಭಿವ್ಯಕ್ತಿಯ ಸೂಕ್ಷ್ಮ ಗ್ರಹಿಕೆಗಳನ್ನು ಹಾಗೂ ಬೆಚ್ಚನೆಯ ನುಡಿಗಟ್ಟುಗಳನ್ನು ರೂಪಿಸಿಕೊಂಡವರು.

ದ್ವೇಷ, ಪ್ರತೀಕಾರ, ಕೀಳರಿಮೆಗಳ ಬಂಧನದಿಂದ ಬಿಡುಗಡೆ ಪಡೆದು, ವಿಶಾಲ ತಳಹದಿಯ ಮಾನವೀಯ ನೆಲಗಟ್ಟಿನ ಮೇಲೆ ಹೊಸ ಸಮಾಜದ ಕಟ್ಟುವಿಕೆಗೆ ಹಂಬಲಿಸುವ ಇವರ "ಮಣೆಗಾರ" ಆತ್ಮಕಥನವು ಪ್ರಬುದ್ಧ ಮನಸ್ಸೊಂದರ ಸಂಯಮ ಹಾಗೂ ಅಂತಃಕರಣವನ್ನು ತೆರೆದು ತೋರುತ್ತದೆ.

ದಲಿತ ಆತ್ಮಕತೆಗಳು ಒಂದು ಜನಾಂಗದ; ಒಂದು ಪರಿಸರದ ಕತೆಯಾಗಿ ರೂಪ ತಾಳಿರುತ್ತವೆ. ಆತ್ಮಕಥನಕಾರ ಒಬ್ಬ ನಾಯಕನಂತೆ ಕಂಡರೂ ಇಡೀ ಸಮುದಾಯವನ್ನು ಪ್ರತಿನಿಧಿಸುವುದು ಅವನ ಉದ್ದೇಶವಾಗಿರುತ್ತದೆ. ತುಂಬಾಡಿ ರಾಮಯ್ಯ ಅವರು ತಮ್ಮ ಆತ್ಮಕತೆಯಲ್ಲಿ ಯಾವುದೇ ರೀತಿಯ ಅಸಹನೆ ಮತ್ತು ರೋಷವನ್ನು ತೋರದೆ ಅಸಮಾನತೆಯನ್ನು ಅನುಸರಿಸುವ ಈ ಸಮಾಜದ ಬಗ್ಗೆ ವಿವರಿಸಿರುವುದು ಮತ್ತು ಬದುಕಿನ ಸತ್ಯಸಂಗತಿಗಳನ್ನು ತೀರಾ ನಿರ್ಲಿಪ್ತವಾಗಿ ದಾಖಲಿಸಿರುವುದು ಅವರ ನಿರ್ಲಿಪ್ತವೂ ಪ್ರಬುದ್ಧವೂ ಆದ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

"ದಲಿತ ಆತ್ಮಕತೆಗಳಲ್ಲಿ ಒಟ್ಟು ಸಮಾಜದ ನಿರ್ಲಕ್ಷಿತರು, ಅವಕಾಶ ಹೀನರು ಹಾಗೂ ತಬ್ಬಲಿ ಜಾತಿಯ ಮನುಷ್ಯರನ್ನು ಚಿತ್ರಿಸಿರುವುದು ಕಂಡುಬರುತ್ತದೆ. ಹೀಗಾಗಿ ಕನ್ನಡದ ಹೆಚ್ಚಿನ ದಲಿತ ಸಾಹಿತ್ಯ ಕೃತಿಗಳಲ್ಲಿ ಪ್ರತಿಭಟನೆಯು ಹೆಚ್ಚು ತೀವ್ರವಾಗಿವೆ. ಕಾವಿನೊಂದಿಗೆ ಮಾಗಿ ಬಂದವುಗಳಾಗಿವೆ."[೧]

ಬಡತನ ಎಂಬುದು ದಲಿತರ, ಶೋಷಿತರ ಸಮುದಾಯಕ್ಕೆ ಮೀಸಲು ಎಂಬಂತೆ ಇಲ್ಲಿ ಕಂಡುಬಂದಿದೆ. ಇಲ್ಲಿ ತಮ್ಮ ಮನೆಯ ಪರಿಸ್ಥಿತಿಯನ್ನು ನೋಡಿ ಅದನ್ನು ಕಟ್ಟಿದವರ ನಿಸ್ಸಹಾಯಕತೆ ಮತ್ತು ತಬ್ಬಲಿತನವನ್ನು ಪ್ರಕಟಿಸುತ್ತಾರೆ. ಆತ್ಮಕತೆಯ ಪ್ರಾರಂಭದಲ್ಲಿ ಈ ಇಕ್ರ ಕಟ್ಟಿದವರು ಯಾರು? ಎಂದು ಪ್ರಶ್ನೆಯನ್ನು ಮಾಡುವ ಮೂಲಕ ಪ್ರಾರಂಭಿಸಿದ್ದಾರೆ. ಇಲ್ಲಿ ತಾವು ಹೇಳಿಕೊಳ್ಳುವ ರೀತಿಯನ್ನು ನೋಡಿದರೆ ತಿಳಿಯುತ್ತದೆ. ಅವರು ಇಡೀ ಜನ ಸಮುದಾಯವನ್ನು ಪ್ರತಿನಿಧಿಸುವ ವ್ಯಕ್ತಿಯಾಗಿ ಕಾಣುತ್ತಾರೆ.

"ಜಂತೆನೆಲಲ ಕರಿಯಲ್ಲಪ್ಪನೋರ ಈರನಾಗಪ್ಪ ಕೊಟ್ಟಿದ್ದು, ಮೇಲ್ ಮುದ್ದೆ ಹಾಕೋ ದಿನ ಊರಿನ ಜನ ಮನೆಗೊಬ್ರಂತೆ ಬಂದು ಮೇಲ್ ಮುದ್ದೆ ಹಾಕಿಕೊಟ್ಟು ಅವತ್ತು ಮೇಲ್ ಮುದ್ದೆ ಹಾಕೋರಿಗೆಲ್ಲಾ ಆ ಪುಣ್ಯಾತ್‌ಗಿತ್ತಿ ಕುಂಚಿಟಗರ ಲಕ್ಕಮ್ಮ ಹಿಟ್ಟು ಬೇಯ್ಸಾಕುದ್ಲು. ಆಗ ನಾವು ಪಟ್ಟ ಕಷ್ಟದ ಮುಂದೆ ಈ ತಿಗಣೆಗಳ ಕಾಟ ಯಾವ ಮಹಾ?"[೨]

ಇಲ್ಲಿ ತಮ್ಮ ಪರಿಸ್ಥಿತಿಯನ್ನು ಕಟ್ಟಿಕೊಡುವ ರೀತಿಯಲ್ಲಿಯೇ ಲೇಖಕರು ಸೃಜನಶೀಲ ಮನಸ್ಸಿನಿಂದ ಅಲ್ಲಿನ ವಾಸ್ತವದ ಸ್ಥಿತಿಯನ್ನು ಅನಾವರಣ ಮಾಡಿರುವುದು ಕಾಣುತ್ತದೆ. ಒಂದಕ್ಕಿಂತ ಮತ್ತೊಂದು ಕಷ್ಟ ಏನಲ್ಲ ಎಂಬ ಧೋರಣೆಯನ್ನು ಕಾಣುತ್ತೇವೆ.

ಇಂಥ ಸಂದರ್ಭದಲ್ಲಿ ಇಡೀ ಸಮಾಜದ ಸುತ್ತಲಿನ ಪರಿಸರದಲ್ಲಿ ಕಾಣುವ ಶೋಷಣೆಯ ಬಗ್ಗೆ ಹೆಚ್ಚು ಒತ್ತುಕೊಟ್ಟು ಹೇಳಿದ್ದಾರೆ. ಬಡತನದ ಪರಿಸ್ಥಿತಿಯಲ್ಲಿರುವ ನೆಲೆಗೂ ಯೋಗ್ಯವಾದ ಸ್ಥಿತಿ ಇಲ್ಲದಿರುವುದನ್ನು ಅವರು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

"ನಮ್ಮ ಜಾತಿಯವರಿಗೆ ಒಂದು ಹೊತ್ತಿನ ಊಟಕ್ಕೆ ಕಷ್ಟ ಪಡುವಂತಾದ ಮೇಲೆ ಕಪ್ಪ ಕಾಣಿಕೆಗಳನ್ನು ಕೊಡುವುದನ್ನು ನಿಲ್ಲಿಸಿದರು."[೩] ಅಂದರೆ ತಮ್ಮ ಗುರುಗಳಾದ ಆದಿ ಜಾಂಬವ ಮುನಿಗಳಿಗೆ ಕಪ್ಪ ಕಾಣಿಕೆಗಳನ್ನು ಕೊಡಬೇಕಾದ ಪರಿಸ್ಥಿತಿ ಇತ್ತು. ಇಂಥ ವೇಳೆಯಲ್ಲಿ ತಮಗೆ ತಿನ್ನಲು ಇಲ್ಲದಿದ್ದಾಗ ಬೇರೆಯವರಿಗೆ ಕೊಡುವುದು ಎಷ್ಟು ಸಮಂಜಸವಾಗುತ್ತದೆ ಎಂಬ ಧ್ವನಿಯನ್ನು ಇಲ್ಲಿ ಕಾಣಬಹುದಾಗಿದೆ. ತನ್ನಲ್ಲಿ ಹೆಚ್ಚಾಗಿದ್ದರೆ ಮಾತ್ರ ದಾನ, ಧರ್ಮ ಮಾಡುವುದು ಸಹಜ ಪ್ರವೃತ್ತಿ. ತಾವೇ ದುಡಿದು ಒಂದು ಹೊತ್ತಿನ ಊಟವನ್ನು ತಿಂದರೆ ಸಾಕು ಎನ್ನುವ ಸ್ಥಿತಿಯ ಜನರ ಧೋರಣೆ ಸರಿಯಾಗಿದೆ. ನಿರ್ದಿಷ್ಟ ಸಮುದಾಯದಲ್ಲಿ ಹುಟ್ಟಿದ ಕತೆಗಳಲ್ಲಿ ಆ ವರ್ಗದ ದುಃಖ ಕನಸುಗಳು ಇರುತ್ತವೆಂಬುದನ್ನು ನಾವು ಆಗಾಗ್ಗೆ ನೋಡುತ್ತಿರುತ್ತೇವೆ. ಮೇಲೆ ನೋಡಿದಂತೆ ಬಡತನದ ಕತೆ ದಲಿತಕತೆಯಾಗಿ ಬದಲಾಗುವ ಸ್ಥಿತಿಯನ್ನು ಇಲ್ಲಿ ಗಮನಿಸಬಹುದು.

"ಒಂದೂರಾಗೆ ಗಂಡ ಹೆಂಡ್ತೀರಿದ್ರು, ಇಬ್ಬರೂ ಹಳೆ ಮೆಟ್ಟ ರಿಪೇರಿ ಮಾಡ್ಕೊಂಡು ಹೊಟ್ಟೆ ಹೊರಿತಿದ್ರು. ಇರೊಕ್ಕೊಂದು ಗುಡ್ಲು, ಉಡಾಕ್ಕೊಂದು ದುಪ್ಪಿ. ಆ ದುಪ್ಪಿಯನ್ನೇ ರಾತ್ರಿ

ಹೊತ್ನಾಗೆ ಇಬ್ರೂ ಸೇರಿ ಹೊದ್ಕೊಂಡು ಮಲಗ್ತಿದ್ರು. ಬೆಳಕಾಗುತ್ತಿದ್ದಂತೆ ಹೆಂಡತಿ ಅದೇ ದುಪ್ಪಿನ ಸೀರೆ ಮಾಡ್ಕೊಂಡು ಉಟ್ಕಳ್ತಿದ್ಲು."

ಈ ಬಡತನ ಎಂಬುದು ಎಂಥ ವ್ಯಕ್ತಿಯನ್ನು ಮುಟ್ಟದೇ ಬಿಡಲಾರದು. ಇವರ ಪರಿಸ್ಥಿತಿಯನ್ನು ನೋಡಿದರೆ ವ್ಯಕ್ತಿಗಳಿಗೆ ಮನಕರದೇ ಇರಲಾರದು. ಇಂಥ ಕಷ್ಟದಲ್ಲಿ ಜೀವನ ಸಾಗಿಸುತ್ತಿರುವ ಪೀಳಿಗೆ ಇಂದೂ ಸಹ ನಮ್ಮ ಸಮಾಜದಲ್ಲಿ ಕಾಣಬಹುದಾಗಿದೆ.

ಆತ್ಮಕತೆಗಳಲ್ಲಿ ಬಾಲ್ಯದ ನೆನಪುಗಳ ಸುರಿಮಳೆ ಇರುತ್ತದೆ. ಇಂಥ ಒಂದು ನೆನಪಿನಿಂದ ಹಸಿವು ಎಂಬುದು ಎಂಥ ಶ್ರೀಮಂತ ವ್ಯಕ್ತಿಯು ತಾನು ಬದುಕಲು ಹಸಿವನ್ನು ತೀರಿಸಿಕೊಳ್ಳುವುದರಿಂದ ಸಾಧ್ಯವೆಂಬುದನ್ನು ಮರೆಯುವಂತಿಲ್ಲ. ಆತ್ಮಕಥನಕಾರರು ತಮ್ಮ ಬಾಲ್ಯದಲ್ಲಿ ಶಾಲೆಯಿಂದ ಬಂದವನಿಗೆ ಊಟ ಇಲ್ಲದ ಸ್ಥಿತಿಯನ್ನು ಕಂಡು ಬಡತನ ಮತ್ತು ಹಸಿವಿನಿಂದ ತೊಳಲಾಡುವ ಜನ ಎಂಥ ಕಾರ್ಯ ಮಾಡುತ್ತಾರೆ ಎಂಬುದು ಒಂದು ನಿದರ್ಶನದ ಮೂಲಕ ನಾವು ನೋಡಬಹುದಾಗಿದೆ.

"ನಮ್ಮ ಹಟ್ಟಿಯ ಸ್ವಲ್ಪ ದೂರದಲ್ಲೇ ವಡ್ಡರ ವೆಂಕಟಪ್ಪನ ಹೊಲ. ಅವರ ಹೊಲ ಸ್ವಲ್ಪ ತಗ್ಗಿನಲ್ಲಿತ್ತು. ಕೂತರೆ ಯಾರಿಗೂ ಕಾಣಿಸುತ್ತಿರಲಿಲ್ಲ. ಸೀದಾ ಹೋದವನೆ ಕೊನೆ ಸೀಳಿನಲ್ಲಿ ಕುಳಿತುಕೊಂಡು ಗಿಡದಲ್ಲಿದ್ದ ಕಡ್ಲೆಕಾಯನ್ನು ಒಂದೊಂದೆ ದೊಗೆದು ತಿನ್ನಲು ಮುಂದಾದೆ. ಆಗ ನನಗಿದ್ದ ಹಸಿವು ಸುತ್ತಲಿದ್ದುದನೆಲ್ಲಾ ಮರೆಸಿತು."[4]

ಅಂದರೆ ಇಲ್ಲಿ ಹಸಿವಿನ ದಾರುಣತೆಯನ್ನು ನಾವು ಕಾಣಬಹುದು. ತಾನು ಮಾಡಿದ್ದು ತಪ್ಪು ಎಂದು ಅರಿವಾದಾಗ ವ್ಯಕ್ತಿಗಳಿಗೆ ಸಂಕೋಚ ಹುಟ್ಟುವುದು ಸಹಜ.

ಇಂಥ ಮನಸ್ಥಿತಿಯ ವ್ಯಕ್ತಿ ರಾಮಯ್ಯನವರು. ಹೀಗೆ ಮಾಡಿದ ಜನರಿಗೆ ತಳಮಳ, ನಿದ್ರೆ ಬರದೇ ಇರುವುದನ್ನು ನಾವು ಕಾಣಬಹುದು. ಒಳ್ಳೆಯ ಮನಸ್ಸನ್ನುಳ್ಳವರು ಸಮುದಾಯದ ಅರಿವನ್ನು ಹೊಂದಿದವರಿಗೆ ಮಾತ್ರ ಇಂಥ ಚಿಂತೆ ಬರುವುದು ಸಹಜ.

ಬಡತನ ಮತ್ತು ಹಸಿವಿನ ಬಗ್ಗೆ ರಾಮಯ್ಯನವರ ಧೋರಣೆ ಭಿನ್ನವಾಗಿದೆ. ಅಂದರೆ ಇಂಥ ಪ್ರಸಂಗಗಳನ್ನು ಮೇಲುದನಿಯಲ್ಲಿ ಹೇಳಲು ಹೋಗುವುದಿಲ್ಲ. ಸೌಮ್ಯ ಸ್ವಭಾವದಿಂದ ಇಡೀ ಸಮಾಜವನ್ನು ಕಾಣುವುದು ಅವರ ದೊಡ್ಡ ಮನಸ್ಸಾಗಿದೆ. ಎಲ್ಲೂ ಇದಕ್ಕೆ ಸಂಬಂಧಿಸಿದಂತೆ ಸಮಾಜವನ್ನು ನಿಂದಿಸುವ ಪ್ರಕ್ರಿಯೆಯನ್ನು ಇವರು ಮಾಡಿಲ್ಲ ಎಂಬುದು ಸಾಹಿತ್ಯಕ್ಕೆ ಹೊಸ ಮೌಲ್ಯವನ್ನು ಕೊಟ್ಟಂತಾಗಿದೆ.

"ಈ ಆತ್ಮಕತೆಯು ಮೆಲ್ಲಗೆ ನಮ್ಮ ಮನದಾಳಕ್ಕೆ ಇಳಿಯುತ್ತದೆ. ಇಲ್ಲಿ ಅಸ್ಪೃಶ್ಯನೊಬ್ಬ ತನ್ನ ಕತೆಯನ್ನು ಹೇಳುತ್ತಿದ್ದರೂ ಆತ್ಮ ಮರುಕ ಹೆಚ್ಚಿಗೆ ಇಲ್ಲದಿರುವುದರಿಂದ ಮಕ್ಕಳಾಗದಂತೆ

ಆಪರೇಷನ್ ಮಾಡಿಸಿಕೊಂಡರೆ ಹಣ ಕೊಡುತ್ತಾರೆಂಬ ಆಸೆಯಿಂದ ಆಪರೇಷನ್ ಮಾಡಿಸಿಕೊಂಡ ಅಪ್ಪ ಆಸ್ಪತ್ರೆಯ ಊಟವನನು ಮನೆ ಮಂದಿಯ ಜೊತೆ ಹಂಚಿಕೊಳ್ಳಲು ತಂದ ಪ್ರಸಂಗ ಕೂಡ ಲೇಖಕರ ನಿರ್ಲಿಪ್ತ ಮನಸ್ಥಿತಿಯಿಂದ ನೋಡುವುದು ಕಾಣುತ್ತದೆ. ಅಂದರೆ ತಾವು ಒಂದು ಹೊತ್ತಿನ ಊಟಕ್ಕೆ ಪರದಾಡುತ್ತಾ ತಾವು ಓದಿದ್ದನ್ನು ಗೊಣಗದೆ ದಾಖಲಿಸಬಲ್ಲರು.''[೫]

ಹೀಗೆ ತಮ್ಮ ಜನಾಂಗದ ಯಾತನೆಯ ಜೊತೆ ಜೊತೆಗೆ ಹಳ್ಳಿಯಲ್ಲಿ ಅಸ್ಪೃಶ್ಯರೂ ಉಳಿದ ಸ್ಪೃಶ್ಯ ಕೆಳಜಾತಿಯವರೂ ಬಡತನ–ಕಡುಬಡತನಗಳ ನಡುವೆ ಇದ್ದರೆಂಬುದನ್ನು ರಾಮಯ್ಯನವರು ತಮ್ಮ ಬಾಲ್ಯದಲ್ಲಿ ಕಂಡುಕೊಂಡರು.

ದಲಿತ ಸಮುದಾಯದಲ್ಲಿ ಮತ್ತು ಗ್ರಾಮೀಣ ಪ್ರದೇಶದ ಜನತೆಯ ಸ್ಥಿತಿಯನ್ನು ಹೇಳುತ್ತಾ ಹಳ್ಳಿಯವರ ಚಪ್ಪಲಿಗಳನ್ನು ರಿಪೇರಿ ಮಾಡುವುದೆಂದರೆ ಅದಕ್ಕಿಂತ ರಣಹಿಂಸೆ ಮತ್ತೊಂದು ಇಲ್ಲ ಎನ್ನುತ್ತಾರೆ. ಜೊತೆಗೆ ಕೆಲವು ಚಪ್ಪಲಿಗಳಿಗೆ ಟಾಕಾ ಹಾಕಲು ಅಥವಾ ಮೊಳೆ ಹೊಡೆಯಲು ಒಂದು ರಾಗಿ ಕಾಳಿನಷ್ಟು ಜಾಗವಿರದೆ ಕಿತ್ತು ಹೋಗಿರುತ್ತಿದ್ದವು; ಅವು ಬಡತನವನ್ನು ಪ್ರತಿಬಿಂಬಿಸುತ್ತದೆ.

ಅಸ್ಪೃಶ್ಯತೆ ಎಂಬುದು ನಮ್ಮ ಸಮಾಜದಲ್ಲಿ ಸಾವಿರಾರು ವರ್ಷಗಳ ಹಿಂದಿನಿಂದಲೂ ಬೆಳೆದು ಬಂದ ಒಂದು ಸಾಮಾಜಿಕ ಪಿಡುಗು. ಇದು ರಾಮಯ್ಯ ಅವರಂತಹ ವ್ಯಕ್ತಿಯನ್ನು ಬಿಟ್ಟಿಲ್ಲ ಎನ್ನುವುದನ್ನು ನಾವು ಇಲ್ಲಿ ಕಾಣಬಹುದಾಗಿದೆ. ''ನಮ್ಮೂರು ತುಂಬಾಡಿ ಗೊಲ್ಲಹಳ್ಳಿಯ ಬೆನ್ನಿಗೇ ಇರುವ ವಡ್ಡಗೆರೆ ವೀರನಾಗಮ್ಮನ ಗುಡಿಯೊಳಕ್ಕೆ ನಮ್ಮ ಮಣೆಗಾರ ಜಾತಿಯರಿಗೆ ಇವೊತ್ತಿಗೂ ಪ್ರವೇಶವಿಲ್ಲ. ಅದರಂತೆಯೇ ಬುಕ್ಕಾಪಟ್ಟಣದ ದೊಡ್ಡಮ್ಮನ ಗುಡಿಗೂ ಮಣೆಗಾರರಿಗೆ ಪ್ರವೇಶವಿಲ್ಲ.''[೬] ಅಂದರೆ ಗುಡಿಗೆ ಪ್ರವೇಶವಿಲ್ಲ ಎಂಬುದು ಕನಕದಾಸರನ್ನು ಸಹ ಗುಡಿಯೊಳಕ್ಕೆ ಪ್ರವೇಶಿಸಲು ಬಿಡಲಿಲ್ಲ. ಆದರೆ ಇಂಥ ವೈಜ್ಞಾನಿಕವಾಗಿ ಮುಂದುವರೆದಿರುವ ನಾಡಿನಲ್ಲಿ ಈ ರೀತಿಯ ಅಸ್ಪೃಶ್ಯತೆಯನ್ನು ಕಾಣುವುದು ಒಂದು ಮೌಢ್ಯವೆಂದು ಹೇಳಬಹುದು. ಪ್ರಕೃತಿ ಸಹಜ ವಸ್ತುಗಳ ಮೇಲೂ ಅಸ್ಪೃಶ್ಯತೆ ಎನ್ನುವ ಪಟ್ಟಣವನ್ನು ಕಟ್ಟುವುದು ಎಷ್ಟು ಯೋಗ್ಯ ಎನಿಸುತ್ತದೆ. ದಲಿತರನ್ನು ಅಸ್ಪೃಶ್ಯರೆಂದು ಗುರ್ತಿಸಿಕೊಂಡಿರುವುದನ್ನು ನಾವು ಕಾಣಬಹುದಾಗಿದೆ. ಇದಕ್ಕೆ ರಾಮಯ್ಯನವರು ದಾಖಲಿಸುವ ಪ್ರಸಂಗ ಮುಖ್ಯವಾಗುತ್ತದೆ; ''ನಮ್ಮ ಹಳ್ಳಿಯಲ್ಲಿದ್ದ ಜೈನರ ಪಾರ್ಶ್ವನಾಥಪ್ಪ ಮತ್ತು ಜ್ಯೋತ್ಯಮ್ಮನವರ ಮನೆಗಳಲ್ಲಿದ್ದ ಅಂಗಡಿಗಳಿಗೆ ನಾವು ಸಾಮಾನು ಕೊಳ್ಳಲು ಹೋದರೆ ಅವರು ತೊಣಚೆ ಹತ್ತಿದ ಹಸು ಎಗರಾಡುವಂತೆ ನಮ್ಮನ್ನು ನೋಡಿದ ಕೂಡಲೇ ಎಗರಾಡುತ್ತಿದ್ದರು. ಎದ್ದು ಓಡಾಡಲಾರದಷ್ಟು ಸ್ಥೂಲದೇಹಿಯಾಗಿದ್ದ ಜ್ಯೋತಮ್ಮನವರ ತಾಯಿ ಸಿರಿದೇವಮ್ಮನವರು ತಾವು ಕುಳಿತಿದ್ದ

ಸ್ಥಳದಿಂದಲೇ ಒಂದು ಉದ್ದನೆಯ ಬಿದಿರು ಕೋಲಿಗೆ ತಟ್ಟೆಯನ್ನು ಸಿಕ್ಕಿಸಿ ಕುಂತಲ್ಲಿಂದಲೇ ಕಿಟಕಿಯಲ್ಲಿ ನಿಂತಿರುತ್ತಿದ್ದ ನಮಗೆ ವ್ಯಾಪಾರ ಮಾಡುತ್ತಿದ್ದರು.”[೬]

ಅಂದಿನ ಕಾಲಕ್ಕೆ ಅಸ್ಪೃಶ್ಯತೆ ಎಂಬುದು ಎಷ್ಟು ಗಾಢವಾಗಿ ಆಚರಣೆಯಲ್ಲಿತ್ತು ಎಂಬುದು ತಿಳಿಯುತ್ತದೆ. ಅಂದರೆ ಇಂದಿನ ಕಾಲದಲ್ಲಿ ಸಹ ಕೆಲವೊಂದು ಹಳ್ಳಿಯಲ್ಲಿ ಈ ಸ್ಥಿತಿಯನ್ನು ನಾವು ಕಾಣಬಹುದು. ವಿದ್ಯಾವಂತರೂ ಪಟ್ಟಣಗಳಲ್ಲಿ ಈ ವ್ಯವಸ್ಥೆ ಸ್ವಲ್ಪ ಸುಧಾರಿಸಿದೆ ಎಂದು ಕಾಣಬಹುದಾಗಿದೆ. ಅಂದಿನಷ್ಟು ಇಂದಿನ ಕಾಲದಲ್ಲಿ ಅಸ್ಪೃಶ್ಯತೆಯ ಬಗ್ಗೆ ಚಕಾರವನ್ನು ಎತ್ತುವ ದನಿಯನ್ನು ಕಾಣುವುದು ಅಪರೂಪವೆಂದೆನಿಸುತ್ತದೆ.

ರಾಮಯ್ಯನವರು ತಮ್ಮ ಬಾಲ್ಯದಲ್ಲಿ ದೇವರು ಎಂದರೆ ಬಹಳ ಗೌರವದಿಂದ ಕಾಣುತ್ತಿದ್ದರು. ಅಸ್ಪೃಶ್ಯತೆಯ ಕರಾಳ ಛಾಯೆಯನ್ನು ಗುರ್ತಿಸಿ ಹೇಳುವುದಕ್ಕೆ ಇದು ನಿದರ್ಶನವಾಗಿದೆ.

“ನಮ್ಮೂರ ಗುಡಿಯನ್ನು ಕಟ್ಟಿದೋರು ಯಾರಣ್ಣ?
ಕಟ್ಟಿದಾ ನಮ್ಮನ್ನೆಲ್ಲ ಹೊಲೆಮಾದಿಗ್ರಂತಾರೆ
ನಾವೇ ಕಟ್ಟಿದಾ ಗುಡಿಗೆ ನಾವೇ ಹೋಗಂಗಿಲ್ಲ
ಯಾಕಂತ ಕೇಳಿದರೆ ನೀವು ಹೊಲೆಮಾದಿಗರಂತಾರೆ.”[೮]

ಈ ರೀತಿಯ ಪ್ರಚಾರದ ಹಾಡನ್ನು ದಾಖಲಿಸುತ್ತಾರೆ. ದಲಿತರಿಗೆ ದೇವಸ್ಥಾನದ ಪ್ರವೇಶ ದೊರಕಿಲ್ಲ. ದೊರಕಿದರೆ “ಬಡವನಿಗೆ ನಿಧಿ ಕಂಡಂತೆ.” ಆದರೆ ಇಂಥ ಪ್ರಸಂಗ ರಾಮಯ್ಯನವರ ಬದುಕಿನಲ್ಲಿ ಆಗಿರುವುದು ಕಂಡುಬರುತ್ತದೆ.

ಜಾತೀಯತೆಯನ್ನು ನಾವು ಇಲ್ಲಿ ತೀವ್ರವಾದ ರೀತಿಯಲ್ಲಿ ಕಾಣಲು ಬರುವುದಿಲ್ಲ. ಒಂದೇ ಒಂದು ಪ್ರಸಂಗ; ತನ್ನ ಅಣ್ಣನ ಸಾವಿನ ಸುದ್ದಿಯನ್ನು ತಿಳಿದ ರಾಮಯ್ಯ ಅವರ ಶಾಲೆಯಲ್ಲಿ ಇವರ ಅಣ್ಣ ಬಹಳ ಹೆಸರುವಾಸಿಯಾದ ವ್ಯಕ್ತಿ. ಇಂಥ ವ್ಯಕ್ತಿಯನ್ನು ಮುಂದೆ ಬರಲು ಕೊಡಬಾರದೆಂಬ ಮನಸ್ಥಿತಿಯ ಶಿಕ್ಷಕರು ಇದ್ದರೆಂದು ದಾಖಲಿಸುತ್ತಾರೆ. ತನ್ನ ಅಣ್ಣ ಫೇಲಾಗುತ್ತಿದ್ದ ಸಂಗತಿ ಮನೆಯಲ್ಲಿ ತಿಳಿಯುತ್ತಿರಲಿಲ್ಲ. ಎಲ್ಲ ಅನಕ್ಷರಸ್ಥರು “ಇದಕ್ಕೆ ಕೆಲವು ಜಾತಿವಾದಿ ಶಿಕ್ಷಕರ ಕರಾಮತ್ತೆಂದು ತಿಳಿದಿದ್ದ ಅಣ್ಣ ಒಳಗೊಳಗೆ ಬಯ್ಯುತ್ತಿದ್ದ. ಆದರೂ ಅವನು ಅಸಹಾಯಕನಾಗಿದ್ದ.”[೯]

ಈ ರೀತಿಯ ಕಾರಣದಿಂದ ತನ್ನ ಅಣ್ಣನ ಸಾವು ಸಂಭವಿಸಿದುದನ್ನು ಕಾಣಬಹುದಾಗಿದೆ. ಇದೊಂದು ಪ್ರಸಂಗ ಮಾತ್ರ ಜಾತೀಯತೆಯ ಕುಮ್ಮಕ್ಕಿನಿಂದ ತನ್ನ ಅಣ್ಣ ಸತ್ತ ಸುದ್ದಿಯನ್ನು

ಹೇಳುವ ಸಂದರ್ಭದಲ್ಲಿಯೂ ಯಾವುದೇ ರೀತಿಯ ಆಕ್ರೋಶ ಭಾವವನ್ನು ಪ್ರಕಟಿಸದೇ ಇರುವುದು ಗೋಚರಿಸುತ್ತದೆ.

"ಅಸ್ಪೃಶ್ಯತೆಯನ್ನು ಆಚರಿಸುವ ಘೋಷಿಸುವ ಜಾತಿಗಳ ವಿರುದ್ಧ ಕೂಡ ರಾಮಯ್ಯನವರು ತೀರ ಕಹಿಯಾಗಲಾರರು. ಇದಕ್ಕೆ ತುಂಬಾಡಿ ಗ್ರಾಮದ ಸುತ್ತಲಿನ ಪರಿಸರದಲ್ಲಿ ಇದ್ದ ವಿಚಿತ್ರ ಸಾಮರಸ್ಯವೂ ಕಾರಣವಿರಬಹುದು. ದಲಿತರ ಮೇಲೆ ಹಲ್ಲೆ ಎಂಬುದ್ದನ್ನೇ ಕೇಳರಿಯದ ಊರು ತುಂಬಾಡಿ. ಒಂದೂ ಮುಸ್ಲಿಂ ಕುಟುಂಬವಿರದ ಈ ಊರಿನಲ್ಲಿ ಬಾಬಯ್ಯನ ಜಾತ್ರೆಯನ್ನು ಎಲ್ಲ ಜನಾಂಗದವರೂ ಆಚರಿಸುತ್ತಾರೆ. ಈ ಹಳ್ಳಿಯಲ್ಲಿ ಲಿಂಗಾಯಿತರು ಮತ್ತು ಜೈನರನ್ನು ಬಿಟ್ಟರೆ ಉಳಿದೆಲ್ಲ ಜಾತಿಗಳು ಪರಸ್ಪರ ಎಲ್ಲರನ್ನು ಅಣ್ಣ, ತಮ್ಮ, ತಂಗಿ, ಚಿಕ್ಕಪ್ಪ, ತಾತ, ಅತ್ತೆ ಎಂದೇ ಸಂಭೋದಿಸುತ್ತಾರೆಂದು ರಾಮಯ್ಯನವರು ಬರೆಯುತ್ತಾರೆ."[೧೦]

"ಇಲ್ಲಿ ಕುರುಬ ಜಾತಿಗೆ ಸೇರಿದ ಬೀರಯ್ಯ ಮತ್ತು ಆತನ ಹೆಂಡತಿ ಮುತ್ತಮ್ಮ, ಪುಟ್ಟರಂಗಯ್ಯ, ನರಸಮ್ಮನವರು ಸಂಪ್ರದಾಯದಂತೆ ನನ್ನನ್ನು ಅಳಿಯಾ ಎಂದು ಕೂಗುತ್ತಿದ್ದರು." ಎಂದು ಹೇಳಿಕೊಂಡಿದ್ದಾರೆ. ಅಂದರೆ ಜಾತೀಯತೆ ಎಂಬುದು ಇವತ್ತಿನ ಕಾಲಕ್ಕೆ ಸ್ವಲ್ಪ ಮಾಸಿ ಹೋಗುತ್ತಿರುವುದ್ನನು ಕಾಣಬಹುದು.

"ಇಂಥ ಪ್ರಸಂಗಗಳನ್ನು ವೈಭವೀಕರಿಸಿ ತಮ್ಮ ಸುತ್ತಲೂ ಅಸ್ಪೃಶ್ಯತೆ ಇಲ್ಲವೆಂದೇನೂ ಸೂಚಿಸುವುದಿಲ್ಲ. ಅಂದರೆ ಮುಖ್ಯವಾಗಿ ಜೈನರ ಅಂಗಡಿಗೆ ಹೋದರೆ ಅವರು ಕೈಯಿಂದ ಸಾಮಾನು ನೀಡದೆ ಉದ್ದನೆಯ ಕೋಲಿನಿಂದ ವ್ಯಾಪಾರ ಮಾಡುತ್ತಿದ್ದರು ಎಂದು ದಾಖಲಿಸುತ್ತಾರೆ. ಇಲ್ಲಿ ಜಾತೀಯತೆಯ ಸೋಗನ್ನು ತಮ್ಮ ಮೆಲ್ಲನೆಯ ಮಾತುಗಳಿಂದ ಹೇಳುವಲ್ಲಿ ನಮಗೆ ಇವರು ವಿಶಿಷ್ಟರಾಗುತ್ತಾರೆ."[೧೧]

ಆದರೆ ಈ ಬಗೆಯ ಅನುಭವದ ನಡುನಡುವೆಯೇ ಸವರ್ಣೀಯರು ತಮ್ಮ ನರಕವನ್ನು ಮೀರುವ ಉದಾತ್ತವಾದ ಬಗೆಗಳನ್ನು ಇಲ್ಲಿ ನೆನೆಯುವಂತಹ ಪ್ರಸಂಗವನ್ನು ಕಾಣಬಹುದಾಗಿದೆ. "ವಡ್ಡಗೆರೆಯಲ್ಲಿ ಒಕ್ಕಲಿಗರ ಹುಲಿಯಪ್ಪಜ್ಜ ಎಂಬುವವರು ಊರುಗೋಲು ಹಿಡಿದು ಮಕ್ಕಳಿಗೆಲ್ಲಾ ಸಮಾನವಾಗಿ ಉಪ್ಪಿಟ್ಟು ಹಂಚುವಂತೆ ನೋಡಿಕೊಳ್ಳುತ್ತಿದ್ದರು. ಹುಲಿಯಪ್ಪಜ್ಜನಿಗೆ ಮಕ್ಕಳ ಮೇಲೆ ಪ್ರೀತಿ ಎಷ್ಟಿತ್ತೆಂದರೆ ಮನೆಯಲ್ಲಿ ತನಗೆ ಕೊಟ್ಟಿದ್ದ ರೊಟ್ಟಿಯನ್ನು ತಿನ್ನದೆ; ಬಟ್ಟೆಯಲ್ಲಿ ಮುಚ್ಚಿಟ್ಟುಕೊಂಡು ಬಂದು ಹೊಲೆಮಾದಿಗರ ಹಟ್ಟಿಯ ಬಳಿ ನಿಂತು ಮಕ್ಕಳನ್ನು ಕರೆದು ರೊಟ್ಟಿ ಹಂಚುತ್ತಿದ್ದರು."[೧೨]

ಈ ರೀತಿಯ ಮನುಷ್ಯ ಅಂದಿನ ಸಾಮಾಜಿಕ ಸ್ಥಿತಿಯಲ್ಲಿ ಇಂಥ ಒಂದು ಅನ್ಯೂನ್ಯತೆಯ ಭಾವವನ್ನು ಪ್ರಕಟಿಸಿ ತೋರಿಸಿದ್ದು, ಒಂದು ಕೀರ್ತಿ ಪತಾಕೆಯನ್ನು ಅಂದಿನ ಸಮಾಜದ ಸ್ಥಿತಿಗೆ ಕನ್ನಡಿ ಹಿಡಿದಂತಾಗಿದೆ

ದಲಿತ ಜನಾಂಗದ ಸ್ಥಿತಿಯಲ್ಲಿ ಶಿಕ್ಷಣ ಎನ್ನುವುದು ಒಂದು ರೀತಿಯ ಸುಲಭವಾದ ಮಾರ್ಗವಾಗಿರಲಿಲ್ಲ. ಅಂದರೆ ಬರೀ ಓದಿನ ಕಡೆಗೆ ಗಮನ ಹರಿಸಿದರೆ ಉಪವಾಸ ಇರಬೇಕಾದ ಸ್ಥಿತಿಯಲ್ಲಿಯ ತಮ್ಮ ಓದನ್ನು ಮುಂದುವರೆಸುವುದು ಒಂದು ದೊಡ್ಡ ಸಾಧನೆ. ಬಡತನದ ಬೇಗೆಯಲ್ಲಿ ಇರುವ ದಲಿತ ಜನಾಂಗದ ಸ್ಥಿತಿಯಲ್ಲಿ ಶಿಕ್ಷಣ ಎನ್ನುವುದು ಕಬ್ಬಿಣದ ಕಡಲೆಯಂತೆ ಇರುತ್ತಿತ್ತು. ಸಾಮಾನ್ಯವಾಗಿ ದಲಿತವರ್ಗದ ಜನರಲ್ಲಿ ಒಂದೇ ಉದ್ಯೋಗದಲ್ಲಿ ಸೀಮಿತವಾಗದೇ ಅದರ ಜೊತೆಗೆ ಬೇರೆ ಬೇರೆ ಕೆಲಸ ಕಾರ್ಯದಲ್ಲಿ ತೊಡಗಿಕೊಂಡು ಓದುವ ಕಾರ್ಯವನ್ನು ಕೈ ಬಿಡದ ಎಷ್ಟೋ ಜನ ದಲಿತ ಲೇಖಕರನ್ನು ನಾವು ಕಾಣಬಹುದು. ಬಡತನದಿಂದ ಬಂದ ವ್ಯಕ್ತಿಗಳು ದನ, ಕುರಿ, ಹಂದಿ ಮುಂತಾದವುಗಳಾದ ಉಪ ಕಸುಬುಗಳನ್ನು ಮಾಡಿಕೊಂಡು ತಮ್ಮ ಮನೆಯ ಜೀವನ ನಡೆಸುವುದರೊಂದಿಗೆ ಓದನ್ನು ಮುಂದುವರೆಸಿ ಸಾಧಿಸಿ ತೋರಿಸಿರುವುದು ಈ ಕೃತಿಯಲ್ಲಿ ಕಾಣುತ್ತದೆ.

ಸ್ವಾತಂತ್ರ್ಯ ಬಂದ ನಂತರದ ದಿನಗಳಲ್ಲಿ ಬರಗಾಲ ಪರಿಸ್ಥಿತಿಗಳು ಕಾಣಿಸಿಕೊಂಡು ಇವು ವ್ಯಕ್ತಿ, ಪರಿಸರ, ಸಮಾಜದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತವೆ. ಅಂಥ ವೇಳೆಯಲ್ಲಿ ದಲಿತ ಜನಾಂಗ ಚೇತರಿಸಿಕೊಳ್ಳುವುದು ಕಷ್ಟಸಾಧ್ಯವಾದ ಕೆಲಸವಾಗಿತ್ತು. ಇಂಥ ಒಂದು ಬರಗಾಲದ ಪರಿಸ್ಥಿತಿ ರಾಮಯ್ಯನವರ ಬದುಕಿನಲ್ಲಿ ಕಾಣಿಸಿಕೊಂಡಿತು. ಇವರೇ ಹೇಳುವಂತೆ 'ಬಟಾಣಿಬರ' ಅನ್ನ ಸಿಗದ ಸ್ಥಿತಿಯಲ್ಲಿ; ಹೆಚ್ಚಾಗಿ ಸಿಗುತ್ತಿದ್ದ ಬಟಾಣಿಯನ್ನು ತಿನ್ನುವಂಥ ಸ್ಥಿತಿಗೆ ಅಂದಿನ ಗ್ರಾಮಗಳ ಪರಿಸ್ಥಿತಿ ಇತ್ತು ಎಂದರೆ ಇವತ್ತಿನ ಕಾಲದಲ್ಲಿ ಊಹಿಸಲೂ ಸಾಧ್ಯವಿಲ್ಲ. ಮನೆಗಳಲ್ಲಿ ಧಾನ್ಯ ಇಲ್ಲದ ಜನತೆ ಊಟಕ್ಕೆ ಹಾಹಾಕಾರವನ್ನು ಮಾಡುವ ಸ್ಥಿತಿಯೂ ಇತ್ತು.

"ಆಗ ಮನೆಯಲ್ಲಿ ಒಂದು ಹೊತ್ತಿನ ಊಟಕ್ಕೂ ಗತಿಯಿರಲಿಲ್ಲ. ಆದ್ದರಿಂದ ಸ್ಕೂಲಿನಲ್ಲಿ ಕೊಡುತ್ತಿದ್ದ ಉಪ್ಪಿಟ್ಟನ್ನೇ ನಾನು ಬಲವಾಗಿ ನೆಚ್ಚಿದ್ದೆ. ಸ್ಕೂಲಿನಲ್ಲಿ ಉಪ್ಪಿಟ್ಟು ಯಾವ ರೀತಿ ಮಾಡುತ್ತಿದ್ದರೆಂದರೆ, ಅದಕ್ಕೆ ಎಣ್ಣೆ ಈರುಳ್ಳಿಯ ವಾಸನೆಯನ್ನು ತೋರಿಸದೆ ಬರಿ ನೀರಿನಲ್ಲಿ ಮಾತ್ರ ಬೇಯಿಸಿ ಕೊಡುತ್ತಿದ್ದರು. ಅನೇಕ ಸಾರಿ ಹುಳುಗಳು ಸಿಗುತ್ತಿದ್ದವು. ಆದರೆ ಗತಿಯಿಲ್ಲದಿದ್ದರಿಂದ ನಿರ್ವಾಹವಿಲ್ಲದೆ ಹುಳುಗಳನ್ನು ತೆಗೆದು ಹಾಕಿ ತಿನ್ನುತ್ತಿದ್ದೆ."[೧೩]

ಇಂಥ ಸ್ಥಿತಿಯಲ್ಲಿ ರಾಮಯ್ಯನಂತಹವರು ಮುಂದೆ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತನಾಗುವ ತನಕದ ಕತೆಯಲ್ಲಿ ಸ್ವಾತಂತ್ರ್ಯೋತ್ತರ ದಲಿತ ವ್ಯಕ್ತಿಗಳ ಬೆಳವಣಿಗೆಯ ಕತೆಯೂ ಬೆರೆತು ಹೋಗುತ್ತದೆ. ಅನೇಕ ಲೇಖಕರಂತೆ ಇವರು ಕೂಡ ಬಾಲ್ಯದ ಬಗೆಗೆ ಮಾತ್ರ ಗಾಢವಾಗಿ ಬರೆದು ನಂತರದ ಕತೆ ಹೇಳುವಾಗ ಸುಮ್ಮನೆ ಓಡಿ ಹೋಗುತ್ತಾರೆ.

ದಲಿತ ಜನಾಂಗವು ಹೋರಾಟವನ್ನು ಒಂದು ಅಸ್ತ್ರವಾಗಿ ಮಾಡಿಕೊಂಡರು. ಹೋರಾಟವೆಂದರೆ ಲೇಖನಿಯ ಮೂಲಕ ಜನತೆಯನ್ನು ಪ್ರಚೋದನೆಗೊಳಿಸುವುದು. ಇದರಿಂದ ಸ್ವಲ್ಪಮಟ್ಟಿನ ಕ್ರಾಂತಿಗೆ ನಾಂದಿ ಹಾಡಿದಂತೆ ಇಂದಿನ ದಲಿತ ಸಾಹಿತ್ಯ ಕಾಣುತ್ತಿದೆ. ದಲಿತ

ವ್ಯಕ್ತಿಗಳು ಕ್ರಾಂತಿ ಹೋರಾಟಕ್ಕೆ ಇಳಿಯಲು ಅಲ್ಲಿನ ಸಮಾಜದಲ್ಲಿನ ವ್ಯವಸ್ಥೆ ಮುಖ್ಯವಾಗುತ್ತದೆ. ವ್ಯವಸ್ಥೆ ಚೆನ್ನಾಗಿ ಇದ್ದರೆ ಮಾತ್ರ ಹೋರಾಟಕ್ಕೆ ಆಸ್ಪದವಿರುವುದಿಲ್ಲ. ಆದರೆ ಅನಿವಾರ್ಯವಾಗಿ ವ್ಯಕ್ತಿಗಳನ್ನು ಹೋರಾಟಕ್ಕೆ ಪರೋಕ್ಷವಾಗಿ ಸಮಾಜವೇ ಸೃಷ್ಟಿಸುತ್ತದೆ.

ಈ ಆತ್ಮಕತೆಯಲ್ಲಿ ರಾಮಯ್ಯನವರು ಹೋರಾಟಗಾರನಾಗಿ ರೂಪುಗೊಳ್ಳಲು ತಮ್ಮ ವಿದ್ಯಾಭ್ಯಾಸದ ಸಂದರ್ಭಗಳು ಇವರ ಮೇಲೆ ಬಹಳ ಪ್ರಭಾವ ಬೀರಿರುವುದನ್ನು ಕಾಣಬಹುದು. ತಾವು ಬಾಲ್ಯದಲ್ಲಿ ಹಾಸ್ಟೆಲ್ ಸೇರಿದ್ದು, ಅಲ್ಲಿಯ ಅವ್ಯವಸ್ಥೆಯನ್ನು ಕಂಡಿದ್ದರಿಂದ ಹೋರಾಟಕ್ಕೆ ತೊಡಗುವ ಪ್ರವೃತ್ತಿ ಕಾಣಿಸಿಕೊಳ್ಳುತ್ತದೆ.

ಅಂದಿನ ಸಮಾಜದಲ್ಲಿ ನಡೆಯುತ್ತಿದ್ದ ದಲಿತರ ಮೇಲಿನ ದೌರ್ಜನ್ಯವನ್ನು ತಡೆಯಲು ವ್ಯಕ್ತಿಗಳು ದಲಿತ ಸಂಘರ್ಷ ಸಮಿತಿಯನ್ನು ಪ್ರಾರಂಭಿಸಿದರು. ಆದರೆ ತುಮಕೂರಿನ ಪ್ರಾಂತ್ಯದಲ್ಲಿ ಇದರ ನೇತಾರನಾಗಿ ಕಾರ್ಯ ನಿರ್ವಹಿಸಲು ರಾಮಯ್ಯನಂಥ ವ್ಯಕ್ತಿ ಸೇರಿರುವುದು ವ್ಯವಸ್ಥೆ ಎಂಥ ವ್ಯಕ್ತಿಗಳನ್ನು ಏನು ಬೇಕಾದರೂ ಮಾಡಬಹುದೆಂಬುದಕ್ಕೆ ಈ ಕಥನಕಾರರು ನಿದರ್ಶನವಾಗಿ ನಮಗೆ ಕಾಣಿಸುತ್ತಾರೆ.

ರಾಮಯ್ಯನವರು ತಮ್ಮ ಬಾಲ್ಯದಲ್ಲಿ ಕಂಡುಂಡಂತಹ ಸ್ಥಿತಿಗಳನ್ನು ದಾಖಲಿಸುವುದರಲ್ಲಿ ಒಂದು ವಿಶಿಷ್ಟತೆಯನ್ನು ಮೆರೆದಿದ್ದಾರೆ. ತಾವು ಯಾವುದಕ್ಕೂ ಮನಸ್ಸನ್ನು ಕಹಿ ಮಾಡಿಕೊಳ್ಳದೇ ಬಹಳ ನಿರಾಳವಾಗಿ ಸಮಾಜವನ್ನು ನೋಡುವ ಸ್ಥಿತಿ ಕಾಣುತ್ತದೆ. ಅನುಭವಿಸಿದ ನೋವುಗಳಿಗೆ ಪ್ರತೀಕಾರವಾಗಿ ಯಾವುದೇ ದ್ವೇಷ, ರೊಚ್ಚು ಮುಂತಾದ ಪ್ರತಿಭಟನೆಯ ಧ್ವನಿಗಳನ್ನು ಆಡದೇ ತಮ್ಮ ಬರಹದ ಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಒಬ್ಬ ನುರಿತ ಲೇಖಕರಾಗಿ ಕಾಣಿಸಿಕೊಳ್ಳುತ್ತಾರೆ. ಸಾಹಿತ್ಯದ ಬರವಣಿಗೆ ಇಲ್ಲಿಂದ ಪ್ರಾರಂಭವಾಗುತ್ತದೆ. ಆದರೂ ಯಾವುದೇ ವಿವಾದಕ್ಕೆ ಆಸ್ಪದ ನೀಡದಂತೆ ತಮ್ಮ ಬರವಣಿಗೆಯಲ್ಲಿ ಯಶಸ್ವಿಯಾಗಿದ್ದಾರೆ.

"ಇವೆಲ್ಲಕ್ಕಿಂತ ಹೆಚ್ಚಾಗಿ ಇವತ್ತಿನ ಸಂದರ್ಭವನ್ನು, ರಾಮಯ್ಯನವರಂಥ ಹಿನ್ನೆಲೆಯಿಂದ ಬಂದ ವ್ಯಕ್ತಿಯೊಬ್ಬ ಹೇಗೆ ಪರಿಭಾವಿಸಬೇಕು ಅನ್ನುವುದನ್ನು ಹೇಳುತ್ತದೆ. ವೈಯಕ್ತಿಕ ಅನುಭವಗಳಿಗೆ ಅಂತ ಮಹತ್ವವೇನೂ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜಕೀಯ ಧೋರಣೆ, ಸಮೂಹ ಪ್ರಜ್ಞೆ ಒಟ್ಟಾರೆ ಸಾಂಸ್ಕೃತಿಕ ನಿಲುವು ಇವುಗಳೇ ಒಬ್ಬ ವ್ಯಕ್ತಿಯ ವೈಚಾರಿಕತೆಯನ್ನು ಪ್ರತಿಬಿಂಬಿಸುವ ಹಾಗೆ ಕಾಣಿಸುತ್ತದೆ."[೧೪]

ಅಂದರೆ ವ್ಯಕ್ತಿಯ ನೆನಪುಗಳೇ ಮುಖ್ಯವಾಗುತ್ತವೆ. ಏಕೆಂದರೆ ಯಾವುದೇ ವ್ಯಕ್ತಿ ಭೂತಕಾಲವನ್ನು ತಿಳಿಯದೆ ವರ್ತಮಾನ ಕಾಲವನ್ನು ಅರಿಯುವುದು ತುಂಬಾ ಕಷ್ಟವಾಗುತ್ತದೆ. ಆಧುನಿಕ ಕಾಲಕ್ಕೆ ಕುವೆಂಪು ಅವರ ಅನುಭವಗಳು ಸ್ವಾತಂತ್ರ್ಯ ಪೂರ್ವದವುಗಳು. ಅಂದಿನ

ಕಾಲದಿಂದ ಇಂದಿನ ಕಾಲದವರೆಗೆ ಪ್ರಮುಖವಾಗಿ ತಾವು ಕಂಡ ಅನುಭವಗಳನ್ನು ಸಾಹಿತ್ಯವಾಗಿ ವರ್ತಮಾನಕ್ಕೆ ಒಗ್ಗುವಂತೆ ಸೃಷ್ಟಿಸಿದ್ದರಿಂದಲೇ ಇವತ್ತಿಗೂ ನಮಗೆ ಮಹತ್ವರೆನಿಸುತ್ತಾರೆ.

"ಸಿದ್ಧಲಿಂಗಯ್ಯ, ದೇವನೂರು ಮಹಾದೇವ ಮೊದಲಾದವರನ್ನು ದಲಿತ ಸಂಘರ್ಷ ಸಮಿತಿಯ ಜೊತೆಜೊತೆಗೆ ಗುರುತಿಸುವ ಪ್ರಯತ್ನ ನಡೆದಿದ್ದರೂ ಅವರ ಸೃಜನಶೀಲ ಬರವಣಿಗೆಯನ್ನು ಬೇರೆ ಬೇರೆ ನೋಡುವುದಕ್ಕೆ ಸಹಾಯ ಮಾಡುತ್ತದೆ. ಆದರೆ ಒಬ್ಬ ಸೃಜನಶೀಲ ಲೇಖನವಲ್ಲದ ವ್ಯಕ್ತಿಯೊಬ್ಬ ಒಂದು ಸಂಸ್ಥೆಯ ಮೂಲಕ, ಒಂದು ಸಿದ್ಧಾಂತದ ಮೂಲಕವೇ ತನ್ನನ್ನು ಗುರುತಿಸಿಕೊಳ್ಳಬೇಕಾಗಿದೆ."[೧೫]

ಸೃಜನಶೀಲ ಲೇಖಕ ಮಾತ್ರ ಇಂಥದರಲ್ಲಿ ಯಶಸ್ವಿಯಾಗುತ್ತಾನೆ ಎಂಬುದನ್ನು ರಾಮಯ್ಯನವರು ತಮ್ಮ ಪ್ರಾರಂಭದ ಕೃತಿಯಾದ "ಮಣೆಗಾರ" ಆತ್ಮಕಥನದಲ್ಲಿ ಅಂಥ ಅಪವಾದವನ್ನು ದಾಟಿ ಒಬ್ಬ ಪ್ರಭುದ್ದ ಸೃಜನಶೀಲ ಬರಹಗಾರರೆನಿಸಿಕೊಂಡಿದ್ದಾರೆ. "ರಾಮಯ್ಯನಂಥವರು ತಾವು ನಂಬಿದ, ಅನುಸರಿಸಿದ ಸಿದ್ಧಾಂತಗಳನ್ನು ತಮ್ಮ ನೆನಪುಗಳ ಮೇಲೆ ಹೇರಲು ಯತ್ನಿಸದೆ ಇರುವುದು ಕುತೂಹಲದ ಚಳುವಳಿಯ ಮುಖಾಂತರ ಅವರು ರೂಪಿಸಿಕೊಂಡ ವ್ಯಕ್ತಿತ್ವ. ಅವರ ಬಾಲ್ಯದ ನೆನಪುಗಳನ್ನಾಗಲಿ, ಯೌವನದ ಅನುಭವಗಳನ್ನಾಗಲಿ ಪ್ರಭಾವಿಸಿಲ್ಲ. ಅದೇ ಇವರ ಬರಹದ ವೈಶಿಷ್ಟ್ಯ ಕೂಡ. ನಮ್ಮಲ್ಲಿ ನೋವುಗಳನ್ನು ದಾಖಲಿಸುವಾಗ ಕೂಡ ಹಾಸ್ಯ ಪ್ರಜ್ಞೆ ಚಿಮ್ಮುತ್ತಿರಬೇಕು. ಅಪಮಾನದ ವಿವರಗಳನ್ನು ಲವಲವಿಕೆಯಿಂದ ಬರೆಯಬೇಕು ಎಂದು ನಿರೀಕ್ಷಿಸುವವರಿದ್ದಾರೆ. ಆದರೆ ಈ ಆತ್ಮಕಥನದಲ್ಲಿ ರಾಮಯ್ಯ ಅವರಿಗೆ ತಿಳಿಹಾಸ್ಯ ತಾನೇ ತಾನಾಗಿ ಸಿದ್ಧಿಸಿದೆ, ಅದು ಅನುಭವಗಲ ತೀವ್ರತೆಯನ್ನು ವೈಭವೀಕರಿಸುವುದಿಲ್ಲ, ಅನುಮಾನಿಸುವಂತೆ ಮಾಡುವುದಿಲ್ಲ, ಇಷ್ಟು ಸರಳವಾಗಿ ಇಂಥ ದಟ್ಟ ಅನುಭವಗಳನ್ನು ಹೇಳುವುದಕ್ಕೆ ಸಾಧ್ಯವೇ ಎಂದು ಅಚ್ಚರಿ ಮೂಡಿಸುತ್ತವೆ."[೧೬]

ರಾಮಯ್ಯನವರು ತಮ್ಮ ಆತ್ಮದ ಕೆಲವು ಮಾತುಗಳನ್ನು ಹೇಳುವ ಸಂದರ್ಭದಲ್ಲಿ ಸಮಾಜದ ಕಡೆಗೆ ತಮ್ಮ ಪ್ರೀತಿಯ ಭಾವದಿಂದ ನೋಡುವುದು, ಎಂಥ ಕಹಿ ಅನುಭವವನ್ನು ಮುಗುಳು ನಗೆಯಿಂದ, ಸ್ಮರಿಸಿಕೊಳ್ಳುವುದು ರಾಮಯ್ಯನವರ ಸೌಜನ್ಯಕ್ಕೆ ಸಾಕ್ಷಿಯಾಗಿದೆ.

"ಆ ದಲಿತ ಮಂತ್ರಿಯಾದರೂ ಬಿಸಿಲಲ್ಲಿ ಬೆಂಡಾಗಿ ತಿಮ್ಮರೆಡ್ಡಪ್ಪನ ಹೆಣವನ್ನು ಮುಂದಿಟ್ಟುಕೊಂಡು ಕುಳಿತಿದ್ದ, ನಮ್ಮನ್ನು ಸೌಜನ್ಯಕ್ಕಾದರೂ ಬಂದು ಮಾತನಾಡಿಸಲಿಲ್ಲ. ಬದಲಾಗಿ ತನ್ನ ಮಹಡಿಯ ಮೇಲೆ ನಿಂತು ಘೋಷಣೆ ಕೂಗುತ್ತಿದ್ದ ನಮ್ಮನ್ನು ಮತ್ತು ತಿಮ್ಮರೆಡ್ಡಪ್ಪನ ಹೆಣವನ್ನು ಉದ್ದೇಶಿಸಿ ಭಾಷಣ ಮಾಡಿ ಹೊರಟುಹೋದರು."[೧೭]

ಅಂದರೆ ಈ ಆತ್ಮಕತೆಯಲಿ ಇದೇ ಕೊನೆಯ ಪ್ರತಿಭಟನೆ ಎಂದು ಕಾಣಿಸುತ್ತದೆ. ಇಲ್ಲಿ ಅಂದಿನ ರಾಜಕೀಯ ಪಕ್ಷಗಳು ದಲಿತ ವ್ಯಕ್ತಿಗಳನ್ನು ಮತ ಚಲಾಯಿಸುವ ಒಂದು ಗೊಂಬೆ

೮. ಅದೇ : ಪುಟ ೬೧

೯. ಅದೇ : ಪುಟ ೭

೧೦. ಲಂಕೇಶ್ ಪತ್ರಿಕೆ : ಮಾರ್ಚ್ ೨೨ : ೨೦೦೦

೧೧. ಅದೇ : ಮಾರ್ಚ್ ೨೨ : ೨೦೦೦

೧೨. ಮಣೆಗಾರ : ಪುಟ ೪೪

೧೩. ಅದೇ : ಪುಟ ೪೪

೧೪. ದಲಿತ ಮಾರ್ಗ : ಸಂ. ಅರವಿಂದ ಮಾಲಗತ್ತಿ ಪುಟ ೩೯೭

೧೫. ಅದೇ ಪುಟ : ೩೯೭

೧೬. ಅದೇ ಪುಟ : ೩೯೭

೧೭. ಮಣೆಗಾರ : ಪುಟ ೮೨

೧೮. ಮಣೆಗಾರ : ಪುಟ ೧೦೫

೮. ಎರಡು ಆತ್ಮಕಥೆಗಳ ತೌಲನಿಕ ಅಧ್ಯಯನ

ಒಂದು ಕಾಲಘಟ್ಟದಲ್ಲಿ ಅಭಿವ್ಯಕ್ತವಾದ ಸಾಹಿತ್ಯ ಪ್ರಕಾರವೊಂದು ಆ ಕಾಲದಲ್ಲಿನ ಬರಹಗಾರರನ್ನು ಆಧರಿಸಿಯೇ ತನ್ನ ಸ್ವರೂಪವನ್ನು ನಿರ್ಧರಿಸಿಕೊಳ್ಳುತ್ತಿರುತ್ತದೆ. ಹೀಗೆ ನಿರ್ಧಾರವಾಗುವಲ್ಲಿ ಬರಹಗಾರರ ದೃಷ್ಟಿ ಧೋರಣೆಗಳು ಪ್ರಮುಖ ಮಾನದಂಡವಾಗಿ ಮಹತ್ವ ಪಡೆಯುತ್ತವೆ. ನನ್ನ ಅಧ್ಯಯನ ಕಕ್ಷೆಯಲ್ಲಿರುವ ಆತ್ಮಕತೆಗಳು ಆ ಕಾಲದ ಪ್ರಚಲಿತ ಸಂಗತಿಗಳನ್ನು ತಮ್ಮ ಆತ್ಮಕತೆಗಳಲ್ಲಿ ಹೇಳುವುದಕ್ಕೆ ಪ್ರಯತ್ನಪಟ್ಟಿರುವುದನ್ನು ಗಮನಿಸಲಾಗಿದೆ.

ಸಮಾಜವೊಂದರ ಜ್ವಲಂತ ಸಮಸ್ಯೆಗಳಾದ ಜಾತಿ, ಹಸಿವು, ಬಡತನ, ಅಸ್ಪೃಶ್ಯತೆ ಮುಂತಾದ ಅಸಮಾನತೆಗಳನ್ನು ನಾವು ಕಾಣುತ್ತೇವೆ. ಇವು ಭಾರತದ ಜನಜೀವನದ ಸಂದರ್ಭದಲ್ಲಿ ಒಂದಲ್ಲ ಒಂದು ರೀತಿಯ ಅಸ್ತವ್ಯಸ್ತತೆಗೆ ಈ ಸಮಾಜವನ್ನು ದೂಡಿವೆ. ಇಂಥ ಅಸಮಾನತೆಗಳನ್ನು ತೊಡೆದು ಹಾಕುವ ಕಾರ್ಯ ಬರಹಗಾರನದ್ದಾಗಿದ್ದಾಗ ಸಾಮಾಜಿಕ ಆಶಯದ ಧ್ವನಿ ಹೆಚ್ಚು ಗಟ್ಟಿಯಾಗಿ ಕೇಳಿಸುತ್ತದೆ.

ಸಮಾಜದ ವ್ಯವಸ್ಥೆಯೊಂದು ಆಯಾ ಕಾಲದಲ್ಲಿ ತನ್ನ ಜನವಿರೋಧಿ ಹಾಗೂ ಪ್ರತಿಗಾಮಿ ಧೋರಣೆಗಳಿಂದ ಯಾವತ್ತೂ ಬರಹಗಾರನಿಂದ ವಿರೋಧಕ್ಕೆ ಒಳಗಾಗುತ್ತಿರುತ್ತದೆ. ದಲಿತ ಸಾಹಿತ್ಯ ಸಂದರ್ಭದಲ್ಲಿ ಬಂದ ಬರಹವು ಸ್ಪಷ್ಟವಾಗಿ ವ್ಯವಸ್ಥೆಯ ವಿರೋಧವನ್ನು ಕಟ್ಟಿಕೊಂಡವು. ಇಂಥ ವಿರೋಧವು ಆರೋಗ್ಯಕರವಾದ ಮತ್ತು ಪ್ರಗತಿಪರ ಸಮಾಜ ಸ್ಥಾಪನೆಯ ಉದ್ದೇಶಕ್ಕಾಗಿ ಬಂದಂತಹದ್ದಾಗಿತ್ತು.

ಸಮಾಜದ ಜೊತೆಗೆ ಸ್ಪಷ್ಟವಾದ, ನಿರ್ಧಿಷ್ಟವಾದ ಸಂಬಂಧವನ್ನು ಘೋಷಿಸಿಕೊಂಡ ಸಾಹಿತ್ಯವಾಗಿ ದಲಿತ ಸಾಹಿತ್ಯ ಕಾಣಿಸಿಕೊಂಡಿತು. ಇದರಿಂದಾಗಿ ಸಾಮಾಜಿಕ ಅಸಮಾನತೆಗಳ ವಿರುದ್ಧ ಧ್ವನಿ ಎತ್ತುವ ಸಮಾನತೆಯ ಸಮಾಜ ಸ್ಥಾಪಿಸಲು ಇರುವ ಅಡ್ಡಿ ಆತಂಕಗಳ ಮೇಲೆ ಬೆಳಕು ಚೆಲ್ಲುವ ಕೆಲಸವನ್ನು ದಲಿತ ಸಾಹಿತ್ಯ ಸಂದರ್ಭದಲ್ಲಿ ಈ ಆತ್ಮಕತೆಗಳು ಮಾಡಿವೆ. ತನ್ನ ಬದುಕಿನೊಂದಿಗೆ ಸಮಸ್ಯೆಯನ್ನು ಅನಾವರಣ ಮಾಡುವುದು; ಅಂದಿನ ಪರಿಸ್ಥಿತಿಗೆ ಸ್ವಾಭಾವಿಕವಾಗಿಯೇ ಅನಿವಾರ್ಯವೆನಿಸಿತು.

"ಊರುಕೇರಿ" ಕೃತಿಯಲ್ಲಿ ವ್ಯಕ್ತವಾದ ಅಸ್ಪೃಶ್ಯತೆ ಮತ್ತು ಜಾತೀಯತೆ ಎಂಬುದು ಒಂದು ಸಮುದಾಯದ, ಒಂದು ಗುಂಪಿನ ಮತ್ತು ಸುತ್ತಲಿನ ಪರಿಸರದಲ್ಲಿ ಕಂಡುಬರುವುದನ್ನು ನಾವು ಕಾಣಬಹುದು. ಇಲ್ಲಿ ಪ್ರಮುಖವಾಗಿ ದಲಿತರಿಗೆ ನೀರಿನ ಸಂಬಂಧವಾಗಿ ನಡೆದ ಅಸ್ಪೃಶ್ಯತೆಯ ಕರಾಳ ಛಾಯೆಯನ್ನು ನಾವು ಗಮನಿಸಬಹುದು. ಹಾಗೆಯೇ ದಲಿತರು ನೀರು ತರಲು ಹೋದರೆ ಆ ಬಾವಿಯಲ್ಲಿ ಯಾರೂ ಮೇಲ್ವರ್ಗದ ಜನತೆ ನೀರು ತರುತ್ತಿರಲಿಲ್ಲ. ಇದೇ ರೀತಿಯ ಅಸ್ಪೃಶ್ಯತೆ, ದೇವಸ್ಥಾನಕ್ಕೆ ಪ್ರವೇಶ ನೀಡದ ಸಂದರ್ಭವನ್ನು ಗಮನಿಸಬಹುದಾಗಿದೆ.

[illegible]

ಹಾಗೆಯೇ ಸಿದ್ಧಲಿಂಗಯ್ಯ ಅವರು ತಮ್ಮ ಬಾಲ್ಯದ ದಿನಗಳಲ್ಲಿ ತನ್ನ ಅಜ್ಜಿಯೊಂದಿಗೆ ಪಕ್ಕದ ಊರಿಗೆ ಹೋಗುವ ಸಂದರ್ಭದಲ್ಲಿ ನಡೆದ ಘಟನೆಯನ್ನು ನಾವು ಗುರುತಿಸಬಹುದಾಗಿದೆ. ಮೇಲ್ವರ್ಗದವರಿಗೆ ತನ್ನ ಕೈ ತಗುಲಿದ್ದರಿಂದ ಆ ವ್ಯಕ್ತಿಯ ಪ್ರತಿಕ್ರಿಯೆ ಕೀಳು ಜಾತಿಯಲ್ಲಿ ಹುಟ್ಟಿದವನು ನನ್ನನ್ನು ಮುಟ್ಟಿದನೆಂದು ತನ್ನ ಅಜ್ಜಿಯ ಸಂಗಡ ಜಗಳಕ್ಕೆ ಕಾರಣವಾಯಿತು. ಅಂದಿನಿಂದ ಇವರು ಮೇಲ್ವರ್ಗದವನನ್ನು ಮುಟ್ಟುವ ಗೊಡವೆಗೆ ಹೋಗುವುದಿಲ್ಲ.

''ಮಣೆಗಾರ'' ಆತ್ಮಕತೆಯಿಲ್ಲಿ ವ್ಯಕ್ತವಾದ ಅಸ್ಪೃಶ್ಯತೆಯ ಬಗ್ಗೆ ಅಷ್ಟೇನು ಮಹತ್ವವಾಗಿ ತೋರುವುದಿಲ್ಲವೆಂದೇನಲ್ಲ; ಇಲ್ಲಿ ಹೇಳುವ ರೀತಿಯಿಂದ ಇದು ವಿಶಿಷ್ಟವಾಗುತ್ತದೆ. ಇಲ್ಲಿ ದೇವಸ್ಥಾನಕ್ಕೆ ಪ್ರವೇಶವನ್ನು ಮತ್ತು ಸುತ್ತಮುತ್ತಲಿನ ಹಳ್ಳಿಯ ಗುಡಿಯೊಳಕ್ಕೆ ಮಣೆಗಾರ ಜಾತಿಯವರಿಗೆ ಪ್ರವೇಶವಿಲ್ಲ ಎನ್ನುವ ಪ್ರಸಂಗ ಹಾಗೇ ಗೊಲ್ಲಹಳ್ಳಿಯಲ್ಲಿ ಇರುವ ಜೈನರ ಅಂಗಡಿಗೆ ಪ್ರವೇಶವಿಲ್ಲ; ಅಲ್ಲಿಯ ವ್ಯಾಪಾರಗಾರರು ತನ್ನ ಕೈಯಿಂದ ಮುಟ್ಟಿದರೆ ಅಪವಿತ್ರವಾದವೆಂದು ಕೋಲಿನಿಂದ ಸಾಮಾನುಗಳನ್ನು ನೀಡುವುದು. ಇಲ್ಲೆಲ್ಲಾ ಅಸ್ಪೃಶ್ಯತೆಯನ್ನು ನಾವು ಕಾಣಬಹುದು.

ಆದರೆ ''ಊರುಕೇರಿ''ಯಲ್ಲಿ ಅಸ್ಪೃಶ್ಯತೆಗೆ ಕೊನೆ ಎಂಬುದು ಇರಲಿಲ್ಲ. ತನ್ನ ಬಾಲ್ಯದ ದಿನಗಳಲ್ಲಿ ಎಲ್ಲಿಯೂ ಈ ಅಸ್ಪೃಶ್ಯತೆಯಿಂದ ಮೇಲೆ ಬರಲು ಸಾಧ್ಯವಾಗಲಿಲ್ಲ. ''ಮಣೆಗಾರ'' ಆತ್ಮಕತೆಯಲ್ಲಿ ಮಣೆಗಾರ ಜಾತಿಯವರು ದೇವಸ್ಥಾನವನ್ನು ಕಟ್ಟುವ ಸಂದರ್ಭದಲ್ಲಿ ಕೀಳು ಜಾತಿಯವರೇ ಅಲ್ಲಿ ಕೆಲಸ ಮಾಡುವ ಪ್ರಸಂಗ ಇತ್ತು. ಅಂಥ ಸಮಯದಲ್ಲಿ ದೇವಸ್ಥಾನಕ್ಕೆ ಪ್ರವೇಶ ಸಿಕ್ಕಿತು ಎಂಬ ಧೋರಣೆಯನ್ನು ಆತ್ಮಕಥನಕಾರರು ನಾನು ದೇವರನ್ನು ಮನಸ್ಸಾರೇ ಅಪ್ಪಿಕೊಂಡೆನೆಂದು ಹೇಳಿಕೊಂಡಿದ್ದಾರೆ.

''ಊರುಕೇರಿ'' ಆತ್ಮಕತೆಯಲ್ಲಿ ಜಾತೀಯತೆ ಬಹಳವಾದ ಪ್ರಖರತೆಯನ್ನು ಉಂಟು ಮಾಡುತ್ತದೆ. ಇಲ್ಲಿ ವ್ಯಕ್ತವಾದ ಪ್ರಸಂಗಗಳು, ದಲಿತರ ಕೇರಿಗಳು ಪ್ರತ್ಯೇಕತೆ ಮತ್ತು ಮೇಲು ಜಾತಿಯವರ ಮನೆಯೇ ಬೇರೆ, ದಲಿತರ ಮನೆಗಳೇ ಬೇರೆ. ಇದಕ್ಕೆ ಅಡ್ಡಲಾಗಿ ರಸ್ತೆ ಇತ್ತು ಎಂದು ಹೇಳಿಕೊಂಡಿದ್ದಾರೆ. ಹಾಗೆಯೇ ಮಂಟೇಸ್ವಾಮಿಯ ಗುರುಗಳು ತಮ್ಮ ಊರಿಗೆ ಬಂದರೂ ನಮ್ಮ ಕೇರಿಗೆ ಬರದೇ ಇರಲು ಆತ ಮೇಲ್‌ಜಾತಿಯ ವರ್ಗಕ್ಕೆ ಸೇರಿದವನು. ಮತ್ತೇ ದಲಿತರ ಹೋಟೆಲ್‌ಗೆ ಯಾರು ಪ್ರವೇಶಿಸಲು ಸಾಧ್ಯವಾಗುತ್ತಿರಲಿಲ್ಲ. ಈ ರೀತಿಯಲ್ಲಿ ಜಾತೀಯತೆಗೆ ಕನ್ನಡ ಹಿಡಿದಂತಹ ಘಟನೆಗಳನ್ನು ಕಾಣಬಹುದು.

''ಮಣೆಗಾರ'' ಕೃತಿಯಲ್ಲಿ ಜಾತೀಯತೆ ಕುರಿತ ಹೆಚ್ಚಿನ ವಿವರಗಳಿಲ್ಲ. ಒಂದೇ ಒಂದು ಪ್ರಸಂಗ ತನ್ನ ಅಣ್ಣನ ಸಾವು. ಶಿಕ್ಷಣದ ಸಂದರ್ಭದಲ್ಲಿ ಬಹಳ ಬುದ್ಧಿವಂತನಾದವನನ್ನು ಮೇಲ್ಜಾತಿಯವರು ಕೆಳಮಟ್ಟಕ್ಕೆ ಇಳಿಸುವ ಪ್ರಯತ್ನದಿಂದ ತನ್ನ ಅಣ್ಣನ ಸಾವು ಆಯಿತು ಎಂದು ಹೇಳುವ ಪ್ರಸಂಗ. ಹಾಗೆಯೇ ಹೊಲೆ ಮಾದಿಗರಿಗೆ ಹಾಲು, ಮೊಸರು ಕೊಟ್ಟರೆ ಹಸು,

ಎಮ್ಮೆಗಳು ರಕ್ತವನ್ನೇ ಕರೆಯುತ್ತವೆ ಎನ್ನುವ ನಂಬಿಕೆ ಮೇಲ್ವರ್ಗದವರಲ್ಲಿತ್ತು. ಆದರೆ ಸಿದ್ಧಲಿಂಗಯ್ಯ ಅವರ "ಊರುಕೇರಿ" ಆತ್ಮಕತೆಯಲ್ಲಿ ಕಂಡುಬರುವಂತೆ ಜಾತೀಯತೆಯ ಸಂಬಂಧದ ವಿವರಗಳು; "ಮಣೆಗಾರ" ಆತ್ಮಕತೆಯಲ್ಲಿ ಸ್ವಲ್ಪ ಭಿನ್ನವೆಂದು ತಿಳಿಯಬಹುದು.

ತುಂಬಾಡಿ ರಾಮಯ್ಯ ಅವರ ಪರಿಸರದ ಸುತ್ತಲೂ ಎಲ್ಲ ಜಾತಿಯವರಿದ್ದರೂ ಆದರೆ ಜಾತೀಯತೆಯ ಪ್ರಖರತೆ ಕಡಿಮೆ. ಮುಸ್ಲಿಂ ಜನಾಂಗವಿಲ್ಲದ ಊರಿನಲ್ಲಿ ಬಾಬಯ್ಯನ ಜಾತ್ರೆ ಮಾಡುವುದು; ಹಬ್ಬದ ದಿನಗಳಲ್ಲಿ ಎಲ್ಲರೂ ಒಟ್ಟಾಗಿ ಸೇರಿ ಮೊಹರಂ ಆಚರಿಸುವ ರೀತಿಯನ್ನು ಕಾಣಬಹುದು. ಮತ್ತು ಮೇಲ್ವರ್ಗದ ಜನರು ಮಾದಿಗ ಜಾತಿಯವರನ್ನು ತುಂಬ ಪ್ರೀತಿಯಿಂದ ಭಾವ, ಅಳಿಯ, ಅತ್ತೆ, ಮಾವ ಎಂದು ಸಂಬೋದಿಸುತ್ತಿದ್ದರೆಂದು ರಾಮಯ್ಯ ಅವರು ಹೇಳಿಕೊಂಡಿದ್ದಾರೆ. ಇಡೀ "ಮಣೆಗಾರ" ಆತ್ಮಕತೆಯಲ್ಲಿ ಎರಡೋ ಅಥವಾ ಮೂರೋ ಪ್ರಸಂಗ ಮಾತ್ರ ಜಾತಿ ಪದ್ಧತಿಯ ಬಗ್ಗೆ ಸ್ಪಷ್ಟ ಬೆಳಕು ನೀಡಿದರೂ ಅದನ್ನು ರಾಮಯ್ಯನವರು ಸೌಮ್ಯವಾದ ರೀತಿಯಲ್ಲಿ ಹೇಳಿ ಮುಂದೆ ಹೋಗುವ ಗುಣವನ್ನು ಹೊಂದಿದ್ದಾರೆ. ಇದು ಅವರ ಮಾಗಿದ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

ಬಡತನ ಮತ್ತು ಹಸಿವು ಈ ಎರಡೂ ಕೃತಿಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿವೆ. ಎರಡೂ ಆತ್ಮಕತೆಗಳೂ ಬಡತನ ಮತ್ತು ಪ್ರತಿಭೆ ಇವುಗಳ ವಸ್ತುವೆಂದು ತೋರುತ್ತವೆ.

"ಊರುಕೇರಿ"ಯಲ್ಲಿ ತನ್ನ ತಂದೆ ಶ್ರೀಮಂತರ ಮನೆಯ ಹೊಲಗಳಲ್ಲಿ ದನದ ರೀತಿಯಲ್ಲಿ ನೇಗಿಲು ಹೊತ್ತು ಉಳುವ ಪ್ರಸಂಗ, ಬಡತನದ ಪ್ರತೀಕವೆಂಬಂತೆ ಕಂಡುಬಂದಿದೆ. ಅಂದಿನ ಸ್ಥಿತಿಯಲ್ಲಿ ದಲಿತರು ಶ್ರೀಮಂತರ ಮನೆಗಳಲ್ಲಿ ದುಡಿದು ತಿನ್ನುವುದಕ್ಕೂ ಕಷ್ಟದ ಪರಿಸ್ಥಿತಿಯನ್ನು ತನ್ನ ಬಾಲ್ಯದ ದಿನಗಳಲ್ಲಿ ಅನುಭವಿಸಿರುವುದನ್ನು ನಾವು ಕಾಣಬಹುದು.

ಹಸಿವಿನ ಸ್ಥಿತಿ ಎಲ್ಲಾ ವರ್ಗದಲ್ಲೂ ಕಂಡುಬರುತ್ತದೆ. ಶ್ರೀಮಂತರ ಮನೆಯಲ್ಲಿ ಅನ್ನಕ್ಕಾಗಿ ಕಾಯುವ ಪರಿಸ್ಥಿತಿ ಅಂದಿನ ದಲಿತ ಜನಸಮುದಾಯಕ್ಕೆ ಅನಿವಾರ್ಯವಾಗಿತ್ತು. ಇಂಥ ಅನುಭವಗಳ ಸಂಗ್ರಹದಿಂದ ಇಡೀ ಸಮುದಾಯದ ಪ್ರಜ್ಞೆಯನ್ನು ಅನಾವರಣಗೊಳಿಸುತ್ತದೆ. ಮತ್ತು ಇಂಥ ಬಡತನ ಹಸಿವುಗಳಿಂದ ಧೈರ್ಯಗುಂದದೆ ಶಿಕ್ಷಣದಲ್ಲಿ ಮುಂದುವರೆಸುವುದಕ್ಕೆ "ಊರುಕೇರಿ" ಆತ್ಮಕತೆ ಸಾಕ್ಷಿಯಾಗಿ ನಿಲ್ಲುತ್ತದೆ.

ಶಿಕ್ಷಣದ ಸಂದರ್ಭದಲ್ಲಿ ಹಾಸ್ಟೆಲ್‌ನಲ್ಲಿಯೂ ಸರಿಯಾದ ವ್ಯವಸ್ಥೆ ಇರಲಿಲ್ಲ. ಅಲ್ಲಿಯೂ ಅನ್ನಕ್ಕಾಗಿ ಕಚ್ಚಾಡುವ ಪರಿಸ್ಥಿತಿಯಿತ್ತು. ಇಂಥ ಪ್ರಸಂಗಗಳು ಮನಕಲಕುತ್ತವೆ.

"ಮಣೆಗಾರ" ಕೃತಿಯಲ್ಲಿ ಬಡತನ, ಹಸಿವು ಇವುಗಳು ಕಂಡುಬರುತ್ತವೆ. ರಾಮಯ್ಯ ಅವರ ವಾಸದ ಮನೆಯಿಂದ ಇದನ್ನು ತಿಳಿಯಬಹುದು. ಮತ್ತು ಒಂದು ದಿನ ಶಾಲೆಯಿಂದ ಬಂದ ತಕ್ಷಣ ಊಟವಿಲ್ಲದೇ ಪರದಾಡುವ ಸ್ಥಿತಿಯಿತ್ತು. ಅಂಥ ವೇಳೆಯಲ್ಲಿ ಹಸಿವನ್ನು

ತಡೆಯಲಾರದೇ ಶ್ರೀಮಂತರ ಹೊಲಕ್ಕೆ ಹೋಗಿ ಕಡ್ಲೆಕಾಯಿ ಗಿಡ ಕಿತ್ತು ಕಳ್ಳತನ ಮಾಡಿ ತಿನ್ನುವಂತಹ ಸ್ಥಿತಿಗೆ ತಲುಪುತ್ತಾರೆ. ಹಸಿವು ಯಾವುದೇ ವ್ಯಕ್ತಿಯನ್ನು ಬಿಟ್ಟಿದ್ದಲ್ಲ. ಏನು ಬೇಕಾದರೂ ಮಾಡಿಸಿಬಿಡುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ.

"ಊರುಕೇರಿ"ಯಲ್ಲಿ ಬಡತನ, ಹಸಿವುಗಳು ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಸಹ ಇತ್ತು ಎಂಬುದಕ್ಕೆ ಅವರ ಆತ್ಮಕತೆಯಲ್ಲಿ ಮಾಹಿತಿ ದೊರೆಯುತ್ತದೆ. (ಪುಟ ೪೬-೭೯) ಆದರೆ "ಮಣೆಗಾರ" ಆತ್ಮಕತೆಯಲ್ಲಿ ಗ್ರಾಮೀಣ ಜೀವನದಲ್ಲಿ ಬಡತನ ಮತ್ತು ಹಸಿವುಗಳ ದಾರುಣ ಸ್ಥಿತಿಯನ್ನು ಮನಮುಟ್ಟುವಂತೆ ಚಿತ್ರಿಸಿರುವುದು ಕಂಡುಬರುತ್ತದೆ.

ಈ ಒಂದು ಪ್ರಸಂಗದಲ್ಲಿ "ಊರುಕೇರಿ" ಮತ್ತು "ಮಣೆಗಾರ" ಆತ್ಮಕತೆಗಳು ಭಿನ್ನವೆಂದು ಕಾಣುತ್ತವೆ. ಹಾಗೆಯೇ ಜೀವನವನ್ನು ನೋಡುವ ದೃಷ್ಟಿಯೂ ಸಹ ಬೇರೆ ಬೇರೆಯಾಗುತ್ತವೆ.

ದೇವರು ಮನುಷ್ಯನ ಮೇಲೆ ಬರುತ್ತದೆಂಬ ನಂಬಿಕೆ ಮತ್ತು ದೆವ್ವಗಳು ಇವೆ ಎಂಬುದು ವಿದ್ಯಾರ್ಥಿ ದೆಸೆಯಿಂದಲೇ ಸಿದ್ಧಲಿಂಗಯ್ಯ ಅವರಲ್ಲಿ ಕಾಣಿಸಿಕೊಂಡಿರುವುದನ್ನು ಉಲ್ಲೇಖಿಸಿದ್ದಾರೆ. ಇಲ್ಲಿ ಅನೇಕ ದೇವರ ಪರಂಪರೆಯ ಜನರು ಇದ್ದಾರೆಂದು ಹೇಳಿ ಮನೆಯ ದೇವರು ಮಂಟೇಸ್ವಾಮಿ, ಜಲ್ದಗೆರೆಯಮ್ಮ ಮುಂತಾದ ಹೆಸರುಗಳನ್ನು ತಿಳಿಸುತ್ತಾರೆ.

"ಮಣೆಗಾರ" ಕೃತಿಯಲ್ಲಿಯೂ ವೀರನಾಗಮ್ಮ ಎಂಬ ಹೆಣ್ಣುದೇವತೆಯನ್ನು ಸುತ್ತಲಿನ ಜನರು ಮೆಚ್ಚಿ ಆರಾಧಿಸುತ್ತಿದ್ದರೆಂದು ತಿಳಿದು ಬರುತ್ತದೆ. ಬಾಬಯ್ಯನ ಜಾತ್ರೆ ಉತ್ಸವ ಮುಂತಾದ ಪ್ರಸಂಗಗಳು ಇದಕ್ಕೆ ಉದಾಹರಣೆಯಾಗಿವೆ.

ದಲಿತರ ಆತ್ಮಕತೆಗಳಲ್ಲಿ ಹೋರಾಟವನ್ನು ತಮ್ಮ ಜೀವನದ ಒಂದು ಅಂಗವಾಗಿ ಮಾಡಿಕೊಂಡಿರುವುದು ಗೋಚರಿಸುತ್ತದೆ. ಅಂದರೆ ಮೇಲ್ವರ್ಗದವರಿಂದ ಬರಬೇಕಾದ ತಮ್ಮ ಸಂಪತ್ತಿನ ಹಂಚಿಕೆ, ಮೀಸಲಾತಿಯನ್ನು ಪಡೆಯಲು, ದಲಿತರ ಮೇಲೆ ದೌರ್ಜನ್ಯವನ್ನು ವಿರೋಧಿಸಲು ಹೋರಾಟವನ್ನು ಒಂದು ಅಸ್ತ್ರವಾಗಿ ಇಂದೂ ಸಹ ಬಳಸಿಕೊಳ್ಳುತ್ತಿರುವುದು ಕಂಡುಬರುತ್ತದೆ.

ಈ ರೀತಿಯ ಹೋರಾಟ ಎರಡೂ ಆತ್ಮಕತೆಗಳಲ್ಲೂ ಸಹಜವಾಗಿ ನಿರೂಪಿತವಾಗಿರುವುದನ್ನು ನಾವು ಕಾಣಬಹುದಾಗಿದೆ. ವಿದ್ಯಾರ್ಥಿ ದೆಸೆಯಿಂದಲೇ ಹೋರಾಟಗಾರರಾಗಿ ರೂಪು ಪಡೆಯುವುದು; ಅನ್ಯಾಯದ ವಿರುದ್ಧ ಹೋರಾಡುವುದು ಕಂಡುಬರುತ್ತದೆ. ಈ ಇಬ್ಬರೂ ಆತ್ಮಕಥನಕಾರರು ದಲಿತ ಸಂಘರ್ಷ ಸಮಿತಿಯ ಸದಸ್ಯರಾಗಿ ಕಾಣಿಸಿಕೊಂಡಿದ್ದಾರೆ. ಇವರ ಹೋರಾಟದ ಪ್ರಾರಂಭ ಮೊದಲು ಹಾಸ್ಟೆಲ್‌ನಲ್ಲಿ ದಲಿತರಿಗೆ

ಆಗುವ ಅನ್ಯಾಯವನ್ನು ಪ್ರತಿಭಟಿಸುವುದರ ಮೂಲಕ ತಮ್ಮ ಹಕ್ಕನ್ನು ಪಡೆಯಬಹುದೆಂಬ ನಂಬಿಕೆಯಿಂದ ಹೋರಾಟ ದಲಿತರಲ್ಲಿ ಅನಿವಾರ್ಯವಾಗಿ ಬಂದುಬಿಡುತ್ತದೆ.

ಶೋಷಣೆಯ ಚಿತ್ರಣ ಎಂಬುದು ದಲಿತ ಆತ್ಮಕತೆಗಳಲ್ಲಿ ಕಂಡುಬರುವ ಪ್ರಮುಖ ಅಂಶವಾಗಿದೆ. ದಲಿತರನ್ನು ಅನಾದಿಕಾಲದಿಂದಲೂ ಮೇಲುಜಾತಿಯವರು ಶೋಷಿತಕೊಂಡು ಬರುತ್ತಿದ್ದಾರೆ. ಇದನ್ನು ತಪ್ಪಿಸಲು ಹಾಗೂ ಈ ಬಗ್ಗೆ ಎಚ್ಚರ ಮೂಡಿಸಲು ಎರಡು ಆತ್ಮಕತೆಗಳ ಪ್ರಭಾವ ದಲಿತರ ಮೇಲೆ ಹೆಚ್ಚಾಗಿ ಆಗಿರುವುದನ್ನು ನಾವು ಕಾಣಬಹುದು.

"ಊರುಕೇರಿ" ಕೃತಿಯಲ್ಲಿ ದಲಿತ ಸಾಂಸ್ಕೃತಿಕ ರಾಜಕಾರಣವು ಪ್ರಜ್ಞಾಪೂರ್ವಕವಾಗಿ ನಂಬಿಕೊಂಡಿರುವ ಅನೇಕ ಕೀಳರಿಮೆಗಳನ್ನು ಕಾಲೆಳೆದು ಬೀಳಿಸುತ್ತದೆ. ಉದಾಹರಣೆಗೆ ದಲಿತರಿಗೆ ಗತಕಾಲದ ಸಂಸ್ಕೃತಿಯಲ್ಲಿ ಹಿರಿಮೆಯ ಪಾಲುದಾರಿಕೆ ಇಲ್ಲ ಎಂಬ ನಂಬಿಕೆಯನ್ನು ಸಿದ್ಧಲಿಂಗಯ್ಯ ತಮ್ಮ ದೊಡ್ಡಪ್ಪನ ಬಗ್ಗೆ ಬರೆಯುತ್ತಾ ಹಂಗಿಸುತ್ತಾರೆ. ಆದರೆ ನೇರವಾಗಿ ಅಲ್ಲ. ಆ ದೊಡ್ಡಪ್ಪ ಕೇರಿಯ ನಾಯಕನಾಗಿ ಇಡೀ ಊರಲ್ಲೇ ಗಣ್ಯನಾದವನು. ಎಲ್ಲದಕ್ಕಿಂತ ಮುಖ್ಯವಾಗಿ ಆತ ಜೈಮಿನಿ ಭಾರತವನ್ನು ಓದುತ್ತಿದ್ದ ವ್ಯಕ್ತಿ. ಆದರೆ ರಾಜಕಾರಣ ದಲಿತ ವರ್ಗಕ್ಕೂ ಬೇಕಾದ ಒಂದು ಮುಖ್ಯ ಅಂಶವಾಗಿ ಅಂದಿನ ಕಾಲದಲ್ಲಿ ದಲಿತರು ಸ್ಪರ್ಧಿಸಿ ಗೆಲ್ಲಬಹುದೆಂಬ ನಂಬಿಕೆಗೆ ಈ ಪ್ರಸಂಗ ಸಾಕ್ಷಿಯಾಗಿದೆ."[1]

ಆದರೆ "ಮಣೆಗಾರ" ಆತ್ಮಕತೆಯಲ್ಲಿ ಈ ರೀತಿಯ ರಾಜಕಾರಣದ ಪ್ರವೇಶವಿಲ್ಲ. ಕಥನಕಾರ ಬೆಳೆದಂತೆ ಅವರು ದಲಿತ ಸಂಘರ್ಷ ಸಮಿತಿಯ ಸದಸ್ಯರಾಗಿರುವುದೊಂದೇ ಪ್ರಸಂಗ ಕಾಣಿಸಿಕೊಳ್ಳುತ್ತದೆ. ಆದರೆ "ಊರುಕೇರಿ" ಆತ್ಮಕತೆಯಲ್ಲಿ ನಿಷೇಧವಿದ್ದ ಕಾಲಘಟ್ಟದಲ್ಲಿ ಅದನ್ನು ಮೀರಿ ನಡೆಯಬಹುದೆಂಬುದಕ್ಕೆ ಸಾಕ್ಷಿಯಾಗಿ ದೊಡ್ಡಪ್ಪನ ಪ್ರಸಂಗ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಕಾರಣ ನಗರ ಪ್ರದೇಶ ಹತ್ತಿರ ಇದ್ದರಿಂದ ಈ ರೀತಿಯ ಬೆಳವಣಿಗೆ ಕಾಣಿಸಿಕೊಳ್ಳುತ್ತದೆ. ಹಾಗೇ "ಮಣೆಗಾರ"ದಲ್ಲಿ ಈ ರೀತಿ ಕಾಣಿಸಿಕೊಳ್ಳುವುದಿಲ್ಲ.

"ಊರುಕೇರಿ" ಆತ್ಮಕತೆಯಲ್ಲಿ ಗ್ರಾಮೀಣ ಮತ್ತು ನಗರದ ಬದುಕಿನ ಮುಖಾಮುಖಿಯನ್ನು ನಾವು ಗುರುತಿಸಬಹುದು. ತನ್ನ ಬಾಲ್ಯಕಾಲದ ಜೀವನವನ್ನು ಮಂಚನಬೆಲೆಯ ಸುತ್ತಲಿನ ಹಳ್ಳಿಯ ಜೀವನವನ್ನು ಕಾಣಬಹುದಾಗಿದೆ. ಅಂದರೆ ಬಾಲ್ಯದ ಕಾಲ ಎನ್ನುವುದು ಸಮೃದ್ಧವಾಗಿ ಅರಳುವ ಕಾಲ. ತಾನು ಅನುಭವಿಸಿದ ನೋವನ್ನು ತನ್ನ ತಂದೆ ಮನೆ ಬಿಟ್ಟು ಹಳ್ಳಿಯ ಜೀವನವನ್ನು ತೊರೆದು ಪಟ್ಟಣ ಸೇರುವುದು ಹಾಗೆಯೇ ಮಾಗಡಿ ಪರಿಸರದ ಸುತ್ತಲಿನ ಬದುಕನ್ನು ಇಲ್ಲಿ ಸಂಕಥನಗೊಳಿಸಿರುವುದು ಕಂಡುಬರುತ್ತದೆ.

"ಮಣೆಗಾರ" ಆತ್ಮಕತೆಯು ತನ್ನ ಪೂರ್ಣ ಬದುಕಿನ ಜೀವನವನ್ನು ತುಮಕೂರಿನ ಪಕ್ಕದಲ್ಲಿರುವ ಗೊಲ್ಲಹಳ್ಳಿ ಪರಿಸರದ ಕತೆಯಾಗಿ ಸಮುದಾಯವನ್ನು ಪ್ರತಿನಿಧಿಸುವುದರಲ್ಲಿ ಈ

ಆಗುವ ಅನ್ಯಾಯವನ್ನು ಪ್ರತಿಭಟಿಸುವುದರ ಮೂಲಕ ತಮ್ಮ ಹಕ್ಕನ್ನು ಪಡೆಯಬಹುದೆಂಬ ನಂಬಿಕೆಯಿಂದ ಹೋರಾಟ ದಲಿತರಲ್ಲಿ ಅನಿವಾರ್ಯವಾಗಿ ಬಂದುಬಿಡುತ್ತದೆ.

ಶೋಷಣೆಯ ಚಿತ್ರಣ ಎಂಬುದು ದಲಿತ ಆತ್ಮಕತೆಗಳಲ್ಲಿ ಕಂಡುಬರುವ ಪ್ರಮುಖ ಅಂಶವಾಗಿದೆ. ದಲಿತರನ್ನು ಅನಾದಿಕಾಲದಿಂದಲೂ ಮೇಲುಜಾತಿಯವರು ಶೋಷಿತಕೊಂಡು ಬರುತ್ತಿದ್ದಾರೆ. ಇದನ್ನು ತಪ್ಪಿಸಲು ಹಾಗೂ ಈ ಬಗ್ಗೆ ಎಚ್ಚರ ಮೂಡಿಸಲು ಎರಡು ಆತ್ಮಕತೆಗಳ ಪ್ರಭಾವ ದಲಿತರ ಮೇಲೆ ಹೆಚ್ಚಾಗಿ ಆಗಿರುವುದನ್ನು ನಾವು ಕಾಣಬಹುದು.

"ಊರುಕೇರಿ" ಕೃತಿಯಲ್ಲಿ ದಲಿತ ಸಾಂಸ್ಕೃತಿಕ ರಾಜಕಾರಣವು ಪ್ರಜ್ಞಾಪೂರ್ವಕವಾಗಿ ನಂಬಿಕೊಂಡಿರುವ ಅನೇಕ ಕೀಳರಿಮೆಗಳನ್ನು ಕಾಲೆಳೆದು ಬೀಳಿಸುತ್ತದೆ. ಉದಾಹರಣೆಗೆ ದಲಿತರಿಗೆ ಗತಕಾಲದ ಸಂಸ್ಕೃತಿಯಲ್ಲಿ ಹಿರಿಮೆಯ ಪಾಲುದಾರಿಕೆ ಇಲ್ಲ ಎಂಬ ನಂಬಿಕೆಯನ್ನು ಸಿದ್ಧಲಿಂಗಯ್ಯ ತಮ್ಮ ದೊಡ್ಡಪ್ಪನ ಬಗ್ಗೆ ಬರೆಯುತ್ತಾ ಹಂಗಿಸುತ್ತಾರೆ. ಆದರೆ ನೇರವಾಗಿ ಅಲ್ಲ. ಆ ದೊಡ್ಡಪ್ಪ ಕೇರಿಯ ನಾಯಕನಾಗಿ ಇಡೀ ಊರಲ್ಲೇ ಗಣ್ಯನಾದವನು. ಎಲ್ಲದಕ್ಕಿಂತ ಮುಖ್ಯವಾಗಿ ಆತ ಜೈಮಿನಿ ಭಾರತವನ್ನು ಓದುತ್ತಿದ್ದ ವ್ಯಕ್ತಿ. ಆದರೆ ರಾಜಕಾರಣ ದಲಿತ ವರ್ಗಕ್ಕೂ ಬೇಕಾದ ಒಂದು ಮುಖ್ಯ ಅಂಶವಾಗಿ ಅಂದಿನ ಕಾಲದಲ್ಲಿ ದಲಿತರು ಸ್ಪರ್ಧಿಸಿ ಗೆಲ್ಲಬಹುದೆಂಬ ನಂಬಿಕೆಗೆ ಈ ಪ್ರಸಂಗ ಸಾಕ್ಷಿಯಾಗಿದೆ."[೧]

ಆದರೆ "ಮಣೆಗಾರ" ಆತ್ಮಕತೆಯಲ್ಲಿ ಈ ರೀತಿಯ ರಾಜಕಾರಣದ ಪ್ರವೇಶವಿಲ್ಲ. ಕಥನಕಾರ ಬೆಳೆದಂತೆ ಅವರು ದಲಿತ ಸಂಘರ್ಷ ಸಮಿತಿಯ ಸದಸ್ಯರಾಗಿರುವುದೊಂದೇ ಪ್ರಸಂಗ ಕಾಣಿಸಿಕೊಳ್ಳುತ್ತದೆ. ಆದರೆ "ಊರುಕೇರಿ" ಆತ್ಮಕತೆಯಲ್ಲಿ ನಿಷೇಧವಿದ್ದ ಕಾಲಘಟ್ಟದಲ್ಲಿ ಅದನ್ನು ಮೀರಿ ನಡೆಯಬಹುದೆಂಬುದಕ್ಕೆ ಸಾಕ್ಷಿಯಾಗಿ ದೊಡ್ಡಪ್ಪನ ಪ್ರಸಂಗ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಕಾರಣ ನಗರ ಪ್ರದೇಶ ಹತ್ತಿರ ಇದ್ದರಿಂದ ಈ ರೀತಿಯ ಬೆಳವಣಿಗೆ ಕಾಣಿಸಿಕೊಳ್ಳುತ್ತದೆ. ಹಾಗೇ "ಮಣೆಗಾರ"ದಲ್ಲಿ ಈ ರೀತಿ ಕಾಣಿಸಿಕೊಳ್ಳುವುದಿಲ್ಲ.

"ಊರುಕೇರಿ" ಆತ್ಮಕತೆಯಲ್ಲಿ ಗ್ರಾಮೀಣ ಮತ್ತು ನಗರದ ಬದುಕಿನ ಮುಖಾಮುಖಿಯನ್ನು ನಾವು ಗುರುತಿಸಬಹುದು. ತನ್ನ ಬಾಲ್ಯಕಾಲದ ಜೀವನವನ್ನು ಮಂಚನಬೆಲೆಯ ಸುತ್ತಲಿನ ಹಳ್ಳಿಯ ಜೀವನವನ್ನು ಕಾಣಬಹುದಾಗಿದೆ. ಅಂದರೆ ಬಾಲ್ಯದ ಕಾಲ ಎನ್ನುವುದು ಸಮೃದ್ಧವಾಗಿ ಅರಳುವ ಕಾಲ. ತಾನು ಅನುಭವಿಸಿದ ನೋವನ್ನು ತನ್ನ ತಂದೆ ಮನೆ ಬಿಟ್ಟು ಹಳ್ಳಿಯ ಜೀವನವನ್ನು ತೊರೆದು ಪಟ್ಟಣ ಸೇರುವುದು ಹಾಗೆಯೇ ಮಾಗಡಿ ಪರಿಸರದ ಸುತ್ತಲಿನ ಬದುಕನ್ನು ಇಲ್ಲಿ ಸಂಕಥನಗೊಳಿಸಿರುವುದು ಕಂಡುಬರುತ್ತದೆ.

"ಮಣೆಗಾರ" ಆತ್ಮಕತೆಯು ತನ್ನ ಪೂರ್ಣ ಬದುಕಿನ ಜೀವನವನ್ನು ತುಮಕೂರಿನ ಪಕ್ಕದಲ್ಲಿರುವ ಗೊಲ್ಲಹಳ್ಳಿ ಪರಿಸರದ ಕತೆಯಾಗಿ ಸಮುದಾಯವನ್ನು ಪ್ರತಿನಿಧಿಸುವುದರಲ್ಲಿ ಈ

ಗ್ರಾಮೀಣ ಬದುಕನ್ನು ನಮ್ಮ ಮುಂದೆ ತೆರೆದಿಡುತ್ತದೆ. ತಾವು ಕಳೆದಂತಹ ಜೀವನವನ್ನು ವ್ಯಕ್ತ ಮಾಡುವುದರಲ್ಲಿ ಭಿನ್ನವೆಂದು ಗುರುತಿಸಬಹುದು. "ಯಾವುದೇ ಹಳ್ಳಿಯಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯದ ಬಗ್ಗೆ ಚರ್ಚೆ;" ದಲಿತ ಕಾರ್ಯಕರ್ತರ ಚರ್ಚೆಗಳಲ್ಲಿ ಆಗುವ ಹಾಗೆ ದಲಿತ ಸಮಷ್ಟಿಯ ಅನುಭವಗಳ ವ್ಯಾಖ್ಯಾನ ನಡೆಯುತ್ತಿತ್ತು. ಅಲ್ಲಿ ಸೃಷ್ಟಿಯಾದ ಕೋಪ, ಆವೇಶಗಳ ಭಾವನಾ ವಾತಾವರಣಕ್ಕೂ ನಾನು ಓದುತ್ತಿದ್ದ ಪುಟಗಳಲ್ಲಿನ ಧ್ವನಿಗೂ ಇದ್ದ ವ್ಯತ್ಯಾಸ ಥಟಕ್ಕನೆ ಮನಸ್ಸಿಗೆ ಹೊಳೆಯಿತು. ಇಬ್ಬರ ಅನುಭವಗಳೂ ಒಂದೇ ಆದರೆ ಅದನ್ನು ಕಂಡು ವರ್ಣಿಸುತ್ತಿರುವ ಧ್ವನಿಗಳು ಮಾತ್ರ ಬೇರೆ ಬೇರೆ, ದಲಿತ ಹೋರಾಟಗಾರರದೂ ಸಮಷ್ಟಿಯ ಕೋಪ. ಸಿದ್ಧಲಿಂಗಯ್ಯನವರ ಧ್ವನಿ ಸೃಜನಶೀಲ ಸಾಹಿತಿಯ ವಿಶಿಷ್ಟ ಧ್ವನಿ, ತನ್ನ ವಿಶಿಷ್ಟತೆಯನ್ನು "ಊರುಕೇರಿ"ಯಲ್ಲಿ ಒತ್ತಿ ಹೇಳಿದ್ದಾರೆ."[೨]

ಸಿದ್ಧಲಿಂಗಯ್ಯನವರ ವಿಶಿಷ್ಟತೆ ಅವರ ಶೈಲಿಯಲ್ಲಿದೆ. ಅಲ್ಲಿ ಅತ್ಯಂತ ಬುದ್ಧಿವಂತ ತುಂಟನೊಬ್ಬ ವ್ಯಂಗ್ಯ ಪ್ರಬಂಧ ಧ್ವನಿ ಇತ್ಯಾದಿಗಳನ್ನು ಬಳಸಿ ಹೊಸ ಬಗೆಯ ಆತ್ಮ ಪ್ರತಿಮೆಗಳ್ನನು ಸೃಷ್ಟಿಸಿದ್ದಾರೆ. ಭಾರತವು ನಾಗರೀಕತೆಯಾಗಿ ಪಶ್ಚಿಮದ ಎದುರಿಗೆ ಹೊಸ ರೀತಿಯ ಆತ್ಮವಿಶ್ವಾಸವನ್ನು ಸೃಷ್ಟಿಸಿಕೊಳ್ಳಬೇಕು. ಭಾರತೀಯ ಸಮಾಜದಲ್ಲಿ ಅವಮಾನಿತ ವರ್ಗಗಳ ಪರಾಜಿತ ಗುಂಪುಗಳು ಪ್ರತಿಷ್ಠಿತರ ಎದುರಿಗೆ ಹೊಸ ರೀತಿಯ ಆತ್ಮವಿಶ್ವಾಸವನ್ನು ಸೃಷ್ಟಿಸಿಕೊಳ್ಳಬೇಕು. ದಲಿತರ ಬದುಕನ್ನು ಹೊಸ ರೀತಿಯಲ್ಲಿ ಪ್ರತಿಮೀಕರಿಸುವುದಕ್ಕೆ ಅವರು ಬಳಸಿರುವ ಶೈಲಿ ಮತ್ತು ಭಾಷೆಯ ಬಳಕೆ ಪರಿಣಾಮಕಾರಿಯಾದುದು.

ತುಂಬಾಡಿ ರಾಮಯ್ಯ ಅವರು ತಮ್ಮ ಆತ್ಮಕತೆ "ಮಣೆಗಾರ" ಕೃತಿಯಲ್ಲಿ ಈ ಕಾಲದ ವಿಶಿಷ್ಟತೆಯನ್ನು ಮೆರೆದಿದ್ದಾರೆ. ಒಂದು ಅನುಭವಕ್ಕೆ ಚಿರಪರಿಚಿತನಾದ ವ್ಯಕ್ತಿ ಬರೆಯುವುದಕ್ಕೂ, ಅಪರಿಚಿತ ವ್ಯಕ್ತಿ ಬರೆಯುವುದಕ್ಕೂ ವ್ಯತ್ಯಾಸ ಗುರುತಿಸಬಹುದು. "ಇದಕ್ಕೆ ಮುಖ್ಯ ಅವರ ಆತ್ಮಕತೆಯಲ್ಲಿರುವ ಚಿತ್ರಕಶಕ್ತಿಯಿಂದ ವಿಶಿಷ್ಟರಾಗುತ್ತಾರೆ. ತಾವು ಕಂಡಿದ್ದನ್ನು ಅನುಭವಸಿದ್ದನ್ನು ಮೆಲುದನಿಯಲ್ಲಿ ನಿರೂಪಿಸುವ ರೀತಿ ವಿಶಿಷ್ಟವಾಗಿದೆ. ಎಲ್ಲೂ ಅವರು ದನಿಯೆತ್ತರಿಸಿ ಮಾತನಾಡುವುದಿಲ್ಲ. ಸನ್ನಿವೇಶಗಳನ್ನು ವೈಭವೀಕರಿಸುವ ಗೋಜಿಗೆ ಹೋಗುವುದಿಲ್ಲ. ಈ ಬಗೆಯ ಪ್ರಾಮಾಣಿಕತೆ ಕೃತಿಯುದ್ಧಕ್ಕೂ ಕಾಣಿಸಿಕೊಳ್ಳುತ್ತದೆ. ತಾನು ಮುಜುಗರಕ್ಕೆ ಒಳಗಾಗಬೇಕಾಗಿರುವ ಪ್ರಸಂಗವನ್ನು ಸನ್ನಿವೇಶಗಳನ್ನು ಅವರು ಆತ್ಮಸಂಯಮದಿಂದ ತಡೆದು ಹೇಳುತ್ತಾರೆ. ರಾಮಯ್ಯ ಅವರು ತುಂಬಾ ಸಂಕೋಚದ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾರೆ. ಅವರ ಆತ್ಮಕಥನದ ತುಂಬ ವ್ಯಕ್ತಿ ಚಿತ್ರಗಳಿವೆ. ತಾನು ಭೇಟಿಯಾದ ವ್ಯಕ್ತಿಗಳ, ಸನ್ನಿವೇಶಗಳ ಮುಖಾಮುಖಿಯಾಗಿ ತಮ್ಮನ್ನು ತೆರೆದಿಡುತ್ತಾರೆ."[೩]

ಈ ಎರಡೂ ಆತ್ಮಕತೆಗಳಲ್ಲಿ ಕೆಲವೊಂದು ವೈದೃಶ್ಯಗಳು ಇರುವಂತೆ ಸಾದೃಶ್ಯಗಳು ಇವೆ. ಆದೆ ಸಾದೃಶ್ಯಗಳೇ ಹೆಚ್ಚು. ಬಡತನ, ಹಸಿವು, ಜಾತಿ ಶೋಷಣೆ, ಶಿಕ್ಷಣ, ಹೋರಾಟ

ಇವು ಎರಡರಲ್ಲೂ ಕಾಣಿಸಿಕೊಂಡರೂ ಬೇರೆ ಬೇರೆ ಪರಿಸರದಿಂದ ಬಂದವುಗಳಾಗಿವೆ. ಆದರೆ ಶೈಲಿಯನ್ನು ತಮ್ಮದೇ ಆದ ರೀತಿಯಲ್ಲಿ ಬಳಸಿದ್ದಾರೆ. ಮತ್ತೆ ಭಾಷೆಯಲ್ಲಿ ತಮ್ಮ ಪ್ರಾದೇಶಿಕತೆಯನ್ನು ಉಳಿಸಿಕೊಂಡಿರುವುದು ಕಂಡುಬರುತ್ತದೆ.

"ಮಣೆಗಾರ" ಆತ್ಮಕತೆಯು ಇಲ್ಲಿಯವರೆಗೆ ದಲಿತ ಸಾಹಿತ್ಯದಲ್ಲಿ ಬಂದಿರುವ ಆತ್ಮಕತೆಗಳಿಗೆ ಭಿನ್ನವಾಗಿ ನಿಲ್ಲುವುದು. ಆತ್ಮಕತೆಯಲ್ಲಿನ ಚಿತ್ರಗಳನ್ನು ನೋಡಿ ಅದರಿಂದ ಪಡೆಯುವ ಅನುಭವ ವಿಶಿಷ್ಟವಾಗಿದೆ. ಈ ನೆಲೆಯಲ್ಲಿ ವಿಶಿಷ್ಟತೆಯನ್ನು ಸಾಧಿಸಿದೆ ಎಂದು ಹೇಳಬಹುದು.

ಒಟ್ಟಾರೆಯಾಗಿ 'ಮಣೆಗಾರ' ಮತ್ತು 'ಊರುಕೇರಿ'ಯಲ್ಲಿ ಬಡವರ ಪರವಾದ ಧೋರಣೆಗಳ್ನನು, ಅಸ್ಪೃಶ್ಯರ, ಸಮಾಜದಿಂದ ಹೊರಗೆ ಉಳಿದವರ ನೋವಿಗೆ ಸ್ಪಂದಿಸುವ ಕಾಳಜಿ ಇದೆ. ಜೊತೆಗೆ ದಲಿತ ಸಾಹಿತ್ಯ ಈ ಸಮಾಜದಲ್ಲಿರುವ ವರ್ಗ ತಾರತಮ್ಯವನ್ನು ಖಂಡಿಸುವುದರ ಜೊತೆಗೆ ಬಡವರ ಬಡತನದ ನೋವಿನ ಅನುಭವವಿದ್ದು ಎಲ್ಲಾ ಜಡ ಸಂಪ್ರದಾಯದಿಂದ ದೂರವಾಗಿ ಸಮಾನತೆಗಾಗಿ ತುಡಿಯುವ ಆ ರೀತಿಯ ತುಡಿತದಿಂದ ಸಾಹಿತ್ಯವನ್ನು ಸೃಷ್ಟಿ ಮಾಡುವ ಪ್ರಗತಿಪರ ಬಂಡಾಯ ಸಾಹಿತಿಯೊಬ್ಬ ಅಸ್ಪೃಶ್ಯತೆಯ ಅನುಭವದ ಕಾರಣದಿಂದಾಗಿಯೇ ದಲಿತ ಸಾಹಿತಿಯಾಗಲು ಸಾಧ್ಯವಿಲ್ಲ. ಆದರೆ ಅತ್ಯುತ್ತಮ ದಲಿತ ಸಾಹಿತಿ ಅವನ್ನಿಟ್ಟುಕೊಂಡ ಆಶಯದ ಕಾರಣದಿಂದಾಗಿಯೇ ಬಂಡಾಯ ಸಾಹಿತಿಯಾಗಲು ಸಾಧ್ಯ. ಈ ನಿಟ್ಟನಿಂದ ದಲಿತ ಸಾಹಿತ್ಯ, ಆದರಲ್ಲಿ ದಲಿತ ಆತ್ಮಕತೆಗಳು ಇತರ ಸಾಹಿತಿಗಳ ಆತ್ಮಕತೆಗಳಂತೆ ಅಲ್ಲ. ಅದರ ಶೈಲಿ, ಬರವಣಿಗೆ, ಸಂದರ್ಭ, ಅರ್ಥ, ಭಾಷೆ, ಪಾತ್ರಗಳ ನೇರ ಸ್ಪಷ್ಟನೆ ಇವೇ ಮೊದಲಾದ ಎಲ್ಲಾ ಅಂಶಗಳಿಂದಲೂ ತನ್ನ ವಿಶಿಷ್ಟವಾದ ಛಾಪನ್ನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮೂಡಿಸುವಂತಾಗಿದೆ.

ದಲಿತ ಆತ್ಮಕತೆಗಳನ್ನು ಓದುವ ಓದುಗನಿಗೆ ಈ ಪ್ರಶ್ನೆ ಕಾಡುತ್ತದೆ. ಅದು ಮಣೆಗಾರ ಅಥವಾ ಊರುಕೇರಿ ಅಥವಾ ಗೌರ್ಮೆಂಟ್ ಬ್ರಾಹ್ಮನ ಯಾವುದೇ ದಲಿತ ಆತ್ಮಕತೆಯಲ್ಲಿ ಕಂಡುಬರುವ ದಲಿತರ ಅವಮಾನ, ಅಸ್ಪೃಶ್ಯತಾ ಭಾವನೆ, ಬಡತನ ಒಂದು ಹೊತ್ತಿನ ಊಟಕ್ಕಾಗಿ ಮತ್ತೊಬ್ಬರ ಮನೆಯ ಹತ್ತಿರ ಕಾಯುವ ರೀತಿ ಇವೆಲ್ಲಾ ಹೃದಯ ವಿದ್ರಾವಕ ಘಟನೆಗಳನ್ನು ಆತ್ಮಕತೆಗಳು ಸಾರುತ್ತವೆ.

ಭಾರತದ ದಲಿತ ಸಾಹಿತ್ಯವನ್ನು ಆಫ್ರಿಕಾದ ನಿಗ್ರೋ ಸಾಹಿತ್ಯದ ಜೊತೆಗೆ ಹೋಲಿಸಿದರೆ, ಆಫ್ರಿಕಾದ ನೀಗ್ರೋಗಳನ್ನು ಯುರೋಪಿನ ಬಿಳಿಯರು ಗುಲಾಮರನ್ನಾಗಿ ನಡೆಸಿಕೊಂಡಿದ್ದಾರೆ. ಹಾಗೆಯೇ ಹಿಂದೂ ಧರ್ಮ ಮತ್ತು ಹಿಂದೂ ಧರ್ಮೀಯರೇ ಆದ ದಲಿತರನ್ನು ಪಶು, ಪಕ್ಷಿ ಪ್ರಾಣಿಗಳಿಗಿಂತ ಕಡೆಯಾಗಿ ಕಂಡಿದ್ದಾರೆ. ಇವೆರಡೂ ಅತ್ಯಂತ ದುಃಖದ ಸಂಗತಿ ಎಂದು ದಲಿತ ಆತ್ಮಕತೆಗಳ ಅವಲೋಕನದಿಂದ ತಿಳಿಯುತ್ತದೆ. ಇದರಲ್ಲಿ ಒಂದು ವಿಪರ್ಯಾಸದ ಸಂಗತಿ

ಎಂದರೆ ಯುರೋಪಿನ ಬಿಳಿಯರಿಗೂ ಆಫ್ರಿಕಾದ ನೀಗ್ರೋಗಳಿಗೂ ಬಣ್ಣದಲ್ಲಿ, ಧರ್ಮದಲ್ಲಿ ಆಚಾರ-ವಿಚಾರಗಳಲ್ಲಿ ಭಾಷೆಯಲ್ಲಿ ಹಾಗೂ ದೈಹಿಕವಾಗಿ ರೂಪಿನಲ್ಲಿ ವ್ಯತ್ಯಾಸವಿತ್ತು. ಈ ಕಾರಣದಿಂದ ಯುರೋಪಿಯನ್ನರು ನಿಗ್ರೋಗಳನ್ನು ಕಡೆಗಣಿಸಿದ್ದರೆಂದು ವಿವರಿಸಬಹುದಾದಾರೂ, ಆದರೆ ಭಾರತದ ಸವರ್ಣೀಯ ಹಿಂದುಗಳಿಗೂ ದಲಿತ ಹಿಂದೂಗಳಿಗೂ ಯಾವ ವ್ಯತ್ಯಾಸವೂ ಇಲ್ಲ. ಆದರೂ ದಲಿತರನ್ನು ಯಾಕೆ ಹೀಗೆ ಕಾಣಲಾಗುತ್ತಿತ್ತು ಎಂಬ ಸಂಗತಿ ಮಾತ್ರ ಇಂತಹ ಆತ್ಮಕತೆಗಳನ್ನು ಓದುವ ಸಹೃದಯನಿಗೆ ಕಾಡುವ ಪ್ರಶ್ನೆಯಾಗಿದೆ.

ಅಲ್ಲಿ ವರ್ಣ ಸಮಾಜವಿದ್ದರೆ ಇಲ್ಲಿ ವರ್ಗ ಸಮಾಜ ದಲಿತರನ್ನು ಮಾತ್ರವಲ್ಲದೆ ಬಡವರನ್ನು ಬಡತನವನ್ನು ಶೋಷಿತ ಗುಲಾಮತನದಲ್ಲಿ ವರ್ತಿಸುತ್ತದೆ. ಬಡತನ ಮತ್ತು ಪ್ರತಿಭೆಗಳ ನಡುವಣದ ಸಂಬಂಧ "ಊರು ಕೇರಿ" ಮತ್ತು "ಮಣೆಗಾರ"ದ ವಸ್ತು. ದಲಿತ ಸಾಹಿತಿಗಳ ಆತ್ಮಕಥೆ ಓದುವುದು ಏಕಕಾಲಕ್ಕೆ ಆಸಕ್ತಿ ಮತ್ತು ಆತಂಕಗಳನ್ನು ಹುಟ್ಟಿಸುತ್ತದೆ. ಒಂದು ಹೊಸ ಅನುಭವ ಲೋಕವೊಂದರ ಶೋಧನೆಯನ್ನು ಇದು ನಡೆಸುತ್ತದೆ. ಸವರ್ಣೀಯ ಸಮಾಜದ ಹಿಂಸೆ ಆತ್ಮಕಥನದ ಸಾಹಿತ್ಯಾಕೃತಿಯಲ್ಲಿಯೇ ಎದ್ದು ಕಾಣುತ್ತದೆ. ಮಹಾರಾಷ್ಟ್ರೀಯ ಅಥವಾ ಕನ್ನಡದ ದಲಿತ ಲೇಖಕರ ಆತ್ಮಕಥನಗಳನ್ನು ಓದಿದಾಗ ಒಂದು 'ಬೋನ್ಸಾಯ್' ಮರವನ್ನು ಕಂಡ ಅನುಭವವಾಗುತ್ತದೆ. ಊರುಕೇರಿ ಮತ್ತು ಮಣೆಗಾರ ಆಕಾರದಲ್ಲಿ ಚಿಕ್ಕದಾದ ಆತ್ಮಕಥನವಾದರೂ ಅದರ ಒಡಲಾಳದಲ್ಲಿ ಹಲವಾರು ಕಾದಂಬರಿಗಳನ್ನು ಅರಗಿಸಿಕೊಂಡಿದೆ.

ಒಂದು ದಲಿತ ಆತ್ಮಕಥನಕ್ಕೆ, ಇತರ ಸಾಹಿತಿಗಳ ಆತ್ಮಕಥನಕ್ಕೂ ಹಲವಾರು ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ. ಸಾಮಾನ್ಯ ಆತ್ಮಕಥನವೆಂದರೆ ಅದರಲ್ಲಿ ಸಾಹಿತಿಯ ವಯಕ್ತಿಕ ವಿಚಾರಗಳು, ಅವನ ಬಾಲ್ಯ, ಊರು, ತಾನು ಕಂಡಂತಹ ಪ್ರಕೃತಿ, ಜನ, ಭಾಷೆ, ಆಚಾರ-ವಿಚಾರಗಳು ತನ್ನ ನೆಲೆದ ಅಭಿಮಾನ ಇತ್ಯಾದಿಗಳೆಲ್ಲ ಅಲ್ಲಿ ಮುಖ್ಯವಾಗಿರುತ್ತದೆ. ಉದಾಹರಣೆಗೆ ಕಾರಂತರ "ಮರಳಿ ಮಣ್ಣಿಗೆ" "ಹುಚ್ಚು ಮನಸ್ಸಿನ ಹತ್ತು ಮುಖಗಳು." ಆದರೆ ದಲಿತ ಆತ್ಮಕಥನದಲ್ಲಿ ಇವುಗಳು ಬಹಳ ಸಂಕ್ಷಿಪ್ತವಾಗಿ ಕಾಣಿಸಿಕೊಳ್ಳುತ್ತವೆ. ಇಲ್ಲಿ ಮುಖ್ಯವಾಗುವುದು ಅವರ ಬದುಕು, ಬದುಕಿನ ರೀತಿ-ನೀತಿ, ಆ ಸಮಾಜ ಯಾವ ರೀತಿಯ ಬದುಕನ್ನು ನಿಡಿತ್ತು ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ವಯಕ್ತಿಕ ವಿಚಾರಗಳಿಗಿಂತ ಒಂದು ಜನಾಂಗದ, ಒಂದು ವರ್ಗದ, ಒಟ್ಟಾರೆ ಸಾಮೂಹಿಕ ವಿಚಾರ-ಸಂಗತಿಗಳು ಮುಖ್ಯವಾಗುತ್ತದೆ. ಇದು ದಲಿತ ಆತ್ಮಕಥೆಗಳ ಒಂದು ವಿಶಿಷ್ಟತೆ.

ವ್ಯಕ್ತಿಯು ಆತ್ಮಕಥನವನ್ನು ಬರೆಯುವ ಮೊದಲೇ ತನ್ನ ಬದುಕಿನ ಸುತ್ತಮುತ್ತಲ ಜಗತ್ತನ್ನು ತನ್ನ ಬರವಣಿಗೆಯಲ್ಲಿ ಚಿತ್ರಿಸಿರುತ್ತಾನೆ. ಈ ಚಿತ್ರಣಕ್ಕೆ ಆತ್ಮಕಥನವೇ ಮೂಲ ಎಂದಲ್ಲ. ಅದಕ್ಕೂ ಮೊದಲು ಕುವೆಂಪುರವರ 'ಕಾನೂರು ಹೆಗ್ಗಡತಿ' ಮಲೆಗಳಲ್ಲಿ ಮದುಮಗಳು, ಕಾರಂತರ 'ಮರಳಿ ಮಣ್ಣಿ'ಗೆ ಮಾಲಗತ್ತಿಯವರ ಕಾರ್ಯ ಇವೇ ಮೊದಲಾದ

ಮಾಲಗತ್ತಿಯವರ ಕಾರ್ಯ ಇವೇ ಮೊದಲಾದ ಕಾದಂಬರಿಗಳು ಲೇಖಕನ ಬದುಕಿನ ಆಗು-ಹೋಗುಗಳನ್ನು ಪರೋಕ್ಷವಾಗಿ ಪ್ರತಿಬಿಂಬಿಸುವಂತಿರುತ್ತದೆ.

ದಲಿತ ಆತ್ಮಕಥೆಗಳಲ್ಲಿ ಇರುವಂತೆ ಸಾಮಾನ್ಯವಾಗಿ 'ಊರುಕೇರಿ' ಹಾಗೂ 'ಮಣೆಗಾರ' ಈ ಎರಡೂ ಆತ್ಮಕಥನದಲ್ಲೂ ಬಡತನ, ರೊಚ್ಚು, ಅವಮಾನ ಇತ್ಯಾದಿಗಳೆಲ್ಲಾ ಇವೆ. ಆದರೆ ಈ ಕೃತಿಗಳಲ್ಲಿ ಹೊಸ ನಿರೀಕ್ಷೆ ಇದೆ. ಅದೇನೆಂದರೆ ಹೇಳುವ ವಿಚಾರಗಳನ್ನು ಬಹಳ ಸೃಜನಾತ್ಮಕವಾಗಿ ಹೇಳಲಾಗಿದೆ. ಅಂದರೆ ವಸ್ತುವನ್ನು ನಿರ್ವಹಿಸುವ ಧ್ವನಿ ವಿಭಿನ್ನವಾಗಿದ್ದು, ಇತರ ಆರಂಭದ ದಲಿತ ಸಾಹಿತ್ಯ ಕೃತಿಗಳಿಂದ ಚೇತೋಹಾರಿಯಾಗಿದೆ. ತಮ್ಮ ಬದುಕಿನಲ್ಲಿ ಕಂಡುಂಡ ನೋವು, ಅವಮಾನಗಳನ್ನು ಊರುಕೇರಿಯಲ್ಲಿ ಸಿದ್ಧಲಿಂಗಯ್ಯ ಅವರು ಸ್ವಲ್ಪ ವಕ್ರೀಕರಣದ ಮೂಲಕ ಅವನ್ನು ದಾಟಲೆತ್ನಿಸಿದ್ದಾರೆ.

ದಲಿತ ಸಾಹಿತ್ಯದ ಆರಂಭದ ಕೋಪ, ಬರವಣಿಗೆಯ ರೊಚ್ಚು, ಇವೇ ಮೊದಲಾದ ಸಂಗತಿಗಳು ಊರುಕೇರಿಯಲ್ಲಿ ಕಡಿಮೆಯಾದರೂ ಕವಿ ಹೇಳುವ ವಿಚಾರವನ್ನು ಅಬ್ಬರವಾಗಿ ಹೇಳದೆ ಬದುಕಿನ ವಾಸ್ತವ ಸಂಗತಿಗಳನ್ನು ಸಮಾಜಕ್ಕೆ ಅಲ್ಲಿನ ಜನರಿಗೆ ಮನಮುಟ್ಟುವಂತೆ ಹೇಳುವ ಕ್ರಿಯೆ ಈ ಆತ್ಮಕಥನಗಳಲ್ಲಿ ವಿಶಿಷ್ಟವಾಗಿದೆ.

ಸಿದ್ಧಲಿಂಗಯ್ಯನವರ ವಿಶಿಷ್ಟತೆ ಅವರ ಶೈಲಿಯಲ್ಲಿದೆ. ಇಲ್ಲಿ ಅತ್ಯಂತ ಬುದ್ಧಿವಂತ ತುಂಟನೊಬ್ಬ ವ್ಯಂಗ್ಯ, ಪ್ರಬಂಧ ಧ್ವನಿ ಇತ್ಯಾದಿಗಳನ್ನು ಬಳಸಿ ಹೊಸ ಬಗೆಯ ಆತ್ಮ ಪ್ರತಿಮೆಗಳನ್ನು ಸೃಷ್ಟಿಸುತ್ತಿದ್ದಾನೆ. ಭಾರತೀಯ ಸಮಾಜದಲ್ಲಿ 'ಅವಮಾನಿತ' ವರ್ಗಗಳು, 'ಪರಾಜಿ', ಗುಂಪುಗಳಿ ಪ್ರತಿಷ್ಠಿತರ ಎದುರಿಗೆ ಹೊಸ ರೀತಿಯ ಆತ್ಮ ವಿಶ್ವಾಸವನ್ನು ಸೃಷ್ಟಿಸಿಕೊಳ್ಳುವಂತಹ ಚೈತನ್ಯದ ಬರವಣಿಗೆ ಇದರಲ್ಲಿ ಎದ್ದು ಕಾಣುತ್ತದೆ. ಈ ದೃಷ್ಟಿಯಿಂದ 'ಊರುಕೇರಿ'ಯಲ್ಲಿ ದಲಿತ ವ್ಯಕ್ತಿತ್ವವನ್ನು ಹೊಸ ರೀತಿಯಲ್ಲಿ ಪ್ರತಿಮೀಕರಿಸುವ ಪ್ರಯತ್ನವಿದೆ. ರೋಷವನ್ನು ರಮಣೀಯವಾಗಿಸುವ ಬರವಣಿಗೆ ಇವರ ವಿಶಿಷ್ಟತೆ. ಸಿಟ್ಟು ಜೀವನದ ಸೂಕ್ಷ್ಮಗಳನ್ನು ಕಾಣುವ ತುಂಟತನವಾಗಿ ಭಾಷಾಂತರವಾಗುತ್ತದೆ.

'ಊರುಕೇರಿ' ಕೃತಿ ದಲಿತ ಸಾಂಸ್ಕೃತಿಕ ರಾಜಕಾರಣ ಪ್ರಜ್ಞಾಪೂರ್ವಕವಾಗಿ ನಂಬಿಕೊಂಡಿರುವ ಅನೇಕ ಕೀಳರಿಮೆಗಳನ್ನು ಕಳೆದು ಬೀಳಿಸುತ್ತದೆ.

ಉದಾ: ದಲಿತರಿಗೆ ಗತಕಾಲದ ಸಂಸ್ಕೃತಿಯಲ್ಲಿ ಹಿರಿಮೆಯ ಪಾಲುಗಾರಿಕೆ ಇಲ್ಲ ಎಂಬ ನಂಬಿಕೆಯನ್ನು ಸಿದ್ಧಲಿಂಗಯ್ಯ ತಮ್ಮ ದೊಡ್ಡಪ್ಪನ ಬಗ್ಗೆ ಬರೆಯುತ್ತಾ ಹಂಗಿಸುತ್ತಾರೆ. ಆದರೆ, ಅದು ನೇರವಾಗಿ ಅಲ್ಲ. ಆ ದೊಡ್ಡಪ್ಪ ಕೇರಿಯ ನಾಯಕನಾಗಿ ಇಡೀ ಊರಿಗೆ ಗಣ್ಯವ್ಯಕ್ತಿ. ಎಲ್ಲಕ್ಕಿಂತ ಮುಖ್ಯವಾಗಿ ಆತ ಜೈಮಿನಿ ಭಾರತ ಓದುತ್ತಿದ್ದ ವ್ಯಕ್ತಿ. ಆದರೆ ಸಾಲಗಾರನಾಗಿ ಆ ಅವಮಾನ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ದಲಿತ ಕುಲದ ನೋವು ಮತ್ತು

ಆತ್ಮಗೌರವಗಳ ಈ ಕಿರು ಪ್ರಸಂಗವು ಒಂದು ದೊಡ್ಡ ಕಾದಂಬರಿಗೆ ವಸ್ತುವಾಗಬಲ್ಲ ಅಗಾಧ ವಿಚಾರ ಸರಣಿಗಳು ಈ ಆತ್ಮಕಥನಗಳಲ್ಲಿ ಎದ್ದು ಕಾಣುತ್ತದೆ.

'ಊರುಕೇರಿ'ಯಲ್ಲಿ ಮುಖ್ಯವಾಗಿ ಬಾಲ್ಯ ಮತ್ತು ಕಾಲೇಜು ದಿನಗಳಷ್ಟೇ ಕುರಿತಾದ ವಿಚಾರಗಳು ಹೆಚ್ಚಾಗಿ ಬಂದಿರುವುದು ಕುತೂಹಲವೆನಿಸುತ್ತದೆ. ಯಾವುದೇ ಆತ್ಮಕಥನದಲ್ಲಿ ಲೇಖಕ ತನ್ನ ಬಾಲ್ಯದ ನೆನಪಿನಿಂದಲೇ ಕಥನವನ್ನು ಆರಂಭಿಸುತ್ತಾನೆ. ಅದು ಕುವೆಂಪುರವರಿಂದ ಹಿಡಿದು ಇಂದಿನ ಲೇಖಕರವರೆಗೂ ಕೂಡ ಹಾಗೆ ವರ್ಣಿಸುವುದು ಸಹಜ. ಬಾಲ್ಯ ಕಾಲ ಬರೀ ವಯಸ್ಸಲ್ಲ. ಅದೊಂದು ಸಮೃದ್ಧ ಸೃಜನಶೀಲ ಸ್ಥಿತಿ. ಬಾಲ್ಯ ಕಾಲದ ವಿವರಗಳು ಸಮೃದ್ಧವಾಗಿ ಅರಳಿ, ಒಂದರೊಳಗೊಂದು ಬೆರೆತು ಬೆಳೆಯುತ್ತಾ ಹೋಗುವ ಸ್ಥಿತಿ ನಿಜಕ್ಕೂ ರೋಮಾಂಚನಕಾರಿ.

ಆತ್ಮಕಥನಗಳಲ್ಲಿ ಲೇಖಕ ತಾನು ಹುಟ್ಟಿ ಬೆಳೆದ ಊರು, ನೆಲ, ಜನ ಎಲ್ಲವನ್ನು ಪ್ರೀತಿಸುವಂತೆ ನಗರಗಳ ಜೀವನವನ್ನು ಇನ್ನು ಕಂಡರಿಯದ ಲೇಖಕ ನಗರದ ನಾಗರೀಕ ಬದುಕಿಗೆ ನಿಬ್ಬೆರಗಾಗುತ್ತಾನೆ. ಸಾಮಾನ್ಯ ಕನ್ನಡದ ಆತ್ಮಕಥನಗಳಲ್ಲಿ ನಗರಗಳು ಇದ್ದೂ ಇಲ್ಲದಂತೆ ಇವೆ. ಗ್ರಾಮೀಣ ಜೀವನದ ವಿವರಗಳು ಬಂದಷ್ಟು ಉತ್ಕಟವಾಗಿ ನಗರಗಳು ಬರುವುದಿಲ್ಲ.

'ಊರುಕೇರಿ'ಗಿಂತಲೂ 'ಮಣೆಗಾರ'ದಲ್ಲಿ ಕಂಡು ಬರುವ ಬಡತನದ ಚಿತ್ರಣ ಹೃದಯ ವಿದ್ರಾವಕವಾದುದು. ಇಲ್ಲಿ ಬರುವ ಅಸ್ಪೃಶ್ಯನೊಬ್ಬ ಬಡತನದ ಬೇಗೆಯ್ನು ತಾಳಲಾರದೆ ಹಣ ಕೊಡುತ್ತಾರೆಂದು ಮಕ್ಕಳಾಗದಂತೆ ಆಪರೇಷನ್ ಮಾಡಿಸಿಕೊಂಡು, ಆಸ್ಪತ್ರೆಯಲ್ಲಿ ಕೊಡುವ ಊಟವನ್ನು ಮನೆ-ಮಂದಿಗೆ ಹಂಚುವ ಚಿತ್ರಣದಲ್ಲೇ ಲೇಖಕರ ಮನಸ್ಥಿತಿ ಅರಿವಾಗುತ್ತದೆ. ಇಲ್ಲಿ ಹೊಟ್ಟೆಯನ್ನು ಕೇಂದ್ರವಾಗಿಸಿಕೊಳ್ಳುವ ಬಡತನದ ನೋವು ಉಳಿದ ವ್ಯಕ್ತಿಯ ವ್ಯಕ್ತಿತ್ವವನ್ನು ಕುಗ್ಗಿಸುತ್ತಾ ಹೋಗುತ್ತದೆ. ಒಂದು ಕಡೆ ವರ್ಗ ಸಂಘರ್ಷದಲ್ಲಿ ಅನ್ನಕ್ಕಿಂತ ದುಡ್ಡೇ ಮುಖ್ಯ ಎಂದು ಹೇಳುವ ಶ್ರೀಮಂತರ ಸಮಾಜದಲ್ಲೇ ಅನ್ನವಿಲ್ಲದೆ ಬದುಕಲು ಸಾದ್ಯವಿಲ್ಲದ, ಅದಕ್ಕಾಗಿ ಏನನ್ನಾದರೂ ಮಾಡುವ ದಾರುಣ ಪರಿಸ್ಥಿತಿಯನ್ನು 'ಮಣೆಗಾರ' ಪ್ರತಿಬಿಂಬಿಸುತ್ತದೆ.

ಮಣೆಗಾರ ಕೇವಲ ದಲಿತ ಆತ್ಮಕಥೆಯಾಗಿರದೆ ಅದೊಂದು ಬಡವನ, ಬಡತನದ, ಜೀವನ ಚರಿತ್ರೆಯನ್ನು ಹೇಳುತ್ತದೆ. ಸಮಾಜದಲ್ಲಿ ತುಳಿತಕ್ಕೆ ಒಳಗಾದ ಜನರನ್ನು ಅವರ ದುಸ್ಥಿತಿಯನ್ನು ಆ ಸಮಾಜ ಮತ್ತಷ್ಟು ಹೀನಾಯ ಸ್ಥಿತಿಯಲ್ಲಿ ಬಳಸಿಕೊಳ್ಳುತ್ತದೆಯೇ ಹೊರತು, ಊರಿನಲ್ಲಿ ಹಳೆ ಮೆಟ್ಟನ್ನು ರಿಪೇರಿ ಮಾಡ್ತಾ ಉಟ್ಕೊಳ್ಳೊಕೆ ಇರೋ ಒಂದು ಸೀರೆಯನ್ನೇ ಹೊದ್ಕೊಳುಕು ಬಳಸುವ ಆ ಬಡವ, ಗಂಡ-ಹೆಂಡತಿಯರ ನೋವಿಗೆ ಸ್ಪಂದಿಸದ ಸಮಾಜದ ವಿರೋಧಾಭ್ಯಾಸವನ್ನು ಇದು ತೆರೆದಿಡುತ್ತದೆ. 'ಮಣೆಗಾರದಲ್ಲಿ ಹಸಿವಿನ ದಾರುಣತೆಯನ್ನು ತಾಳಲಾರದೆ ಕಳ್ಳತನದಿಂದ ತಿಂದ ಕಡ್ಲೆಕಾಯಿಯ ಜೊತೆಗೆ ರಾಮಯ್ಯನವರು ತಾನು ಮಾಡಿದ

ತಪ್ಪನ್ನು ಕ್ಷಣಮಾತ್ರದಲ್ಲಿ ಅರಿತು ಅದಮ್ನ ತಿದ್ದುವ ಪ್ರಯತ್ನದೊಂದಿಗೆ ಆತನ ಒಳ್ಳೆಯ ಮನಸ್ಸು ಅರಿವಾಗುತ್ತದೆ.

ಇಲ್ಲಿ ರಾಮಯ್ಯನವರು ಬಾಲ್ಯದಲ್ಲಿ 'ದೇವರು' ಎಂದರೆ ಬಹಳ ಗೌರವದಿಂದ ಕಾಣುತ್ತಿದ್ದ. ಜೊತೆಗೆ ಇಲ್ಲಿ ಬರುವ ವ್ಯಂಗ್ಯದ ನುಡಿಗಳು ಇತಿಹಾಸವನ್ನು ನೆನಪಿಸುವಂತಹುದು. ಅದೆಂದರೆ 'ಗುಡಿಯನ್ನೇ ಕಟ್ಟಿದ ಜನರನ್ನು, ಆ ಗುಡಿಯೊಳಗೆ ಪ್ರವೇಶಿಸದಂತೆ ತಡೆಯುವುದು' ನಿಜಕ್ಕೂ ಒಂದು ವ್ಯಂಗ್ಯವೇ ಸರಿ. ಇಲ್ಲಿ ಕುರುಬ ಜನಾಂಗಕ್ಕೆ ಸೇರದವನೆಂದು ಕನಕನನ್ನು ದೇವಸ್ಥಾನದ ಒಳ ಪ್ರವೇಶಕ್ಕೆ ಅಡ್ಡಿಯನ್ನುಂಟು ಮಾಡಿದ ಪ್ರಸಂಗದ ಜೊತೆಗೆ ೧೨ನೇ ಶತಮಾನದ ಸಮಾಜೋ ಧಾರ್ಮಿಕ ಆಂದೋಲನದ ಕೇಂದ್ರ ವ್ಯಕ್ತಿ ಬಸವಣ್ಣ ಸಾರ್ವಜನಿಕರ, ಸಮಾಜದ ಎಲ್ಲಾ ವರ್ಗದವರಿಗೆ ಸಮಾನವಾಗಿ ಪ್ರವೇಶವಿರದ ದೇವಸ್ಥಾನವನ್ನೇ ತೊರೆದು ತನ್ನ ದೇಹದಲ್ಲೇ ದೇಗುಲವನ್ನು, ಮನಸ್ಸಿನಲ್ಲಿ ದೇವರನ್ನು ಇಟ್ಟು ಆರಾಧಿಸುವ ವ್ಯಕ್ತಿಗಳು ನೆನಪಾಗುತ್ತಾರೆ. ಜಾತಿಯ ವರ್ಣನೆಯಲ್ಲಿ ಹೊಲಸು ತಿಂಬುವವನೆ ಹೊಲೆಯ ಎಂದು ಹೇಳಿದ ಆ ಸಮಾಜಕ್ಕೂ, ಇವತ್ತಿನ ಈ ದಲಿತರ ಆತ್ಮಕಥನಗಳ ವಿಶ್ಲೇಷಣೆ ಇಂದಿನ ಮುಂದುವರೆದ ೨೦ನೇ ಶತಮಾನದಲ್ಲಿ ಇಂತಹ ಭೀಕರ ಸಮಾಜದ ಅಸ್ತಿತ್ವಕ್ಕೂ ಅಜಗಜಾಂತರ ವ್ಯತ್ಯಾಸವನ್ನು ಕಾಣುತ್ತೇವೆ. ಆದರೂ ಇಂತಹ ಆತ್ಮಕಥೆಗಳು ಅವರ ಜೀವನದರ್ಶನದೊಂದಿಗೆ ಸಮಾಜದ ವಾಸ್ತವವನ್ನು ಹಿಡಿದಿಡುವ ಕನ್ನಡಿಯಂತಿದೆ.

ಊರುಕೇರಿ ಮತ್ತು ಮಣೆಗಾರ ಈ ಎರಡೂ ಆತ್ಮಕಥೆಗಳಲ್ಲೂ ಕೂಡ ದಲಿತ ಸಾಹಿತ್ಯದ ಅಬ್ಬರ, ಆಕ್ರೋಶಗಳಿಗಿಂತ 'ಅಸ್ಪೃಶ್ಯತೆಯನ್ನು ಆಚರಿಸುವ, ಅದನ್ನು ಸಮಾಜದ ಆಳದಲ್ಲಿ ಬೇರುಬಿಡುವ ಇತರ ಜನಾಂಗದವರ ಬಗ್ಗೆ ನೀಚ ಭಾವನೆಗಳಾಗಲೀ ನೇರವಾಗಿ ವ್ಯಕ್ತವಾಗದೆ ಅದನ್ನು ಲೇಖಕರು ತಮ್ಮ ಸೃಜನಾತ್ಮಕ ಬರವಣಿಗೆಯಲ್ಲಿ ಪರೋಕ್ಷವಾಗಿ ತಂದಿದ್ದಾರೆ.

ತುಂಬಾಡಿಯಲ್ಲಿ ಲಿಂಗಾಯತ, ಜೈನ ಮತ್ತು ಬಿಟ್ಟರೆ ಉಳಿದೆಲ್ಲಾ ಜಾತಿಗಳು ಒಟ್ಟೊಟ್ಟಿಗೆ ಬಾಳುತ್ತಿದ್ದವು ಎಂದು ಹೇಳುವ ಮೂಲಕ ರಾಮಯ್ಯನವರು ಬದಲಾಗುತ್ತಿರುವ ಸಮಾಜದ ಬಗ್ಗೆ, ಹಿಂದಿನಿಂದ ಆಚರಿಸಿಕೊಂಡು ಬರುತ್ತಿದ್ದ ಮೂಢ ನಂಬಿಕೆಗಳ ಬಗ್ಗೆ ಧನಿ ಎತ್ತಿದ್ದಾರೆ. ಇದಕ್ಕೆ ಉದಾ: ವಡ್ಡಗೆರೆಯ ಒಕ್ಕಲಿಗರಿಗೆ ಸೇರಿದ್ದ ಹುಲಿಯಪ್ಪಜ್ಜ ತನ್ನ ಪಾಲಿನ ರೊಟ್ಟಿಯನ್ನು ಹೊಲೆಮಾದಿಗ ಹುಡುಗರಿಗೆ ಹಂಚಿ ತಿನ್ನುವ ಪ್ರಸಂಗವನ್ನು ತಿಳಿಯಪಡಿಸುವ ರಾಮಯ್ಯನವರ ಮಣೆಗಾರ ಆತ್ಮಕಥನ ಅಂದಿನ ಸಮಾಜದಲ್ಲಿ ಉದಾತ್ತ ವ್ಯಕ್ತಿಗಳು ಸವರ್ಣೀಯರಲ್ಲೂ ಇದ್ದರು ಎಂಬುದಕ್ಕೆ ಸಾಕ್ಷಿಯಾಗಿ ತೋರಿದಂತಿದೆ.

ಸಾಮಾನ್ಯವಾಗಿ ಬಡತನವೆಂಬುದು ಅದು ದಲಿತರಲ್ಲಿ ಅಸ್ಪೃಶ್ಯರಲ್ಲಿ ಹೆಚ್ಚಾಗಿತ್ತು ಏಕೆಂದರೆ ಅವರಿಗೆ ಸಮಾಜ ಯಾವುದೇ ರೀತಿಯ ಸವಲತ್ತುಗಳನ್ನು ನೀಡಿರಲಿಲ್ಲ. ಜೊತೆಗೆ

ಶಿಕ್ಷಣದಿಂದ ವಂಚನೆಗೆ ಒಳಗಾದ ಸಮಾಜದ ಕೆಳವರ್ಗದವರು ಶಾಲಾ ಕಾಲೇಜಿಗೆ ಹೋಗಿ ಓದು ಬರಹದಲ್ಲಿ ತೊಡಗಿದರೆ ಅವರು ಉಪವಾಸದಲ್ಲಿ ಕಾಲ ಕಳೆಯಬೇಕಾಗಿತ್ತು. ಏಕೆಂದರೆ ಸ್ವತಂತ್ರ ನಂತರದ ಬರಗಾಲದ ಸಮಾಜವನ್ನು ಚಿತ್ರಿಸುವ ಮಣೆಗಾರ, ಸ್ವತಃ ಲೇಖಕರೇ ಬಟಾಣಿ ಬೇಯಿಸಿ ತಿನ್ನುವ ಸ್ಥಿತಿಯನ್ನು ಹೇಳುವುದಲ್ಲದೆ ಬಡತನದ ಬೇಗೆಯ್ಲಿ ಬೆಯುತ್ತಿರುವ ಜನ ತಮ್ಮ ಜೀವನದ ಹವ್ಯಾಸಗಳನ್ನು ತೊರೆದು ಶಿಕ್ಷಣವನ್ನು ನಂಬಿ ಹೋಗದ ಸ್ಥಿತಿಯಲ್ಲಿದ್ದವರು.

ಊರುಕೇರಿ, ಮಣೆಗಾರ ಈ ಎರಡೂ ಆತ್ಮಕಥನದಲ್ಲಿ ಲೇಖಕರಿಬ್ಬರೂ ತಮ್ಮ ಬಾಲ್ಯದ ಬದುಕನ್ನು ಸವಿಸ್ತಾರವಾಗಿ ತರುತ್ತಾರೆ. ದಲಿತ ಆತ್ಮಕಥನಗಳಲ್ಲಿ ಸಾಮಾನ್ಯವಾಗಿ ಲೇಖಕರಿಗೆ ತಮ್ಮ ಜೀವನದಲ್ಲಿ ನೋಡಿದ ಪರಿಸರ, ಅಲ್ಲಿನ ಜನರ ಸ್ವಭಾವ, ವಿದ್ಯಾಭ್ಯಾಸದ ಸಂದರ್ಭದಲ್ಲಿ ಅವರಿಗಾದ ಅವಮಾನಗಳು, ಇವೇ ಮೊದಲಾದ ಸಂಗತಿಗಳು ಅವರು ದೈಹಿಕವಾಗಿ ಬೆಳೆಯುತ್ತಾ ಹೋದಂತೆ ಮಾನಸಿಕವಾಗಿ ಅವರು ಅನುಭವಿಸಿದ ಈ ಅನುಭವಗಳೆಲ್ಲಾ ಒಂದು ಹಂತದಲ್ಲಿ ಸ್ಪಷ್ಟ ರೂಪವನ್ನು ತಾಳುತ್ತದೆ. ಈ ವಿಚಾರಗಳು ಲೇಖಕರನ್ನು ವಿಚಾರ ಲಹರಿಗೆ ಏಣಿ ಮಾಡಿಕೊಡುತ್ತದೆ. ಆದ್ದರಿಂದ ದಲಿತ ಸಾಹಿತ್ಯವಾಗಲೀ, ಅಥವಾ ಆತ್ಮಕಥೆಯಾಗಲೀ ಅದರಲ್ಲಿ ಕಮಡುಬರುವ ಇಂತಹ ಪ್ರಸಂಗಗಳಿಂದ ಮುಂದೊಂದು ದಿನ ಆತ ಅಕ್ಷರಸ್ಥ, ನಾಗರೀಕನಾಗಿ ತನ್ನ ಸಮಾಜದ ಈ ತಾರತಮ್ಯದ ವಿರುದ್ಧ ದನಿ ಎತ್ತುತ್ತಾನೆ ಎಂಬುದಕ್ಕೆ ಈ ಎರಡೂ ಆತ್ಮಕಥನಗಳು ಸಾಕ್ಷಿಯಾಗಿನಿಂತಿವೆ. ಆದರೆ, ಕೋಪ, ರೋಷ, ರೊಚ್ಚಿಲ್ಲದ ತುಂಬಾಡಿ ರಾಮಯ್ಯ 'ಮಣೆಗಾರ' ಮತ್ತು ಸಿದ್ಧಲಿಂಗಯ್ಯನವರ ಊರುಕೇರಿಯ ಬರವಣಿಗೆಯ ಶೈಲಿ ನಿಜಕ್ಕೂ ಸಾಮ್ಯತೆಯನ್ನು ತೋರುತ್ತದೆ. ಜೊತೆಗೆ ಈ ಇಬ್ಬರು ಲೇಖಕರು ಬರವಣಿಗೆಯಲ್ಲಿ ನುರಿತ ವ್ಯಕ್ತಿಗಳಾಗಿ ಕಾಣುತ್ತಾರೆ.

ಅಡಿಟಿಪ್ಪಣಿ

೧. ಬಡವರ ನಗುವಿನ ಶಕ್ತಿ : ಸಂ.ಎಚ್.ದಂಡಪ್ಪ, ಪುಟ ೨೬೦

೨. ಅದೇ ಪುಟ : ೨೬೪

೩. ದಲಿತ ಮಾರ್ಗ : ಸಂ. ಡಾ. ಅರವಿಂದ ಮಾಲಗತ್ತಿ, ಪುಟ ೩೯೬.

ಉಪಸಂಹಾರ

ಈ ಪ್ರಸ್ತುತ ನಿಬಂಧದ ಒಟ್ಟಾರೆ ಪಕ್ಷಿನೋಟವನ್ನು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ. ಆರಂಭದಿಂದ ನಾವು ದಲಿತ ಆತ್ಮಕಥೆಗಳ ತೌಲನಿಕ ನೋಟವನ್ನು ಮಾತ್ರ ತೆಗೆದುಕೊಂಡರೂ ಸಹ ಯಾವುದೇ ದಲಿತ ಆತ್ಮಕಥೆಗಳ ಹಿನ್ನೆಲೆಯಲ್ಲಿ ಒಟ್ಟಾರೆ ಇಡೀ ದಲಿತ ಸಾಹಿತ್ಯಕ್ಕೆ ಸಂಬಂಧಿಸಿದಂತಹ ಇತರ ಪ್ರಕಾರಗಳೂ ಮುಖ್ಯವಾಗಿಸುತ್ತವೆ. ಏಕೆಂದರೆ ಯಾವುದೇ ಒಬ್ಬ ಲೇಖಕ ಅಥವಾ ಸಾಹಿತಿ ಒಂದು ಕೃತಿಯನ್ನು ರಚಿಸಿದ್ದಾನೆ ಎಂದರೆ ಅದು ಅವನ ಲೇಖನದ ಉದ್ದೇಶವನ್ನು ಮಾತ್ರ ಹೇಳದೆ ಎಲ್ಲೋ ಒಂದು ಕಡೆಯಾದರೂ ಅವನ ಜೀವನದ ಪ್ರತಿಬಿಂಬವನ್ನು ಸಾರುತ್ತಿರುತ್ತದೆ. ಇದಕ್ಕೆ ಈ ಪ್ರಕಾರಕ್ಕೆ ದಲಿತ ಸಾಹಿತ್ಯ ಒಂದು ಉತ್ತಮ ಉದಾಹರಣೆಯಾಗಿದೆ. ಯಾವುದೇ ದಲಿತ ಸಾಹಿತಿ ಕೃತಿಯನ್ನು ರಚಿಸಿದ್ದಾನೆ ಎಂದರೆ ಮುಖ್ಯವಾಗಿ ಅವನ ಜೀವನ, ಬಾಲ್ಯ, ಅನುಭವ, ಆಡುಭಾಷೆ, ನೋವು-ನಲುವುಗಳೇ ಬಿಂಬಿತವಾಗಿರುತ್ತದೆ.

ಉದಾ: ದೇವನೂರು ಮಹದೇವ, ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯ ಚೆನ್ನಣ್ಣ ವಾಲೀಕಾರ, ಸೋಮಶೇಖರ ಇಮ್ರಾಪುರ, ಮನಜ ಮುಳ್ಳೂರು ನಾಗರಾಜ್, ಕುಂ.ವೀರಭದ್ರಪ್ಪ ಮೊದಲಾದವರ ಎಲ್ಲ ಸಾಹಿತ್ಯ ಪ್ರಕಾರಗಳಲ್ಲೂ ಗುರುತಿಸಬಹುದಾಗಿದೆ. ಆದ್ದರಿಂದ ದಲಿತ ಆತ್ಮಕತೆ ಎಂದರೆ ಕೇವಲ ಆತ್ಮಕತೆಗಳ ಅಧ್ಯಯನ ಮಾತ್ರವಾಗಿರದೆ ಇಡೀ ದಲಿತ ಸಾಹಿತ್ಯ ಒಂದು ನೋಟವೇ ಆಗಿರುತ್ತದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಲಿತ ಸಾಹಿತ್ಯಕ್ಕೆ ಅತ್ಯಂತ ಮಹತ್ವದ ಸ್ಥಾನ, ಪರಂಪರೆ ಇದೆ ಎಂಬುದಕ್ಕೆ ಅಲ್ಲಗಳೆಯುವಂತಿಲ್ಲ. ಕನ್ನಡ ದಲಿತ ಸಾಹಿತ್ಯ ಚಳುವಳಿಯು ಮರಾಠಿ ದಲಿತ ಸಾಹಿತ್ಯ ಚಳುವಳಿ ಹಾಗೂ ಡಾ.ಅಂಬೇಡ್ಕರ್, ರೋಹಿಯಾ, ಮಾರ್ಕ್ಸ್‌ವಾದದ ಪ್ರಭಾವ, ಪ್ರೇರಣೆಯಿಂದಲೇ ರೂಪುಗೊಂಡಿತು ಎಂಬುದೇನೋ ನಿಜ. ಆದರೆ ವಚನ ಸಾಹಿತ್ಯ ದಾಸ ಸಾಹಿತ್ಯ, ಆಧುನಿಕ ಕನ್ನಡ ಸಾಹಿತ್ಯ ಈ ನೆಲದೊಡಲಲ್ಲಿ ಮೂಡಿಬಂದ ಜನಪರ ಹೋರಾಟಗಳ ಪ್ರೇರಣೆಯೂ ಇಲ್ಲಿ ಮುಖ್ಯವೆನಿಸುತ್ತದೆ. ಆದ್ದರಿಂದ ದಲಿತ ಆತ್ಮಕಥೆ ಅಥವಾ ದಲಿತ ಸಾಹಿತ್ಯ ಸುಮಾರು ೧೨ನೇ ಶತಮಾನದಿಂದಲೂ ಕಂಡುಬಂದಿತ್ತೆಂದರೆ ತಪ್ಪಾಗಲಾರದು. ಕನ್ನಡ ಸಾಹತ್ಯ ಪರಂಪರೆಯನ್ನು ನಮ್ಮ ಪರಂಪರೆ ಎಂದು ಅಭಿಮಾನದಿಂದ ಕರೆದುಕೊಳ್ಳುವುದು ಕಷ್ಟ. ಹಾಗೆ ಆ ನಂಟನ್ನು ಬಿಟ್ಟುಬಿಡುವುದು ಕಷ್ಟ. ಪರಂಪರೆ ಎಂದರೆ ಅದೊಂದು ಕಾಲ ಪ್ರವಾಹ. ಈ ಪ್ರವಾಹದಲ್ಲಿ ಕಸ, ಕಡ್ಡಿ, ಗಲೀಜುಗಳ ಜೊತೆಗೆ ಪ್ರಾಣಕ್ಕೆ ಅವಶ್ಯಕವಾದ ನೀರು ಕೂಡ ಇರುತ್ತದೆ. ಈ ನೀರು ಎನ್ನುವುದೇ ಭಾಷೆ, ಜನಪರ ಮೌಲ್ಯ. ಜೀವ ಪರ ಧಾರ್ಮಿಕ ನಂಬಿಕೆಗಳೂ, ಸಂಸ್ಕೃತಿ, ಪುರಾಣ ಎಲ್ಲವೂ ಅಡಗಿದೆ. ನೀರನ್ನು ಸೋಸಿ ಕುಡಿಯುವ ಕೆಲಸವನ್ನು ಹೊಸ ಪಂಥ ಮಾಡಬೇಕು.

ಈ ಎಂತಹ ಎಚ್ಚರಿಕೆಯ ಕೆಲಸವನ್ನು ಕನ್ನಡ ದಲಿತ ಸಾಹಿತ್ಯ ಮಾಡುತ್ತಾ ಬಂದಿದೆ. ಸಾವಿರ ವರ್ಷದ ಸಾಹಿತ್ಯವನ್ನು ತಿರುವಿ ಹಾಕಿದರೆ ಅವನ ಅರಿವಿಗೆ ಬರುವುದು ಚಾತುರ್ವರ್ಣ ಪದ್ಧತಿ ಅನ್ವಯ ಸೃಷ್ಟಿಯಾದ ಸರಿಸಮ ಆಧಾರಿತ ಸಮಾಜದ ಚಿತ್ರಣದಲ್ಲಿ ದಲಿತರನ್ನು ಕುರಿತು ಕವಿಗಳು ಅಭಿವ್ಯಕ್ತಿಸಿದ ನಕಾರಾತ್ಮಕ ನಿಲುವುಗಳೇ ಎದ್ದು ಕಾಣುತ್ತದೆ. ಕಾಲಧರ್ಮವನ್ನು ಅರಿತು ಬರೆಯುವುದೇ ಅಂದಿನ ಅನಿವಾರ್ಯವಾಗಿತ್ತು.

'ಇತಿಹಾಸವನ್ನು ಮರೆತವರು' ಇತಿಹಾಸವನ್ನು ಸೃಷ್ಟಿಸಲಾರರು ಎಂಬ ಮಾತಿನಂತೆ ನಮ್ಮ ಇಡೀ ೨೦೦೦ ವರ್ಷಗಳ ಚರಿತ್ರೆಯನ್ನು ತೆಗೆದುಕೊಂಡರೆ ಅಲ್ಲಿ ಎದ್ದು ಕಾಣುವುದು 'ಕನ್ನಡ ಲಿಖಿತ ಸಾಹಿತ್ಯ ಅಕ್ಷರಲೋಕದ ಗುತ್ತಿಗೆದಾರರಿಂದ ದಾಖಲಾದ ಶಿಷ್ಟ ಪರಂಪರೆ' ಆದರೆ ಅಲಿಖಿತ ಸಾಹಿತ್ಯ ಅಕ್ಷರ ವಂಚಿತ ಕಾಯಕ ಜೀವಿಗಳ ಒಡಲೊಳಗಿಂದ ಮೂಡಿ ಬಂದ ಅನನ್ಯ ಜೀವ ಸಂವೇದನೆ! ಈ ಅನನ್ಯ ಜೀವ ಸಂವೇದನೆಯ ಸರಳ ಅಕ್ಷರಗಳೆಂದರೆ–ಗಾದೆಗಳು, ಒಗಟುಗಳು, ನುಡಿಗಟ್ಟುಗಳು ಮತ್ತು ಜಾನಪದ ಸಾಹಿತ್ಯ, ಆಟಗಳು ಇವು ಕಾಲಗರ್ಭದಲ್ಲಿ ಮೌಖಿಕವಾಗಿ ಬೆಳೆದು ಬಂದಂತಹ ಅನಕ್ಷರಸ್ಥರ ಸಾಹಿತ್ಯ. ಇವು ಎಷ್ಟು ಶಕ್ತಿಶಾಲಿಯಾದವೆಂದರೆ ಶಿಷ್ಟ ಸಾಹಿತ್ಯದ ಮೂಲ ಈ ಜನಪದ ಸಾಹಿತ್ಯವೆನ್ನಬಹುದು. ಅಷ್ಟು ಮಾತ್ರವಲ್ಲದೆ ಒಂದು ಮಹಾಕಾವ್ಯ ಮಂಡಿಸಲಾಗದ ಅರ್ಥ, ಆಶಯವನ್ನು ಒಂದು ಗಾದೆ, ಒಂದು ಒಗಟು, ಒಂದು ನುಡಿಗಟ್ಟು ಒಂದೇ ಸಾಲಿನಲ್ಲಿ ಮಂಡಿಸಿ ಬಿಡುತ್ತದೆ ಒಂದು ಬೃಹತ್ ಗ್ರಂಥ ಹೇಳಲಾಗದ ಮನುಕುಲದ ವಿಷಯಗಳನ್ನು ಜಾನಪದ ರೂಪಕ ಒಂದೇ ಶಬ್ಧದಲ್ಲಿ ಹೇಳಿಬಿಡುತ್ತದೆ.

ದಲಿತ ಚಳುವಳಿ ಮತ್ತು ಸಾಹಿತ್ಯ

ಒಂದು ಬರಹ ಪೂರ್ಣಗೊಳ್ಳಬೇಕಾದರೆ ಆ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಬಗೆಯ ಹಿನ್ನೆಲೆಗಳೂ ಮುಖ್ಯ. ಆದ್ದರಿಂದ ದಲಿತ ಆತ್ಮಕಥೆಗಳ ಅಧ್ಯಯನವಾದರೂ ದಲಿತ ಚಳುವಳಿ ನಮ್ಮ ಕನ್ನಡ ಸಾಹಿತ್ಯ ಪರಂಪರೆಯೊಂದಿಗೆ ಎಷ್ಟು ಶತಮಾನಗ ಇತಿಹಾಸವನ್ನು ಹೊಂದಿದೆ ಎಂಬುದು ಮುಖ್ಯವಾಗುತ್ತದೆ. ಹಾಗೆ ನೋಡಿದರೆ ಅನಕ್ಷರಸ್ಥ, ಕೆಳವರ್ಗದಿಂದ ರಚಿತವಾದ ಎಲ್ಲ ಜಾನಪದ ಸಾಹಿತ್ಯವೂ ದಲಿತ ಸಾಹಿತ್ಯ ಆಗುತ್ತದೆ.

'ಶ್ರೇಷ್ಟ ಸಾಹಿತ್ಯ' ಯಾವುದೆಂದರೆ ಅದು ಬದುಕಿನ ಮಧ್ಯದಿಂದ ಮೈದಾಳುವ ಜೀವನಾನುಭವ, ಇಂತಹ ಜೀವನಾನುಭವವನ್ನು ಓದುವ ಮೂಲಕ ಓದುಗ ಇಡೀ ಮನುಕುಲದ ಬದುಕಿನ ಸಮಗ್ರ ಅರ್ಥ ಪೂರ್ಣತೆಯನ್ನು ಗ್ರಹಿಸುತ್ತಾನೆ. ಅಕ್ಷರಸ್ಥ ಬರಹಗಾರನ ಶ್ರೇಷ್ಠ ಪರಂಪರೆಯೊಂದಿಗೆ ಎರಡು ಸಾವಿರ ವರ್ಷಗಳಿಂದಲೂ ದೇಸೀ ಸಾಹಿತ್ಯ, ಜಾನಪದದೊಂದಿಗೆ ಗುರುತಿಸಿಕೊಂಡ ಕೆಳವರ್ಗದ ಸಾಹಿತ್ಯವನ್ನು ಕಾಣಬಹುದಾಗಿದೆ.

ಉದಾ: ಎಂಟುನೂರು ವರ್ಷಗಳ ಹಿಂದಿನ ವಚನ ಸಾಹಿತ್ಯ.

೧೨ನೇ ಶತಮಾನದ ಹಿರಿಯರ ಹಿರಿಯ ಮಾದಾರ ಚೆನ್ನಯ್ಯ ಇಡೀ ಸಾಹಿತ್ಯ ಪರಂಪರೆ ಅದರಲ್ಲಿ ಕನ್ನಡ ಮತ್ತು ಇಡೀ ಭಾರತೀಯ ಪರಂಪರೆಯ ಮೂಲ ಕರ್ತೃಗಳು ನಿಮ್ಮ ವರ್ಗದವರು ಎಂದು ಹೇಳುವ ವಚನ;

ಸಾಂಖ್ಯಶ್ವಪಚ, ಅಗಸ್ತ್ಯ ಕಬ್ಬಿಲ
ದೂರ್ವಾಸ ಮೆಚ್ಚಿಗ, ದಧೀಚಿ ಕೀಲಿಗ
ಕಶ್ಯಪ ಕಮ್ಮಾರ, ರೋಮಜ ಕಂಚುಗಾರ
ಕೌಂಡಿಲ್ಲ ನಾವಿದನೆಂಬುದನರಿದು
ಮತ್ತೆ ಕುಲ ಉಂಟೆಂದು ಛಲಕ್ಕೆ ಹೊರಲೇತಕ್ಕೆ
ಇಂತಿ ಸಪ್ತ ಋಷಿಯರುಗಳೆಲ್ಲರೂ
ಸತ್ಯದಿಂದ ಮುಕ್ತರಾದುದನರಿಯದೆ
ಅಸತ್ಯದಲ್ಲಿ ನಡೆದು
ವಿಪ್ರರು ನೀವು ಘನವೆಂದು ಹೋರುವ
ಹೊತ್ತು ಹೋತರ ಮಾತೇಕೆ

– ಮಾದಾರ ಚೆನ್ನಯ್ಯ

ಇದರ ಜೊತೆಗೆ ವ್ಯಾಸ–ಬೆಸ್ತ, ವಾಲ್ಮೀಕಿ–ಬೇಡ, ಮಾರ್ಕಂಡೇಯ ಅಸ್ಪೃಶ್ಯ, ಇವರೆಲ್ಲರೂ ಅಕ್ಷರವಂಚಿತ ಕಾಯಕ ಜೀವಿಗಳು. ಹಾಗೆಯೇ ವಚನಕಾರರು; ದಾಸಮಯ್ಯ–ಜೇಡ, ಮಾಚಯ್ಯ–ಮಡಿವಾಳ, ಚೌಡಯ್ಯ–ಅಂಬಿಗ, ಹರಳಯ್ಯ–ದೂಳಯ್ಯ, ಚೆನ್ನಯ್ಯ ಅಸ್ಪೃಶ್ಯರು, ಕಣ್ಣಪ್ಪ–ಗಾಣಿಗ, ಅಲ್ಲಮಪ್ರಭು–ಸನಾದಿ ಹೀಗೆ ಹೆಸರಿಸುತ್ತಾ ಹೋದರೆ ಅಕ್ಕಮಹಾದೇವಿ, ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮ ಇವರನ್ನು ಬಿಟ್ಟರೆ ಉಳಿದವರೆಲ್ಲರೂ ದಲಿತರು ಮತ್ತು ಶೂದ್ರರು ಹಾಗೂ ಅನಕ್ಷರಸ್ಥರು. ವಚನ ಚಳುವಳಿಯ ನಂತರ ಅಂದರೆ ಮುನ್ನೂರು ವರ್ಷಗಳ ನಂತರ ಕಾಣಿಸಿಕೊಂಡ ಸರ್ವಜ್ಞ ಕೂಡ ಶೂದ್ರ. ಹೀಗೆ ಕನ್ನಡ ಸಾಹಿತ್ಯ ಚರಿತ್ರೆಯು ಗಾದೆ, ಒಗಟು, ನುಡಿಗಟ್ಟು ಮತ್ತು ಜಾನಪದದಿಂದ ಹಿಡಿದು ೧೯೨೦ರವರೆಗಿನ ನವ್ಯ ಸಾಹಿತ್ಯದವರೆಗೂ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದು ನಮ್ಮ ಅವಮಾನಿತ, ಅಕ್ಷರವಂಚಿತ, ಅನಕ್ಷರಸ್ಥ ಸಾಹಿತಿಗಳೇ.

೭೦ರ ನಂತರ ಆಸ್ಫೋಟಗೊಂಡ "ದಲಿತ ಸಾಹಿತ್ಯ" ಈ ಪರಂಪರೆಯ ಮುಂದುವರೆದ ಭಾಗವೇ ಆಗಿದೆ. ದಲಿತ ಚಳುವಳಿ ಮತ್ತು ಅದರ ಉತ್ಪನ್ನವಾದ ದಲಿತ ಸಾಹಿತ್ಯದ ಜನಕ ಬಾಬಾ ಸಾಹೇಬ ಅಂಬೇಡ್ಕರ್‌ರೆಂದರೆ ತಾಯಿ ಮಾತ್ರ ವಚನ ಚಳುವಳಿಯೇ ಆಗಿದೆ. ಒಂದೇ ವ್ಯತ್ಯಾಸವೆಂದರೆ ವಚನ ಚಳುವಳಿ ಅನಂತರ ಜಾತಿಯ ಮದುವೆಯ ಮೂಲಕ ಅಂತ್ಯಗೊಂಡರೆ, ದಲಿತ ಚಳುವಳಿ ಅಂತರ್‌ಜಾತಿಯ ಮದುವೆ ಪುನರಾಂಭದೊಂದಿಗೆ ಪ್ರಾರಂಭಗೊಂಡಿತು. ಕನ್ನಡ ಸಾಹಿತ್ಯದ ಮಟ್ಟಿಗೆ ಈ ವಚನಸಾಹಿತ್ಯ ಒಂದು ಅರ್ಥಪೂರ್ಣ ಘಟ್ಟ. ಇಡೀ ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಇಂಥದೊಂದು ಆಸ್ಫೋಟ ಅವಮಾನಿತರ ಒಡಲಿಂದ ರೂಪುಗೊಂಡ ಬೇರೊಂದು ಉದಾಹರಣೆ ಬೇರೆಲ್ಲಿಯೂ ಕಾಣಸಿಗುವುದಿಲ್ಲ. ವಿಶೇಷವೆಂದರೆ ಇಲ್ಲಿಯ ವಚನಕಾರರೂ ಕೂಡ ಅನಕ್ಷರಸ್ಥರು ಮತ್ತು ಇವರದು ಕೂಡ ಮೌಖಿಕ, ಅಲಿಖಿತ ಸಾಹಿತ್ಯ, ಇಂತಹ ಅನಕ್ಷರಸ್ಥ ವಚನಕಾರರ ವಚನಗಳಿಂದ ಪ್ರೇರಿತಗೊಂಡವನು ಬಸವಣ್ಣನವರು.

೧೯೨೦ರಿಂದ ೧೯೭೦ರ ವರೆಗಿನ ಈ ಕಾಲಘಟ್ಟದಲ್ಲಿ ದಕ್ಷಿಣ ಆಫ್ರಿಕಾದ ಕರಿಯ ಬಳಿಯ ಜನಾಂಗಿಕ ಸಮಸ್ಯೆ ಉತ್ತುಂಗದಲ್ಲಿತ್ತು. ದಕ್ಷಿಣ ಆಫ್ರಿಕಾದ ನಿಗ್ರೋ ಜನಾಂಗದ ಮತ್ತೊಬ್ಬ ಬಾಬಾ ಸಾಹೇಬ ಅಂಬೇಡ್ಕರ್‌ರಾದ ನೆಲ್ಸನ್ ಮಂಡೇಲಾ, ಬಿಳಿಯರ ದಬ್ಬಾಳಿಕೆ ವಿರುದ್ಧ ಸಿಡಿದು ಜೀವಾವಧಿ ಶಿಕ್ಷೆಗೆ ಒಳಗಾಗಿ ಸೆರೆಮನೆ ಸೇರಿದ, ಮಂಡೇಲಾರ ಸಮಾನತಾ ಚಳುವಳಿಗೆ ಮೂರು ದಶಕದ ವಿರೋಚಿತ ಚರಿತ್ರೆ ಇತ್ತು. ಈ ಚರಿತ್ರೆ ಸೃಷ್ಟಿಸಿದ ಬ್ಯಾಂಕ್ ಲಿಟರೇಚರ್ ಕಪ್ಪು, ಸಾಹಿತ್ಯ, ಇದೇ ಜಗತ್ತಿನ ಮೇಲೆ ವಿಶಿಷ್ಟ ಪ್ರಭಾವ ಉಂಟು ಮಾಡಿತು. ಚಾರಿತ್ರಿಕವಾಗಿ, ಭೌಗೋಳಿಕವಾಗಿ, ಆಫ್ರಿಕಾದ ನಿಗ್ರೋಗಳು ಒಂದು ರೀತಿಯಲ್ಲಿ ಭಾರತದ ದಲಿತರು. ಆಫ್ರಿಕಾದ ನಿಗ್ರೋಗಳು ಅಲ್ಲಿಯ ಮೂಲ ನಿವಾಸಿಗಳಾಗಿರುವಂತೆ ಇಲ್ಲಿಯ ದಲಿತರು ಭಾರತದ ಮೂಲ ನಿವಾಸಿಗಳು. ಹೀಗಾಗಿ ಆಫ್ರಿಕಾದ ಕಪ್ಪು ಸಾಹಿತ್ಯ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಇಲ್ಲಿಯ ದಲಿತ ಚಳುವಳಿ ಮತ್ತು ಸಾಹಿತ್ಯದ ಮೇಲೆ ಅಪಾರ ಪ್ರಭಾವ ಬೀರಿತು. ಈ ಪ್ರಭಾವವನ್ನು ೧೯೫೫ರಲ್ಲಿ ಸ್ಫೋಟಗೊಂಡ ಮಹಾರಾಷ್ಟ್ರದ ಪ್ಯಾಂತರ್ಸ್ ಚಳುವಳಿಯಲ್ಲಿ ನೋಡಬಹುದು. ದಲಿತ ಪ್ಯಾಂಥರ್ಸ್ ಎಂದು ಹೆಸರು ಬಂದಿದ್ದೆ ಕಪ್ಪು ಪ್ಯಾಂಥರ್ಸ್ ಹಿನ್ನೆಲೆಯಲ್ಲಿ ಅನಂತರ ಆಂಧ್ರದ ದಿಗಂಬರ ಸಾಹಿತ್ಯ ಮತ್ತು ಗೇರಿಲ್ಲಾ ಸಾಹಿತ್ಯದಲ್ಲೂ ಕೂಡ ಈ ಪ್ರಭಾವವನ್ನು ನಾವು ಗಮನಿಸಬಹುದು. ಚರಬಂಡರಾಜು, ಶ್ರೀಶ್ರೀ, ನಗ್ನಮುನಿ ಮುಂತಾದ ದಲಿತ ಕವಿಗಳು ಆಂಧ್ರದ ದಲಿತ ಚಳುವಳಿಯ ಉತ್ಪನ್ನಗಳು.

೧೯-೨೦ನೇ ಶತಮಾನದಲ್ಲಿನ ನವೋದಯ, ನವ್ಯ, ಪ್ರಗತಿಶೀಲರ ಕನ್ನಡ ಸಾಹಿತ್ಯ ಪರಂಪರೆಯೊಂದಿಗಿನ ಸಂವಾದಕ್ಕೂ ದಲಿತ ಬಂಡಾಯದವರ ಸಂವಾದಕ್ಕೂ ಕ್ರಾಂತಿಕಾರಕ ರೀತಿಯ ವ್ಯತ್ಯಾಸಗಳಿವೆ. ಪರಂಪರೆ ಅಂದಕೂಡಲೆ ನಾವು ಶಿಷ್ಟ ಪರಂಪರೆಯೊಂದನ್ನೇ ನಮ್ಮ ಪರಂಪರೆಯೆಂದು ಆತುರದಿಂದ ವಿಮರ್ಶೆಗೆ ತೊಡಗುತ್ತೇವೆ. ಶಿಷ್ಟ ಪರಂಪರೆಗೆ ವಿರುದ್ಧವಾದ ಪರಿಶಿಷ್ಟ ಪರಂಪರೆಯೊಂದು ಲಿಖಿತ ಕಾವ್ಯಕ್ಕೆ ಸಮಾನಾಂತರವಾಗಿ ಮೌಖಿಕವಾಗಿ ಕಾಲ

ಪ್ರವಾಹದಲ್ಲಿ ಸಾಗಿ ಬಂದಿರುವುದನ್ನು- ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇದು ಉಪಸಂಸ್ಕೃತಿಗಳ ಒಂದು ಅನನ್ಯಲೋಕ. ಲಿಖಿತ ಕಾವ್ಯ ತನ್ನ ಒಳಕ್ಕೆ ಬರಮಾಡಿಕೊಳ್ಳುಲೊಪ್ಪದ ಎಲ್ಲಾ ಸಂವೇದನೆಗಳು, ವಿಚಾರಗಳು ಮೌಖಿಕ ಪರಂಪರೆಯಲ್ಲಿ ವಿಜೃಂಭಿಸಿವೆ. ದಲಿತರು ಆಶಾವಾದದಿಂದ ಎದುರು ನೋಡುವ ಪರಂಪರೆ ಇದು. ಮಂಟೇಸ್ವಾಮಿ, ಮಲೆಯ ಮಾದೇಶ್ವರ, ಮರುಳ ಸಿದ್ಧ, ಎತ್ತಪ್ಪ ಜಂಜಪ್ಪ, ಬಕಾಲ, ಧಕ್ಕಾ ಇತ್ಯಾದಿ ಉಪೇಕ್ಷಿತ ಜಾತಿಯ ನಾಯಕರೆಲ್ಲಾ ವಿಜೃಂಭಿಸುವ ಕಾವ್ಯವಿದು. ಕನ್ನಡ ಸಾಹಿತ್ಯ ಅಂದಾಗ ನಾವು ಇದನ್ನು ಸಾಹಿತ್ಯ ಎಂದು ಎದುರುಗೊಂಡಾಗ ದಲಿತರಿಗೊಂದು ದೊಡ್ಡ ಪರಂಪರೆ ಗುಪ್ತಗಾಮಿನಿಯಾಗಿ ಹರಿದುಬಂದಿರುವುದು ಗಮನಕ್ಕೆ ಬರುತ್ತದೆ.

ಸಾಹಿತ್ಯ ಚಳುವಳಿಗಳು ಮತ್ತು ಕಾಲಮಾನದ ಬದಲಾವಣೆಗಳು ಕನ್ನಡ ಆತ್ಮಕತೆಗಳ ದಿಕ್ಕನ್ನು ಅದರಲ್ಲೂ ದಲಿತ ಆತ್ಮಕತೆಗಳು ನಿಸ್ಸಂಶಯವಾಗಿ ಪರಿವರ್ತಿಸಿವೆ. ಅದರಲ್ಲೂ ನವೋದಯ ಸಂದರ್ಭದ ಆತ್ಮಕತೆಗಳು ಪಡೆದ ಪಡೆಯುತ್ತಿದ್ದ ಸ್ಥಾನಮಾನಗಳು ಪ್ರಗತಿಶೀಲ ಸಂದರ್ಭದಲ್ಲಿ ಸ್ವಲ್ಪ ವ್ಯತ್ಯಾಸಗೊಂಡಿತು.

ದಲಿತ ಸಾಹಿತ್ಯ ಸಂದರ್ಭದಲ್ಲಿ ಆತ್ಮಕತೆಯ ಪರಿಕಲ್ಪನೆಯ ನೆಲೆ ಬೆಲೆಗಳನ್ನು ನಿರ್ಧರಿಸುವ ಸಂದರ್ಭದಲ್ಲಿ ಪ್ರಮುಖ ಮಾನದಂಡವಾಗಿದ್ದು, ದಲಿತರು ಗ್ರಹಿಸಿದ ಮತ್ತು ಸೃಜಿಸಿದ ರೀತಿಯ ನವೋದಯ ಪ್ರಗತಿಶೀಲ ಮತ್ತು ನವ್ಯ ಬರಹಗಾರರಿಗಿಂತ ಭಿನ್ನವಾಯಿತು. ದಲಿತರಿಗೆ ಕಾಲದ ಪರಿಸರ ಕೂಡ ಇವರ ಜರೂರುತನಕ್ಕೆ ಸಹಾಯ ಮಾಡಿತು.

ಸಿದ್ಧಲಿಂಗಯ್ಯ ಅವರ ಬಹುತೇಕ ಬರಹಗಳು ತುರ್ತಿನ ರೀತಿಯನ್ನು ಆಧರಿಸಿಯೇ ಬಂದಂತವೆಂಬುದನ್ನು ಗಮನಿಸಿದಾಗ ಈ ವಿಚಾರ ಹೆಚ್ಚು ಸ್ಪಷ್ಟವಾಗುತ್ತದೆ.

ಕನ್ನಡ ದಲಿತ ಆತ್ಮಕತೆಗಳ ಹುಟ್ಟಿಗೆ ಮರಾಠಿ ದಲಿತ ಆತ್ಮಕತೆಗಳು ಹೆಚ್ಚು ಪ್ರೇರಣೆ ಮತ್ತು ಪ್ರಭಾವವನ್ನು ನೀಡಿವೆ. ಅಂದರೆ ಮರಾಠಿಯಲ್ಲಿ ಬಂದಂತಹ ಆತ್ಮಕತೆಗಳು ಕನ್ನಡಕ್ಕೆ ಅನುವಾದಗೊಂಡ ಮೇಲೆ ಅವುಗಳನ್ನು ಕನ್ನಡ ಲೇಖಕರು ಓದಿದ ನಂತರದಲ್ಲಿ ತಾವು ಬರೆಯಬೇಕೆಂಬ ಹಂಬಲ ಹೊತ್ತು ಬರೆಯತೊಡಗಿದರು. ಆದರೆ ಮರಾಠಿಯಲ್ಲಿ ಆದ ಬಿರುಸಿನ ಬರವಣಿಗೆ ಕನ್ನಡ ದಲಿತ ಸಂದರ್ಭದಲ್ಲಿ ಬರಲಿಲ್ಲ.

ದಲಿತ ಸಾಹಿತ್ಯ ಸಂದರ್ಭದಲ್ಲಿ ಕನ್ನಡದ ಮೊದಲ ಆತ್ಮಕತೆ ಡಾ.ಅರವಿಂದ ಮಾಲಗತ್ತಿ ಅವರ 'ಗೌರ್ನಮೆಂಟ್ ಬ್ರಾಹ್ಮಣ' ಇದು ಎಂಭತ್ತರ ದಶಕದಲ್ಲಿ ಕನ್ನಡ ದಲಿತ ಸಾಹಿತ್ಯ ಸಂದರ್ಭದ ಮೊದಲ ಆತ್ಮಕತೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಪ್ರಾರಂಭದ ಘಟ್ಟದಲ್ಲಿ ಹಲವಾರು ಟೀಕೆಗಳಿಗೆ ಈ ದಲಿತ ಆತ್ಮಕತೆ ಒಳಗಾಯಿತು. ಅಂದಿನ ವರೆಗೆ ಇದ್ದ ಆತ್ಮಕತೆಗಳ ಹರವು ಬದಲಾಯಿತು. ಹೇಗೆಂದರೆ ಮುಪ್ಪಿನ ಸಂದರ್ಭದಲ್ಲಿ ಮನಸ್ಸು ಮಾಗಿದ ಸಂದರ್ಭದಲ್ಲಿ

ಆತ್ಮಕತೆ ಬರೆಯುವ ಜಾಯಮಾನಕ್ಕೆ ಕನ್ನಡ ಲೇಖಕರು ಒಳಗಾಗಿರುವುದನ್ನು ನಾವು ನವೋದಯದಿಂದ ಹಿಡಿದು ನವ್ಯ ಸಾಹಿತ್ಯದವರೆಗಿನ ಕಾಲಘಟ್ಟದಲ್ಲಿ ಕಾಣಬಹುದು.

ಕನ್ನಡ ದಲಿತ ಸಾಹಿತ್ಯ ಸಂದರ್ಭದಲ್ಲಿ ಮಾಲಗತ್ತಿ ಅವರ ಆತ್ಮಕತೆ ಇಡೀ ಹರವನ್ನು ದೊಡ್ಡದಾಗಿಸಿ ನಿಂತು ಹಲವು ರೀತಿಯ ವಿಮರ್ಶೆಗೆ ಒಳಗಾಯಿತು. ಹಾಗೆಯೇ ಸಿದ್ದಲಿಂಗಯ್ಯನವರು 'ಊರುಕೇರಿ' ಆತ್ಮಕತೆಯನ್ನು ಬರೆದರು. ಅರವಿಂದ ಮಾಲಗತ್ತಿ ಅವರಿಗಿಂತ ಭಿನ್ನವಾದ ನೆಲೆಯಲ್ಲಿ ಈ ಕೃತಿ ಹೊರಬಂತು. ಮತ್ತೆ ತುಂಬಾಡಿ ರಾಮಯ್ಯನವರ 'ಮಣೆಗಾರ' ಇದೂ ಸಹ ಒಂದು ವಿಸಿಷ್ಟ್ಯತೆಯನ್ನು ಸಾಧಿಸಿಕೊಂಡು ಕನ್ನಡ ಸಾಹಿತ್ಯವನ್ನು ಪ್ರವೇಶಿಸಿತು. ಮತ್ತೊಂದು ಆತ್ಮಕತೆ ಕೆ.ಗೋವಿಂದ ರಾಜ್ ಅವರ 'ಮನವಿಲ್ಲದವರ ಮಧ್ಯೆ' ಪ್ರಕಟವಾಯಿತು. ಆದರೆ ಮರಾಠೀ ಸಾಹಿತ್ಯದಲ್ಲಿ ಸಾಧಿಸಿದ ವೇಗದ ಗತಿಯು ಕನ್ನಡ ದಲಿತ ಸಾಹಿತ್ಯ ಸಂದರ್ಭದಲ್ಲಿ ಬರಲಿಲ್ಲ.

ನನ್ನ ಅಧ್ಯಯನ ಕಕ್ಷೆಯಲ್ಲಿರುವ ಎರಡು ಆತ್ಮಕತೆಯನ್ನು ಕುರಿತು ಹೇಳುವುದಾದರೆ ಇವು ಬಂದಾಗ ಅಂದಿನ ಓದುಗರ ಮತ್ತು ವಿಮರ್ಶಕರ ಮೆಚ್ಚುಗೆಗೆ ಪಾತ್ರವಾದವು. ಇದರಲ್ಲಿ ಮೊದಲ ಅಧ್ಯಾಯದಲ್ಲಿ ಕನ್ನಡ ಆತ್ಮಕತೆಗಳಲ್ಲಿ ದಲಿತ ಆತ್ಮಕತೆಗಳ ಸ್ಥಾನವನ್ನು ಸ್ಥೂಲವಾಗಿ ವಿವರಿಸಲಾಗಿದೆ. ದಲಿತ ಸಾಹಿತ್ಯ ಸಂದರ್ಭದಲ್ಲಿ ಬಂದಂತಹ ಆತ್ಮಕತೆಗಳು ಭಿನ್ನತೆಯಲ್ಲಿ ವಿಶಿಷ್ಟತೆಯನ್ನು ಕಂಡುಕೊಂಡಿರುವುದನ್ನು ಗುರುತಿಸಬಹುದು. ದಲಿತ ಸಾಹಿತ್ಯ ಸಂದರ್ಭದಲ್ಲಿ ನಡೆದ ಒಗ್ಗಟ್ಟಿನ ವೇದಿಕೆ ನಿರ್ಮಾಣವಾಗಲೀ ಅವರ ಒಡಕು ಜಗಳವಾಗಲಿ ಅವರ ಆತ್ಮಕತೆಗಳ ವಸ್ತು ರೀತಿಗಳ ಮೇಲೆ ಬೀರಿದ ಪರಿಣಾಮವನ್ನು ನೋಡಿದರೆ ಆಗಬೇಕಾದಷ್ಟು ಪರಿವರ್ತನೆ ಆಗಲಿಲ್ಲವೆಂದೆ ಹೇಳಬೇಕಾಗಿದೆ. ಆದರೆ ದಲಿತ ಸಾಹಿತ್ಯ ಸಂದರ್ಭದಲ್ಲಿ ಆತ್ಮಕತೆಗಳು ಪ್ರಮುಖ ಮಾಧ್ಯಮವಾಗಿಯೇನು ಇರಲಿಲ್ಲ. ಆದರೆ ದಲಿತ ಸಾಹಿತ್ಯ ಸಂದರ್ಭದಲ್ಲಿ ಕಾವ್ಯ, ಕತೆ, ನಾಟಕ ಮುಂತಾದವುಗಳು ಬೀರಿದ ಪರಿಣಾಮವನ್ನು ದಲಿತರಲ್ಲಿ ವಿಶಿಷ್ಟತೆಯ ಛಾಪನ್ನು ಮೂಡಿಸುವಲ್ಲಿ ದಲಿತ ಆತ್ಮಕತೆಗಳು ಯಶಸ್ವಿಯಾಗಿವೆ.

ಇಂದಿನ ಕಾಲದ ದೃಷ್ಟಿ ಧೋರಣೆಗಳಿಗೆ ಒಗ್ಗುವಂತೆ ಅಂದಿನ ಸಮಾಜದ ಸ್ಥಿತಿಯನ್ನು ಅನಾವರಣ ಮಾಡುವುದು ಅನಿವಾರ್ಯವಾಗಿ ದಲಿತ ಆತ್ಮಕತೆಗಳ ಸ್ವರೂಪ ಬದಲಾಯಿತು. ಇಡೀ ಸಮೂಹ ಪ್ರಜ್ಞೆ ಮೂಡಿಸಲು ಈ ಪ್ರಕಾರ ಸರಿಯೆಂದು ತೋರಿದ ಕಾರಣ ಇಂದಿನ ದಲಿತ ಸಮುದಾಯ ಆತ್ಮಕತೆಗಳನ್ನು ಒಪ್ಪಿ ಬರೆಯುವ ನಿಟ್ಟಿನಲ್ಲಿ ಸಾಗುತ್ತಿದೆ.

ದಲಿತ ಸಾಹಿತ್ಯ ಸಂದರ್ಭದಲ್ಲಿ ಕಾವ್ಯ, ಕತೆಗಳು ಮಾಡಿದಷ್ಟು ಕ್ರಾಂತಿಯನ್ನು ಇಂದಿನ ದಲಿತ ಆತ್ಮಕತೆಗಳು ಸೌಮ್ಯವಾದ ರೀತಿಯಲ್ಲಿ ಹೇಳಲು ಹೊರಟಿವೆ. ಆದರೆ ಇವುಗಳಲ್ಲಿ ಬಾಲ್ಯದ ಅನುಭವಗಳಿಗೆ ಹೆಚ್ಚು ಒತ್ತನ್ನು ಕೊಟ್ಟಿರುತ್ತವೆ. ಆದ್ದರಿಂದ ರೊಚ್ಚು, ಆವೇಶಗಳು ಬರುವುದಿಲ್ಲ. ಇವು ತಮ್ಮ ವಿಶಾಲ ಹೃದಯದ ವ್ಯಕ್ತಿತ್ವವನ್ನು ಅನಾವರಣ ಮಾಡಿವೆ.

ಸಿದ್ಧಲಿಂಗಯ್ಯ ಅವರ 'ಊರುಕೇರಿ' ಮತ್ತು ತುಂಬಾಡಿ ರಾಮಯ್ಯ ಅವರ 'ಮಣೆಗಾರ' ತಮ್ಮ ಸುತ್ತಲಿನ ಪರಿಸರದೊಂದಿಗೆ ಅಂದಿನ ಸಮಾಜದ ಅಮಾನವೀಯ ಅಂಶಗಳನ್ನು ತೆರೆದಿಡುತ್ತವೆ.

ದಲಿತ ಸಾಹಿತ್ಯದ ಆತ್ಮಕತೆಗಳು ಮಾನವತಾವಾದ, ಸಮಾನತೆ, ಜನಪರ ಕಾಳಜಿಗಳನ್ನು ಎತ್ತಿ ಹಿಡಿಯುತ್ತವೆಂಬುದು ನಿಜ. ಆದರೆ ಆತ್ಮಕತೆಗಳು ಮಾತ್ರ ಅದು ಗಟ್ಟಿಯಾದ ಅನುಭವ ಮತ್ತು ಸಮೂಹ ಪ್ರಜ್ಞೆಯನ್ನು ಮೂಡಿಸುತ್ತವೆ.

ದಲಿತರ ನೋವು ಸಂಕಷ್ಟದ ಸ್ಥಿತಿಯನ್ನು ಹೇಳುವ ಮತ್ತು ಆಶಯಗಳ ಚಿತ್ರಣವನ್ನು ನಮ್ಮ ಮುಂದೆ ನೆಲೆಗೊಳಿಸುತ್ತಾರೆ. ಇವರು ಸಾಮಾಜಿಕ ಸಮಸ್ಯೆಗಳು ಮತ್ತು ಅದರ ಜೊತೆಗೆ ಪ್ರತಿಭೆಯ ಸ್ಥಿತಿಯನ್ನು ಅನಾವರಣ ಮಾಡಿ ಈ ಆತ್ಮಕತೆಗಳು ಸಮುದಾಯಕ್ಕೆ ತೋರಿಸುತ್ತವೆ. ಅಂದರೆ ಅಂದಿನ ಕಾಲದಲ್ಲಿ ಜ್ಞಾನ ದಲಿತವರ್ಗದವರಿಗೆ ಇರಲಿಲ್ಲ. ಕಾಲಕಳೆದಂತೆ ಬದಲಾಯಿತು. ಇದಕ್ಕೆ ತಾಳ ಹಾಕುವಂತೆ ಆ ಕಾಲದ ಪರಿಸರವೂ ಇಂಥದನ್ನು ಬಗೆಹರಿಸಿಕೊಂಡು ಬರೆಯುವ ಸವಾಲನ್ನು ತರಲಿಲ್ಲ. ಆದರೆ ದಲಿತ ಸಾಹಿತ್ಯ ವೈಯಕ್ತಿಕತೆಯಲ್ಲಿ ಸಮಷ್ಟಿಯ ನೆಲೆಯನ್ನು ತೋರಿಸಲು ಪ್ರಯತ್ನಿಸಿದರು.

ದಲಿತ ಸಾಹಿತ್ಯದಲ್ಲಿ ಆತ್ಮಕತೆಯ ಪ್ರಕಾರ ಬಂದ ನಂತರ ವೈಯಕ್ತಿಕತೆ, ಸಮುದಾಯದ ನೋವು, ಕಷ್ಟ, ಶೋಷಣೆ, ಜಾತೀಯತೆ, ನಂಬಿಕೆ, ಹೋರಾಟಗಳ ಬಗ್ಗೆ ಈ 'ಊರುಕೇರಿ' ಮತ್ತು 'ಮಣೆಗಾರ' ಆತ್ಮಕಥನಕಾರರು ಸೌಮ್ಯದ ನೆಲೆಯಲ್ಲಿ ಇಡೀ ಸಮೂಹವನ್ನು ಬಡಿದೆಬ್ಬಿಸಿದ್ದಾರೆ.

ಸಿದ್ಧಲಿಂಗಯ್ಯನವರ ಆತ್ಮಕತೆ ಸಾಮಾಜಿಕ ಸಮಸ್ಯೆಗಳು ಮತ್ತು ವ್ಯಕ್ತಿಯ ಅಂತರಂಗದ ಸಮಸ್ಯೆ ಇವೆರಡು ಅಲ್ಲದೇ ಸಮೂಹ ಪ್ರಜ್ಞೆಯನ್ನು ಪ್ರಮುಖವಾಗಿ ಅನಾವರಣಗೊಳಿಸಿದೆ. ಆದರೆ ಬಡತನ, ಹಸಿವು, ಶೋಷಿತ ಸಮುದಾಯವನ್ನು ಕೆರಳಿಸುವುದರಲ್ಲಿ ಯಶಸ್ಸನ್ನು ಪಡೆದಿದೆ. ಇವರು ಗಂಭೀರವಾದ ಆಶಯಗಳನ್ನು ತಮ್ಮ ಆತ್ಮಕತೆಯನ್ನು ಹೇಳುವ ಸಂದರ್ಭದಲ್ಲಿ ಮಡುಗಟ್ಟಿಸಿರುವುದನ್ನು ನಾವು ಗುರುತಿಸಬಹುದು. ಇಲ್ಲಿರುವ ಒಂದೊಂದು ಪ್ರಸಂಗಗಳೂ ಒಂದೊಂದು ಕಾದಂಬರಿಯಾಗುವ ವಿಸ್ತಾರದ ಆಳವನ್ನು ಹೊಂದಿವೆ. ಶೋಷಣೆಯ ವಿರುದ್ಧದ ಪ್ರತಿಕ್ರಿಯೆ ತನ್ನಣ್ಣ ರಾಜಕಾರಣದಿಂದ ದಲಿತರು ಮೇಲೆ ಬರಲು ಸಾಧ್ಯವೆಂಬುದನ್ನು ನಾವು ಈ ಆತ್ಮಕತೆಯಲ್ಲಿ ಗುರುತಿಸಬಹುದಾಗಿದೆ. ಇದು ದಲಿತನೊಬ್ಬನ ಆತ್ಮಕತೆಯಲ್ಲಿ ಇಡೀ ದಲಿತ ಜನಾಂಗದ ಶೋಷಿತ ಸಮೂಹದ ಆತ್ಮಕತೆಯಾಗಿಯೂ ನಿಲ್ಲುತ್ತದೆ.

[illegible]
[illegible]
[illegible]
[illegible]
[illegible]
[illegible]

ರಚಿಸಿದ [illegible]
[illegible]
[illegible]
[illegible]
[illegible]

[illegible]
[illegible]
[illegible]
[illegible]

ತುಂಬಾಡಿ ರಾಮಯ್ಯ ಅವರ ಆತ್ಮಕತೆಯು ಇಡೀ ದಲಿತ ಸಮೂಹದ ಗ್ರಾಮೀಣ ಪರಿಸರದಲ್ಲಿ ದಲಿತರು ಇಂದಿಗೂ ಯಾವ ರೀತಿ ಶೋಷಣೆಗೆ ಒಳಗಾಗಿದದಾರೆ ಮತ್ತು ಅವರನ್ನು ಸಮಾಜ ನೋಡುವ ರೀತಿಯನ್ನು ತಿಳಿಯಬಹುದು. ಸಾಹಿತ್ಯವನ್ನು ಬಲ್ಲವನು ಬರೆಯುವ ವ್ಯಕ್ತಿಗೂ, ಸಾಹಿತ್ಯವನ್ನು ತಿಳಿದ ವ್ಯಕ್ತಿಯಾದ ರಾಮಯ್ಯ ಅವರು ಪರಿಚಿತರೆನಲ್ಲ ಅಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಎಲ್ಲರಿಗಿಂತ ಭಿನ್ನವಾದ ರೀತಿಯಲ್ಲಿ ತನ್ನ ಆತ್ಮಕತೆಯನ್ನು ಹೇಳುವಲ್ಲಿ ವಿಶಿಷ್ಟವಾಗಿ ಕಾಣಿಸಿಕೊಂಡಿದ್ದಾರೆ. ರಾಮಯ್ಯ ಅವರ ಹೃದಯ ವಿಶಾಲವಾದುದು; ಸಂಯಮದ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾರೆ. ಇತರ ದಲಿತ ಆತ್ಮಕತೆಗಳು ಸಾಧಿಸದೇ ಇರುವುದನ್ನು ಇವರು ತಮ್ಮ ಚಿತ್ರಕ ಶಕ್ತಿಯಿಂದ ನಮಗೆ ವಿಶಿಷ್ಟರಾಗುತ್ತಾರೆ.

ಆ ಕಾಲಕ್ಕೂ ಈ ಕಾಲಕ್ಕೂ ಕಡುವಾಸ್ತವಗಳೆನಿಸಿದ ವರ್ಗವೈರುಧ್ಯಗಳು ದಲಿತರ ಆತ್ಮಕತೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿಯೇ ವ್ಯಕ್ತವಾಗಿದೆ. ಮೇಲುನೋಟಕ್ಕೆ ಕಾಣಿಸುವ ವರ್ಗ, ವರ್ಣ, ಜಾತೀಯತೆ, ಅಸ್ಪೃಶ್ಯತೆ, ಶೋಷಣೆಯನ್ನು ಈ ಇಬ್ಬರು ಆತ್ಮಕಥನಕಾರರು ದಾಖಲಿಸಿದ್ದಾರೆ. ಈ ಅಸಮಾನತೆ ನಿರ್ನಾಮವಾಗಿ ಶೋಷಿತ ವರ್ಗ ಕಳಕೊಂಡ ಎಲ್ಲ ಸೌಲಭ್ಯ ತೃಪ್ತಿಗಳನ್ನು ಪಡೆಯುವ ತನಕ ಸಮಾಜದಲ್ಲಿ ಕ್ರಾಂತಿ ಹಸಿರಾಗಿರುತ್ತದೆಂಬ ಭಾವನೆ ದಲಿತ ಸಾಹಿತ್ಯದ ಲೇಖಕರದು.

ಈ ನಿಟ್ಟನಲ್ಲಿ ಬಂದ ಬರಹಗಳು ಶೋಷಿತರ ಪರವಾದ ಧನಿಯಲ್ಲೇ ಅಭಿವ್ಯಕ್ತವಾಗಿದ್ದು, ಡಾಳಾದ ವೈದೃಶ್ಯಗಳ ಮೂಲಕ ವಾಸ್ತವತೆಯನ್ನು ವಿಜೃಂಭಿಸುವಂತೆ ಚಿತ್ರಿಸಿವೆ. ಒಟ್ಟಾರೆ ಸಾಮಾಜಿಕ ಆಶಯಗಳಿಗೆ ಈ ಲೇಖಕರ ಆತ್ಮಕತೆಗಳು ಸ್ಪಂದಿಸಿದ ಬಗೆ ಆ ಕಾಲದ ತುರ್ತುಗಳನ್ನು ಹೇಳುವುದರೊಳಗೆ ವಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧದ ಸ್ವರೂಪವನ್ನು ಸೂಕ್ಷ್ಮವಾಗಿ ಚಿತ್ರಿಸುತ್ತವೆ.

ಗ್ರಂಥಋಣ

೧. ದಲಿತ ಸಾಹಿತ್ಯ ಪ್ರವೇಶಿಕೆ : ಡಾ.ಅರವಿಂದ ಮಾಲಗತ್ತಿ
ಪ್ರಕಾಶಕರು : ಶೈಲ ಪ್ರಕಾಶನ
ನೇತಾಜಿ ರಸ್ತೆ, ಮುದ್ದೇಬಿಹಾಳ
೧೯೯೭

೨. ಬಂಡಾಯ ದಲಿತ ಸಾಹಿತ್ಯ : ಡಾ.ಪುರುಷೋತ್ತಮ ಬಿಳಿಮಲೆ
ಪ್ರಕಾಶಕರು : ಬಿ.ಎನ್.ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು, ೧೯೯೦.

೩. ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು : ದೇವಯ್ಯ ಹರವೆ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು, ೧೯೯೧.

೪. ಕನ್ನಡ ದಲಿತ ಸಾಹಿತ್ಯ : ಸಂಪಾದಕರು : ಡಾ. ಅರ್ಜುನ ಗೊಳಸಂಗಿ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು, ೨೦೦೩.

೫. ದಲಿತ ಮಾರ್ಗ : ಸಂಪಾದಕರು : ಡಾ. ಅರವಿಂದ ಮಾಲಗತ್ತಿ

೬. ಲಂಕೇಶ್ ಪತ್ರಿಕೆ : ಮಾರ್ಚ್ ೨೨, ೨೦೦೦.

೭. ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ : ಲೇಖಕರು: ಡಾ.ಎನ್.ಕೆ. ಕೋದಂಡರಾಮ
ಪ್ರಕಾಶಕರು: ಗಾಯಿತ್ರಿ ಸ್ಮಾರಕ ಗ್ರಂಥಮಾಲೆ
ದಾರಿದೀಪ ಶಿಕ್ಷಣ ಟ್ರಸ್ಟ್, ಬೋಗಾದಿ
ಮೈಸೂರು, ೧೯೯೬.

೮. ಗೌರ್ಮೆಂಟ್ ಬ್ರಾಹ್ಮಣ : ಡಾ. ಅರವಿಂದ ಮಾಲಗತ್ತಿ
ಅಭಿರುಚಿ ಪ್ರಕಾಶನ
ಸರಸ್ವತಿಪುರಂ, ಮೈಸೂರು, ೧೯೯೪.

೯. 'ಊರುಕೇರಿ' : ಡಾ. ಸಿದ್ಧಲಿಂಗಯ್ಯ
ಪ್ರಕಾಶಕರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು, ೨೦೦೩.

೧೦. 'ಮಣೆಗಾರ' : ತುಂಬಾಡಿ ರಾಮಯ್ಯ

೧೧. ಆತ್ಮಕತೆಗಳಲ್ಲಿ ಕರ್ನಾಟಕದ ಕತೆ: ಬಿ.ಎಂ. ಪುಟ್ಟಯ್ಯ

೧೨. ದಲಿತ ಆತ್ಮಕಥೆಗಳು : ಡಾ. ನೀಲಗಿರಿ ತಳವಾರ್
ಕನ್ನಡ ದಲಿತ ಸಾಹಿತ್ಯ
ಸಂಪಾದಕರು: ಡಾ. ಅರ್ಜುನ ಗೊಳಸಂಗಿ

೧೩. ಬಡವರ ನಗುವಿನ ಶಕ್ತಿ : ಸಂಪಾದಕರು: ಎಚ್.ದಂಡಪ್ಪ